॥ ಪ್ರಸೀದತು ಶ್ರೀ ವೀರಾಂಜನೇಯಃ ॥

# ಹೇಮಪುರ

ಶ್ರೀಕ್ಷೇತ್ರ ಬಂಗಾರಮಕ್ಕಿಯಿಂದ ಹೊರಬರುವ ಧಾರ್ಮಿಕ,
ಪಾರಮಾರ್ಥಿಕ, ನೈತಿಕ ಹಾಗೂ ಲೋಕ ಹಿತಚಿಂತನೆಗಳ ಮಾಸಪತ್ರಿಕೆ

# HEMAPURA

**Shri Kshethra Bangaramakki**
**Post Gerasoppa - 581 384**
**Honnavara Taluk, Uttara Kannada Dist.**

ಗೌರವ ಸಂಪಾದಕರು:
**ಪ.ಪೂ. ಶ್ರೀ ಮಾರುತಿ ಗುರೂಜಿಯವರು**
ಧರ್ಮಾಧಿಕಾರಿಗಳು
ಶ್ರೀಕ್ಷೇತ್ರ ಬಂಗಾರಮಕ್ಕಿ

ಸಂಪಾದಕರು:
**ತೇಜಸ್ವಿ**

ಸಲಹೆಗಾರರು:
**ಶ್ರೀ ರಾಮಚಂದ್ರ ಭಟ್ಟರು, ಶ್ರೀಕ್ಷೇತ್ರ ಬಂಗಾರಮಕ್ಕಿ**
**ಶ್ರೀ ರವೀಶ, ವಕೀಲರು, ಸಾಗರ**
**ಶ್ರೀ ನಾಗರಾಜ್ ನಾಯಕ್, ವಕೀಲರು, ಕಾರವಾರ**
**ಶ್ರೀ ನಾಗರಾಜ್ ಶೇಟ್, ಶಿರಸಿ**
**ಶ್ರೀ ಭೋಗಾನಂದ, ಶಿವಮೊಗ್ಗ**
**ಶ್ರೀ ಪ್ರವೀಣ್, ಬೆಂಗಳೂರು**
**ಶ್ರೀ ಜಿ.ಎಚ್. ನಾಯ್ಕ್, ಹೊನ್ನಾವರ**
**ಶ್ರೀ ಕೆ. ಮನೋಹರ್, ಬೆಂಗಳೂರು**
**ಶ್ರೀ ಡಿ.ಎಂ. ಸತೀಶ್, ತುಮಕೂರು**

ವಿನ್ಯಾಸ, ಅಕ್ಷರ ಜೋಡಣೆ ಮತ್ತು ಸಲಹೆಗಾರರು:
**ಶ್ರೀ ವೀರಾಂಜನೇಯ ಪ್ರಕಾಶನ**
ಶ್ರೀಕ್ಷೇತ್ರ ಬಂಗಾರಮಕ್ಕಿ, ಪೋ: ಗೇರಸೊಪ್ಪಾ-581 384.
ತಾ: ಹೊನ್ನಾವರ, ಉತ್ತರ ಕನ್ನಡ ಜಿಲ್ಲೆ.
ದೂ: 08387-268544, 268333, 268545

ಮುದ್ರಕರು:
**ಸಾಯಿನಾಥ ಗ್ರಾಫಿಕ್ಸ್, ಬೆಂಗಳೂರು**

## ಒಳಪುಟಗಳಲ್ಲಿ

ಸಚ್ಚಿಂತನ ........ 2
ಸಂಪಾದಕೀಯ ........ 3
ಯಶಸ್ವೀ ಬದುಕಿನ ಮಾರ್ಗಮಿಂಚು ........ 4
ಮಧುರ ಪ್ರಕಾಶನದ ಸೌಜನ್ಯದೊಂದಿಗೆ ........ 5
ಶ್ರೀಧರ ಸ್ಮರಣೆ ........ 8
ಶ್ರೀರಾಮ ಕಥಾಸಾರ ........ 9
ಸಂಪ್ರದಾಯ ........ 10
ಪರಮೇಶ್ವರನ ಇಪ್ಪತ್ತೈದು ಲೀಲೆಗಳು ........ 10
ಮಹಾಕ್ಷತ್ರಿಯ ........ 11
ಬದುಕಲೊಂದಿಷ್ಟು ಆಪ್ತಮಾತುಗಳು ........ 14
ಧರೆಗಿಳಿದ ದಿವ್ಯತೇಜ ........ 15
ಕಗ್ಗದ ಬೆಳಕಿನಲ್ಲಿ ........ 17
ಆನೋ ಭದ್ರಾಃ ಕೃತವೋಯಂತು ವಿಶ್ವಥಃ ........ 19
ವಚನಭಾಗವತ ........ 20
ಜಾತ್ರಾಮಹೋತ್ಸವದ ವರದಿ ........ 21
ಸುಂದರಕಾಂಡದ ಸೌಂದರ್ಯ ........ 22
ಮಲೆನಾಡ ಉತ್ಸವ-2019ರ ವರದಿ ........ 22
ಔಷಧೀಯ ಸಸ್ಯ ಸಂಪತ್ತು ........ 23
ಪದಬಂಧ-44 ........ 24

**ಹೇಮಪುರ ಘನ ಗಂಭೀರ**

ಘನವಂತ ಬಲವಂತ ಇಷ್ಟಾರ್ಥ ದಾತ
ಭಕ್ತವತ್ಸಲನೆಂಬ ಬಿರುದು ಹೊತ್ತಾತ
ವೀರಾಂಜನೇಯನಿವ ತನ್ನ ಸೇವಿಸುವ
ಭಕ್ತರನು ಉದ್ಧರಿಸಿ ಗುರಿಯ ಮುಟ್ಟಿಸುವ.

ದರ್ಶನದ ಲಾಭವಿದೆ ತಾಪಕಿದೆ ಪರಿಹಾರ
ಹರ್ಷವೇ ಮೈವೆತ್ತಿ ನರ್ತಿಸುವುದಿಲ್ಲಿ
ಆಕರ್ಷಣೀಯವಹ ಲೋಕಹಿತ ಕಾರ್ಯಗಳ
ವರ್ಷದುದ್ದಕು ನಡೆಸುತಿಹನು ಮಾರುತಿಯು

**ಪ್ರಕಟಣೆ: ಪತ್ರಿಕೆಯು ಪ್ರಕಟವಾದ ಒಂದು ವಾರದಲ್ಲಿ ನಮ್ಮ ಅಂತರ್ಜಾಲದಲ್ಲೂ ಲಭ್ಯ www.bangaramakki.org**



ನಾಗರಹೊಳೆ ರಾಷ್ಟ್ರೀಯ ಉದ್ಯಾನವನ – ಕೊಡಗು, ಕರ್ನಾಟಕ

# ದಿವ್ಯ ನಾಮಬಲದಿಂದ ಪಾವನರಾಗೋಣ....



ಆಧ್ಯಾತ್ಮಿಕ ಜೀವನದ ಪ್ರಾರಂಭದಲ್ಲಿ ನಾವು ನಿಜವಾದ ಧ್ಯಾನದ ಬಗ್ಗೆ ಚಿಂತಿಸಬೇಕಾಗಿಲ್ಲ. ಜಪಮಾಡುತ್ತ ನಮ್ಮ ಇಷ್ಟದೇವರನ್ನು ಸ್ಮರಿಸುತ್ತ ನಿಧಾನವಾಗಿ ಮುಂದೊಂದು ದಿನ ಜಪ ಧ್ಯಾನದಲ್ಲಿ ಪರ್ಯವಸಾನ ಹೊಂದುವಂತೆ ಮಾಡಬೇಕು. ಜಪದ ಮೂಲಕ ದಿವ್ಯಚೈತನ್ಯವು ಜಗತ್ತಿಗಿಂತ ಹೆಚ್ಚು ಸತ್ಯವೆಂದು ತೋರುವುದು, ಆಗಲೇ ನಿಜವಾದ ಧ್ಯಾನ ಸಾಧ್ಯವಾಗುವುದು. ನಮ್ಮದೇ ಆದ ರೀತಿಯಲ್ಲಿ ಜಪಮಾಡಲು ಪ್ರಾರಂಭಿಸಿ, ಶ್ರಾವ್ಯ ಓಂಕಾರ ಜಪಕ್ಕೆ ಸಾಧಕನು ತನ್ನನ್ನು ಶೃತಿಗೂಡಿಸಲು ಕ್ರಮೇಣ ಅದು ಹೆಚ್ಚು ನಿಶ್ಶಬ್ಧವಾಗಿ ಶಬ್ಧಬ್ರಹ್ಮನ ಸಂಪರ್ಕವುಂಟಾಗುವುದು. ಈ ಸಮನ್ವಯ ಶಬ್ಧವನ್ನು ಉಚ್ಚರಿಸುತ್ತ ಹೋಗಬೇಕು. ಆ ಶಬ್ಧವೇ ಅನಂತ ಪ್ರೇಮ ಮತ್ತು ಆನಂದಸ್ವರೂಪನಾದ ಪರಮಾತ್ಮನ ಆವಿರ್ಭಾವವೆಂದು ಅರಿವಿಗೆ ಬರುವುದು. ಇದರ ಮೂಲಕ ವಿಶ್ವಮನಸ್ಸಿನ ಸಂಪರ್ಕ ನಮಗುಂಟಾಗುವುದು. ಮುಂದೆ ಇದು ನಮ್ಮನ್ನು ವಿಶ್ವಚೈತನ್ಯದೊಡನೆ ಒಂದಾಗಿಸುವುದು.

ಕೆಲವೊಮ್ಮೆ ಜಪಮಾಡುವಾಗ ಜಪಮಾಲೆಯ ಮೂಲಕ ಅಥವಾ ಹಸ್ತದ ಮೂಲಕ ಉನ್ನತಕೇಂದ್ರವನ್ನು ಅಂದರೆ ಹೃದಯ ಅಥವಾ ಶಿರಸ್ಸನ್ನು ಮುಟ್ಟಲು ತುಂಬಾ ಸಹಾಯವಾಗುವುದು. ಆ ಕೇಂದ್ರವನ್ನು ಭೌತಿಕವಾಗಿ ಭಾವಿಸುವುದರಿಂದಲೂ ಅಲ್ಲಿ ತನ್ನ ಪ್ರಜ್ಞೆಯನ್ನು ಹಿಡಿದಿರಿಸುವುದು ಸುಲಭವಾಗುತ್ತದೆ. ಹೀಗೆ ದಿವ್ಯ ನಾಮವು ಮನಸ್ಸಿಗೆ ಒಂದು ಆಸರೆಯನ್ನು ನೀಡುತ್ತದೆ. ಏನಾದರೂ ದೊಡ್ಡ ಕಷ್ಟ ಬಂದಾಗ ಶಾಂತವಾಗಿ ಕುಳಿತು ವಿಚಾರ ಮಾಡಬೇಕು ಮತ್ತು ಹೃತ್ಪೂರ್ವಕವಾಗಿ ಭಗವಂತನನ್ನು ಪ್ರಾರ್ಥಿಸಬೇಕು. ಕಷ್ಟದಲ್ಲಿ ಧೃತಿಗೆಡುವುದೇಕೆ? ಬೇರೆ ಯಾವ ಸಹಾಯವೂ ಇಲ್ಲದಾಗ ಭಗವಂತನೊಬ್ಬನೇ ನಮ್ಮ ಸಹಾಯಕ್ಕಿರುವನು. ಇಲ್ಲಿ ಭಗವಂತ ಎಂದರೆ ನಮ್ಮ ಆತ್ಮದ ಆತ್ಮವಾಗಿ ನಮ್ಮೊಳಗೇ ನೆಲೆಸಿರುವ ಪರಮ ಚೈತನ್ಯ. ಹಾಗಾಗಿ ಜಪವು ಒಂದು ಉತ್ತಮ ರೂಪದ ಸ್ವಾವಲಂಬನೆ. ಅದು ನಮ್ಮನ್ನು ಈ ಲೌಕಿಕ ಜಗತ್ತಿನಿಂದ ದೂರಮಾಡಿ ಭಗವಂತನ ಹತ್ತಿರ ಹತ್ತಿರ ಕರೆದುಕೊಂಡು ಹೋಗುತ್ತದೆ.

ನಮ್ಮ ಮಟ್ಟಿಗೆ ಜಪವೊಂದೇ ನಾವು ಮಾಡಲು ಸಾಧ್ಯ. ನಾವದನ್ನು ಔಪಚಾರಿಕವಾಗಿ ಧ್ಯಾನವೆಂದು ಕರೆಯುತ್ತೇವಷ್ಟೆ! ನೈತಿಕ ಸಾಧನೆ, ಕರ್ತವ್ಯ ಪರಿಪಾಲನೆ, ಜಪ, ಪ್ರಾರ್ಥನೆ, ಶಾಸ್ತ್ರಾಧ್ಯಯನ ಮತ್ತು ಶಾಸ್ತ್ರವಿಚಾರಗಳ ಮನನ – ಇವುಗಳ ಮೂಲಕ ನಮ್ಮನ್ನು ನಾವು ಸಿದ್ಧಪಡಿಸಿಕೊಳ್ಳದೇ ನಿಜವಾದ ಉನ್ನತ ಮಟ್ಟದ ಧ್ಯಾನ ಸಾಧ್ಯವೇ ಇಲ್ಲ. ಈ ಪ್ರಾರಂಭಿಕ ಸಾಧನೆಗಳು ಮನಸ್ಸಿನ ವಿಕ್ಷೇಪಗಳನ್ನು ದೂರ ಮಾಡುತ್ತವೆ ಮತ್ತು ಮನಸ್ಸನ್ನು ಸಚ್ಚಿಂತನೆಯಲ್ಲಿ ತೊಡಗುವಂತೆ ಮಾಡುತ್ತದೆ. ಮೊದಮೊದಲು ಇದು ಅಡಚಣೆಯಿಂದ ಕೂಡಿದ್ದರೂ ದೃಢ ಸಾಧನೆಯಿಂದ ಇದು ನಿರಂತರವಾಗುತ್ತದೆ.

ಹೀಗೆ ನಮ್ಮ ದೇಹ ಮನಸ್ಸುಗಳು ಶುದ್ಧವಾದಂತೆಲ್ಲ, ನಮ್ಮ ಮಾತು, ಕೃತಿ, ಆಲೋಚನೆಗಳು ಶುದ್ಧವಾಗುತ್ತ ನಾವು ಹೆಚ್ಚು ಏಕಾಗ್ರತೆಯನ್ನು ಪಡೆಯುತ್ತೇವೆ ಮತ್ತು ನಮ್ಮ ಧ್ಯಾನ ಉತ್ತಮವಾಗುತ್ತಾ ಹೋಗುತ್ತದೆ. ಮುಂದೆ ಕ್ರಮೇಣ ಸಗುಣ ಮತ್ತು ನಿರ್ಗುಣ ಭಗವತ್‌ಸಂಪರ್ಕವನ್ನು ಪಡೆಯುತ್ತೇವೆ. ಆಗ ನಮ್ಮ ಹೃದಯದಲ್ಲಿಯೇ ಸಾಂತ ಮತ್ತು ಅನಂತಗಳ ಸಂಪರ್ಕವನ್ನು, ಆತ್ಮ ಮತ್ತು ಪರಮಾತ್ಮರ ಏಕತೆಯನ್ನು ಅನುಭವಿಸುತ್ತೇವೆ. ಇದೇ ಧ್ಯಾನದ ಪರಮ ಗುರಿ. ಇದೇ ಅತ್ಯುನ್ನತ ಪ್ರಜ್ಞಾತೀತ ಸ್ಥಿತಿ. ಇಲ್ಲಿ ಜೀವಾತ್ಮವು ತನ್ನ ನೈಜ ಆತ್ಮವಾದ ದಿವ್ಯಾತ್ಮನ ನೇರ ಸಂಪರ್ಕವನ್ನು ಪಡೆಯುತ್ತದೆ ಮತ್ತು ಅದರ ಸ್ವಾಭಾವಿಕ ಪರಿಪೂರ್ಣತೆಯನ್ನೂ, ಸ್ವಾತಂತ್ರ್ಯವನ್ನೂ, ಶಾಂತಿಯನ್ನೂ, ಧನ್ಯತೆಯನ್ನೂ ಪಡೆಯುತ್ತದೆ. ಹಾಗಾಗಿ ದಿವ್ಯ ನಾಮ ಜಪವು ಪಾಮರರನ್ನೂ ಪಾವನರನ್ನಾಗಿ ಮಾಡಬಲ್ಲದು. ಇದನ್ನರಿತ ನಾವೆಲ್ಲರೂ ಪಾಮರತೆಯಿಂದ ಪಾವನತ್ವಕ್ಕೆ ಸಾಗಿಸುವ ದಿವ್ಯ ನಾಮವನ್ನು ಧ್ಯಾನಿಸುತ್ತ, ಆ ದಿವ್ಯ ನಾಮಬಲದಿಂದ ಶಾಂತಿಯನ್ನೂ, ಧನ್ಯತೆಯನ್ನೂ ಪಡೆಯೋಣ.

ದಿವ್ಯ ನಾಮವು ಎಲ್ಲರಿಗೂ ಶಾಂತಿ, ಧನ್ಯತೆಯನ್ನು ನೀಡಲಿ.

**ಶ್ರೀ ರಾಮಸ್ಮರಣಂ**
**ಪ.ಪೂ. ಶ್ರೀ ಮಾರುತಿ ಗುರೂಜಿಯವರು**
**ಧರ್ಮಾಧಿಕಾರಿಗಳು, ಶ್ರೀಕ್ಷೇತ್ರ ಬಂಗಾರಮಕ್ಕಿ.**

# ನಾಸ್ತಿ ತ್ಯಾಗ ಸಮಮ್ ಸುಖಮ್

ನಾಸ್ತಿ ವಿದ್ಯಾ ಸಮಂ ಚಕ್ಷುಃ ನಾಸ್ತಿ ಸತ್ಯ ಸಮಂ ತಪಃ
ನಾಸ್ತಿ ರಾಗ ಸಮಮ್ ದುಃಖಮ್ ನಾಸ್ತಿ ತ್ಯಾಗ ಸಮಂ ಸುಖಮ್

ವಿದ್ಯೆಗೆ ಸಮನಾದ ಕಣ್ಣಿಲ್ಲ ಸತ್ಯಕ್ಕೆ ಸಮನಾದ ತಪಸ್ಸಿಲ್ಲ ಆಸೆಗೆ ಸಮನಾದ ದುಃಖವಿಲ್ಲ ತ್ಯಾಗಕ್ಕೆ ಸಮನಾದ ಸುಖವಿಲ್ಲ ಎಂದು ಸುಭಾಷಿತ ಸಾರುತ್ತದೆ.

ತ್ಯಾಗ ಎಂದರೆ ಬಿಡುವದು ಅದರಿಂದ ಸುಖ ಎಂದು ಹೇಳಲ್ಪಡುತ್ತದೆ. ಅಂದರೆ ಅದು ಹೇಗೆ ಸಾಧ್ಯ, ತ್ಯಜ್ಯತೇ ಇತಿ ತ್ಯಾಗಃ ತ್ಯಾಗ ಮಾಡುವುದರಿಂದ ಸುಖ ಎಂದರು ಹಣದಿಂದ ನಾವು ಸಂಪತ್ತು ಪಡೆದು ಸುಖ ಅನುಭವಿಸಲು ಸಾಧ್ಯ. ಹಣವನ್ನು ಆರ್ಜನೆ ಮಾಡದಿದ್ದರೆ ಸುಖ ಎಲ್ಲಿಂದ? ಸರ್ವವನ್ನು ಅನುಭವಿಸಲು ಎಲ್ಲವೂ ಬೇಕು. ಈ ಎಲ್ಲಾ ಬೇಕು ಬಂದು ಸೇರಿದರೆ ಅಲ್ಲಿ ತನ್ನಿಂದ ತಾನೇ ಸುಖವಿಲ್ಲವೇ ಬೇಡ ಎಂದರೆ, ಎಲ್ಲವನ್ನು ಬಿಟ್ಟರೆ ಹೇಗೆ ಅದು ಸುಖದ ಮುಖ ಕಂಡೀತು?

ಅದಕ್ಕೆ ಸುಭಾಷಿತ ಸಾರುತ್ತದೆ. ಜ್ಞಾನ ಸಂಪಾದಿಸಿದರೆ ಅದು ನಿಜವಾದ ಕಾಯ ಅಂದರೆ ಅಂತರಂಗದ ಜ್ಞಾನ. ಅದಕ್ಕೆ ಸರಿಸಾಟಿ ಯಾವುದು ಯಥಾ ಸ್ಥಿತಿ ಹೇಳಿದರೆ ಅಂತರಂಗ ಬಹಿರಂಗ ಒಂದಾದ ಸತ್ಯದ ಸ್ವರೂಪ ಅದು ತಪಸ್ಸು. ಕಂಡದ್ದೆಲ್ಲ ಬೇಕು, ಬೇಕಿಗೆ ಬ್ರೇಕಿಲ್ಲವಾದಾಗ ಅದು ಅಂತ್ಯದಲ್ಲಿ ದುಃಖ ಸಮುದ್ರದಲ್ಲಿ ಮುಳುಗಿಸುತ್ತದೆ. ಹಾಗೆಯೇ ತ್ಯಾಗಮಯ ಚಿಂತನೆ ಯಾವುದು ಆವಶ್ಯಕವೋ ಅಷ್ಟೇ ಸಾಕು ಉಳಿದದ್ದೆಲ್ಲ ಬೇಡ. ಇನ್ನೊಬ್ಬರಿಗೆ ಕೊಡಬೇಕು–ನನಗಾಗಿ ಅಲ್ಲ ನಮಗಾಗಿ. ಅನ್ಯರ ಸಂತೋಷದಲ್ಲಿ ನನ್ನ ಸಂತೋಷ. ಹೀಗೆ ತ್ಯಾಗ ವೆನ್ನುವದು ಅದು ಸುಖವನ್ನು ನೀಡುತ್ತದೆ.

ತ್ಯಾಗದಿಂದ ಮಾನಸಿಕ ತೃಪ್ತಿ ಎಂದು ಜಗತ್ತಿನ ಅನೇಕ ಮಹನೀಯರು ಆಡಿ–ಮಾಡಿ ತೋರಿಸಿದರು. ತ್ಯಾಗ ಎಂದರೆ ಬೇಡಎನ್ನುವುದು ಅಥವಾ ತೃಪ್ತಿ ಎನ್ನುವ ಸಂದೇಶ ಇದೆ. ದುಷ್ಟ ಮಾರ್ಗದಿಂದ ಬೇಕು ಬೇಕು ಎಂದು ಹಣಗಳಿಸಿ ಮಾನಸಿಕ ಶಾಂತಿ ಕಳೆದುಕೊಂಡು ಅನೇಕ ರೋಗಗಳಿಂದ ನರಳುವ ನರರ ದುಃಖ ಎನಿತು? ಬೇಡ ಬೇಡ ಎಂದು ಆಧ್ಯಾತ್ಮದ ಚಿಂತನೆಯತ್ತ ಸಂಪೂರ್ಣ ಮನಸ್ಸನ್ನು ತೊಡಗಿಸಿಕೊಂಡು ಸರ್ವವನ್ನು ಪರರಿಗಾಗಿ ಎನ್ನುವ ಮಹಾಮಹಿಮರಾಗಿಹ ನರೋತ್ತಮರ ಆನಂದ ಎನಿತು. ಜೀವನವನ್ನು ಸಾಮಾನ್ಯ ಮನುಷ್ಯ ಕೂಡ ಅಸಾಮಾನ್ಯವಾಗಿ ಸರ್ವರ ಹೃದಯದಲ್ಲಿ ವಿರಾಜಿಸುವ ದೇವೋತ್ತಮನಾದ ಉದಾಹರಣೆ ಪ್ರೇರಣಾದಾಯಕವಲ್ಲವೇ? ವೃಕ್ಷಗಳು ಪ್ರಾಣಿಗಳು ನೀಡುವ ತ್ಯಾಗ ಸಂದೇಶ ಮಾನವನನ್ನು ಮುಟ್ಟುವುದು ಎಂದು?

ಆಸೆ ಇಲ್ಲದಿರುವಿಕೆ ಅಂದರೆ ತ್ಯಾಗ ಸಂತೋಷ ನೀಡುತ್ತದೆ. ಭಗವದ್ಗೀತೆಯಲ್ಲಿ– ಕರ್ಮದಲ್ಲಿ ಆಸಕ್ತಿ ಇರಲಿ ಮಾಫಲೇಷು ಕದಾಚನ ಫಲಾಪೇಕ್ಷೆ ಮಾಡದೇ ಸಂತಸಪಡು ಎಂದು ಶ್ರೀ ಕೃಷ್ಣ ಸಾರಿದ್ದು ವಿಧಿತವಷ್ಟೆ.

ಗುರುವಾದವರು ಶಿಷ್ಯರ ಆನಂದದಲ್ಲಿ ಸುಖವನ್ನು ಕಾಣುತ್ತಾರೆ. ತಾಯಿ ಮಕ್ಕಳ ಸುಖದಲ್ಲಿ ಆನಂದ ಅನುಭವಿಸುತ್ತಾಳೆ. ಸೈನಿಕ ಪ್ರಾಣತ್ಯಾಗಮಾಡಿ ದೇಶ ರಕ್ಷಣೆಯಲ್ಲಿ ಆನಂದ ಕಾಣುತ್ತಾನೆ. ಹೀಗೆ ತನಗಾಗಿ ಬಯಸದಿದ್ದರೆ – ಆಗ ತ್ಯಾಗದಲ್ಲಿ ಅಂದರೆ ಅನ್ಯರ ಸುಖವೇ ಪ್ರಧಾನವಾಗಿರುವಾಗ ಅಲ್ಲಿ ಸುಖವೆನ್ನುವುದು ಪರಮ ಸತ್ಯ.

ವಸಂತ ಋತುವಿನ ಚೈತ್ರಮಾಸ ಕಳೆದು ವೈಶಾಖ ಮಾಸವನ್ನು ಸ್ವಾಗತಿಸುತ್ತಿದ್ದೇವೆ. ಸೆಕೆ ಸೆಕೆ ಎಂದು ಮಳೆಗಾಲದ ತಂಪು ಇಂಪಾಗಲಿ ಎಂದು ಕಾಯುತ್ತಿದ್ದೇವೆ. ಬೀಜ ಬಿತ್ತುವ ಮೂಲಕ ಮುಂದಿನ ಫಸಲು ಉತ್ತಮವಾಗಿ ಹೊರಹೊಮ್ಮಲು ಸಜ್ಜಾಗಿದೆ. ನಮ್ಮ ತ್ಯಾಗದಿಂದ ನಾವು ಉತ್ತಮ ಬದುಕಿನ ಫಸಲು ತರಲು ಸಜ್ಜಾಗೋಣ. ತ್ಯಾಗದಿಂದ ಸಹಿಸುವ ಶಕ್ತಿ ಪಡೆದು ಅನ್ಯರಿಗೆ ಅನನ್ಯತೆಯನ್ನು ತೋರಿಸುತ್ತಾ ತ್ಯಾಗದಿಂದ ಆತ್ಮಾನಂದದ ಸುಖವನ್ನು ಪಡೆಯೋಣವೇ...

ಭೋಗವೆನ್ನುವುದು ಶಾಶ್ವತ ಜೀವನದಿ ನೀಡುವುದು ದುಃಖ
ತ್ಯಾಗದಿಂದ ಸುಲಭ ಸಾಧ್ಯ ಅರಿವಿಲ್ಲದೆ ಅರಿವಾಗುವುದು ಸುಃಖ
ನಾನು ನನಗಾಗಿ ದುಡಿಯದೆ ಪರರಿಗಾಗಿ ದುಡಿಯುವ ಮನ
ಸಾರ್ಥಕ ಜೀವನವೇ ತ್ಯಾಗಿಗೆ ಆತ್ಮಾನು ಸಂದಾನದ ಶ್ರೇಷ್ಠ ಧನ ॥

ಸಂಪಾದಕರು

**ಹೇಮಪುರ ಪತ್ರಿಕೆಯ ಚಂದಾವಿವರ**

* ಬಿಡಿ ಪತ್ರಿಕೆ – ರೂ.20/– * ವಾರ್ಷಿಕ ಚಂದಾ – ರೂ.200/– * ಪಂಚವಾರ್ಷಿಕ ಚಂದಾ – ರೂ.1000/–
* ಆಜೀವ ಸದಸ್ಯತ್ವ – ರೂ.5000/–

**ವಿವರಗಳಿಗೆ ಸಂಪರ್ಕಿಸಿ :** ಸಂಪಾದಕರು, ಹೇಮಪುರ ಮಾಸಪತ್ರಿಕೆ. ಫೋನ್ ನಂ: 08387–268333,268545,268544.
ಮೊಬೈಲ್ ನಂಬರ್ : 9449109299



ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ – ಬೆಂಗಳೂರು, ಕರ್ನಾಟಕ

ಯಶಸ್ವೀ ಬದುಕಿನ ಮಾರ್ಗ ಮಿಂಚು

ಲೇ ॥ ವನರಾಗ ಶರ್ಮ

# ಅನ್ಯಾಯದ ನಡೆ ಪತನಕ್ಕೆ ದಾರಿ

ಪರಜನರ ವಸ್ತುವನು ಆಶಿಸುವ ಮತಿ ಸಲ್ಲ
ತರದೇನು ನಾಶವನು ಅನ್ಯಾಯ ದಾರಿ ? ॥
ಪರಸತಿಗೆ ಆಶಿಸಿದ ರಾವಣನು ಹತನಾದ
ಪರರೊಡವೆ ಗತಿಗೇಡು– ವನರಾಗ ಮಿತ್ರ ॥

ಮಾಡಿದ್ದುಣ್ಣೋ ಮಹರಾಯ ಎಂಬ ಗಾದೆಯಂತೆ ನಮ್ಮ ಯೋಚನೆ ಹಾಗೂ ಕೃತಿಯಂತೆ ಫಲಿತಾಂಶವಿರುತ್ತದೆ. ನಾವು ಮಾಡುವ ಪ್ರತಿಯೊಂದು ಕಾರ್ಯವೂ ಫಲಿತವಾಗುತ್ತದೆ. ನಮ್ಮ ಒಂದು ನಡೆಯೂ ವ್ಯರ್ಥವಾಗುವುದಿಲ್ಲ. ಸತ್ಕರ್ಮದಿಂದ ; ಸತ್ಫಲ. ದುಷ್ಕರ್ಮದಿಂದ ದುಷ್ಫಲ. ಈಗಲೇ ಅದು ಫಲಿತವಾದೀತು ಅಥವಾ ಕಾಲಾಂತರದಲ್ಲಿ ಫಲಿತವಾದೀತು. ಆದರಿಂದ ನಾವು ಇಡುವ ಪ್ರತಿಯೊಂದು ಹೆಜ್ಜೆಯನ್ನೂ ಎಚ್ಚರಿಕೆಯಿಂದ ಇಡಬೇಕು.. 'ತಪ್ಪು ಹೆಜ್ಜೆ ಆಗದಂತೆ, ದುರ್ಗತಿಗೆ–ದುಷ್ಫಲಕ್ಕೆ, ದುರಂತಕ್ಕೆ ಕಾರಣವಾಗದ ಹಾಗೆ ನಮ್ಮ ನಡೆಇರುವುದು ಒಳ್ಳೆಯದು.

ಪರರ ವಸ್ತುವನ್ನು ಆಶಿಸುವುದು ಕೇಡು ತರುತ್ತದೆ; ರಾವಣ ಪರಸತಿ ಸೀತೆಯನ್ನು ಆಶಿಸಿ, ನಾಶವಾದ. ದೇವರ ಧನ ಅರ್ಥಾತ್ 'ದೇವಸ್ವ' ವನ್ನು ಅಪಹರಿಸಿದ ಜನರು, ಅಸಹಾಯಕರ ದುಡ್ಡನ್ನು ಲಪಟಾಯಿಸಿದ ಮಂದಿ ದುರ್ಗತಿಗೆ ಈಡಾಗಿರುವುದನ್ನು ನಾವು ಕಾಣುತ್ತೇವೆ. ತಾತ್ಕಾಲಿಕವಾಗಿ ಅಂತಹ ದುಡ್ಡನ್ನು ಕೊಳ್ಳೆ ಹೊಡೆದವನು ಸುಖ ಸಂತೋಷ ಹೊಂದಿದಂತೆ ನಮಗೆ ಕಂಡೀತು. ಆದರೆ ಕಾಲ ಉಲ್ಟಾ ಹೊಡೆದಾಗ ಕಷ್ಟದ ಪರ್ವತವೇ ಮೈಮೇಲೆ ಕಳಚಿ ಬಿದ್ದಿರುತ್ತದೆ.. ಆತನಿಗೆ ದುರ್ಗತಿ ಕಾದಿರುತ್ತದೆ.. ಒಂದಿನ ಅನ್ಯಾಯದ ಭೂತ ಧುತ್ತೆಂದು ಬ್ರಹ್ಮ ರಾಕ್ಷಸದಂತೆ ಪ್ರತ್ಯಕ್ಷವಾಗುತ್ತದೆ! ಕೋಟಿ ಕೋಟಿ ಲಂಚ ನುಂಗುವ ನೌಕರರಿಗೂ, ರಾಜಕಾರಣಿಗಳಿಗೂ ಇದೇ ಗತಿ ಕಾದಿದೆ ಇದರಲ್ಲಿ ಅನುಮಾನವಿಲ್ಲ.

ಅನ್ಯಾಯದ ದಾರಿಯಿಂದ ಪರವಸ್ತುವನ್ನು ವಶ ಪಡಿಸಿಕೊಂಡು, ಉಪಯೋಗಿಸಲು ಪ್ರಯತ್ನ ಪಟ್ಟು, ದುರಂತಕ್ಕೀಡಾದ ಸಂಗತಿಯ ಕುರಿತು ಮಾರ್ಮಿಕವಾದ ಒಂದು ಕಥೆ ಹೀಗಿದೆ:

ಸುಖೀ ರಾಜ್ಯವೊಂದರಲ್ಲಿ ಆತ ರಾಜ ಪುರೋಹಿತ. ಸಕಲ ಶಾಸ್ತ್ರ ಪರಂಗತ, ಸುಜ್ಞಾನಿ, ವ್ಯವಹಾರ ಚತುರ. ಯವುದೇ ಕಾರ್ಯಕ್ರಮಗಳನ್ನು ಚೆನ್ನಾಗಿ, ದಕ್ಷತೆಯಿಂದಲೂ, ಚಾಕಚಕ್ಯತೆಯಿಂದಲೂ ನಿರ್ವಹಿಸಬಲ್ಲ ಚಾಣಾಕ್ಷ. ಆತ ಒಂದು ಅತ್ಯುತ್ತಮವಾದ ಕುದುರೆಯನ್ನು ಸಾಕಿಕೊಂಡಿದ್ದ. ಅದು ಎಂತಹುದೇ ಜಾಗದಲ್ಲೂ ಶರವೇಗದಿಂದ ಓಡುತ್ತಿತ್ತು. ಅದನ್ನು ಹತ್ತಿ ಕುಳಿತು ಜೈ ಭಗವಾನ್ ಎಂದೊಡನೆ ಓಡಲು ಪ್ರಾರಂಭಿಸುತ್ತಿತ್ತು. 'ಓಂ ಶಾಂತಿ' ಎಂದೊಡನೆ ನಿಲ್ಲುತ್ತಿತ್ತು. ಅದನ್ನು ಆರೋಹಿಸುವುದೆಂದರೆ ಎಲ್ಲರಿಂದಲೂ ಸಾಧ್ಯವಾಗುತ್ತಿರಲಿಲ್ಲ. ಅಂತಹ ಉತ್ತಮಾಶ್ವವನ್ನು ಏರಿ ಇಡೀ ರಾಜ್ಯದಲ್ಲಿ ಸಂಚರಿಸಿ ಎಲ್ಲ ಧಾರ್ಮಿಕ ಕಾರ್ಯಕ್ರಮಗಳನ್ನೂ ಆತ ಅಚ್ಚುಕಟ್ಟಾಗಿ ನೆರವೇರಿಸುತ್ತಿದ್ದ. ಅದರ ಮೇಲೆ ಅನೇಕ ಕಣ್ಣು ಹಾಕಿದ್ದರು. ಆದರೆ ಅದನ್ನು ರಾಜಪುರೋಹಿತ ಯಾರಿಗೂ ಕೊಡುತ್ತಿರಲಿಲ್ಲ. ಒಮ್ಮೆ ರಾಜನು ಅಶ್ವವನ್ನು ಆಶಿಸಿ, ಇಲ್ಲ ಎನಿಸಿಕೊಂಡಿದ್ದ.

ಬಹಳ ದಿನಗಳಿಂದ ಅದನ್ನು ಪಡೆಯಲು ಹಂಬಲಿಸುತ್ತಿದ್ದ ಸೇನಾಪತಿ 'ಈ ಬ್ರಾಹ್ಮಣನಿಗೆ ಇಂಥ ಉತ್ತಮಶ್ವ ಏಕೆ? ತನ್ನಂತಹನ ಬಳಿ ಇರಬೇಕಾದ ಕುದುರೆ ಇದು ಎಂದು ಹೇಳುತ್ತಿದ್ದ. ಅದೊಂದಿನ ರಾಜಪುರೋಹಿತನಿಗೆ ಚನ್ನಾಗಿ ಥಳಿಸಿ, ಕುದುರೆಯನ್ನು ಕಸಿದುಕೊಂಡು, ಆತನನ್ನು ಕಾರಾಗ್ರಹದಲ್ಲಿ ಇರಿಸಿ, ಸೇನಾಪತಿ ಕುದುರೆಯನ್ನು ಉತ್ಸಾಹದಿಂದ ಏರಿದ. ಆದರೆ ಕುದುರೆ ಹೋಗಲೊಲ್ಲದು: ಆಗ ಥಟ್ಟನೆ ಪುರೋಹಿತ 'ಜೈಭಗವಾನ್' ಎನ್ನುತ್ತಿದ್ದ ಎಂಬುದು ನೆನಪಾಯಿತು. ಕೂಡಲೇ 'ಜೈ ಭಗವಾನ್' ಎಂದ. ಕುದುರೆ ಓಡತೊಡಗಿತು. ಸೇನಾಪತಿಗೆ ಅದರ ವೇಗವನ್ನು ಸಹಿಸಲಾಗಲಿಲ್ಲ, ತಾನು ಕೆಳಗೆ ಬಿದ್ದು ಸತ್ತು ಹೋಗುತ್ತೇನೆ ಎಂದು ಭಯವಾಯಿತು. ಬಲವಾಗಿ ಕುದುರೆಯನ್ನು ಹಿಡಿದುಕೊಂಡ. ಸ್ವಲ್ಪ ಹೊತ್ತಿನ ನಂತರ ಕುದುರೆಯ ವೇಗ ಮತ್ತು ಹಿಡಿತ ಅಭ್ಯಾಸವಾಗಿ ಸಾವರಿಸಿಕೊಂಡ. ಈಗ ಅವನಿಗೆ ಯುದ್ಧ ಗೆದ್ದ ಸಂಭ್ರಮ. ಬಯಸಿದ್ದು ದೊರೆತ ಸಂತೋಷ.! ಕುದುರೆ ವೇಗವಾಗಿ ಓಡುತ್ತಿತ್ತು. ಓಡುತ್ತ ಓಡುತ್ತ ಅದು ಒಂದು ಗುಡ್ಡವನ್ನು ಏರಿತು.. ಮುಂದೆ ಬಹು ದೊಡ್ಡ ಪ್ರಪಾತ! ಕುದುರೆ ಅತ್ತ ಓಡುತ್ತಲೇ ಇತ್ತು. . ಲಗಾಮು ಜಗ್ಗಿ ಹಿಡಿದು ಎಷ್ಟು ಪ್ರಯತ್ನಿಸಿದರೂ ನಿಲ್ಲುತ್ತಿರಲಿಲ್ಲ. ಭಯ ಭೀತನಾದ ಸೇನಾಪತಿ ಗಾಬರಿಗೊಂಡ. ಅಷ್ಟರಲ್ಲಿ.. ಪುರೋಹಿತ ನಿಲ್ಲಲು 'ಓಂ ಶಾಂತಿ' ಹೇಳುತ್ತಿದ್ದುದು ನೆನಪಾಗಿ 'ಓಂ ಶಾಂತಿ' ಎಂದು ಕೂಗಿದ. ಕುದುರೆ ತಟ್ಟನೆ ಕಾಲು ಕೆದರಿ ಧೂಳೆಬ್ಬಿಸುತ್ತ ಪ್ರಪಾತದಂಚಿಗೆ ಬಂದು ನಿಂತಿತು. ಇನ್ನೊಂದು ಹತ್ತು ಅಡಿ ಹೋಗಿದ್ದರೆ ಘೋರ ಪ್ರಪಾತದಲ್ಲಿ ಬೀಳುತ್ತಿದ್ದರು.. ಇದನ್ನು ನೆನೆದು ದೇವರ ಎಂಥ ದಯಾಳು! ಸದ್ಯಕ್ಕೆ ಪ್ರಾಣ ಉಳಿಯಿತು! ಎಂದುಕೊಂಡು ಶೂನ್ಯದತ್ತ ನೋಡಿ, ಪಾರು ಮಾಡಿದ ದೇವರನ್ನು ಸ್ಮರಿಸಲು ಅರಿವಿಲ್ಲದೆ 'ಜೈ ಭಗವಾನ್' ಎಂದುಬಿಟ್ಟ. ತಕ್ಷಣ ಕುದುರೆ ಮುಂದೆ ಚಿಮ್ಮಿತು ಮುಂದೇನಾಯಿತು? ಎಂದು ಹೇಳುವ ಅಗತ್ಯವಿದೆಯೆ? ಕುದುರೆ ಹಾಗೂ ಸೇನಾಪತಿ ಘೋರ ಪ್ರಪಾತದ ತಳ ಸೇರಿ ನುಚ್ಚು ನೂರಾದರು!!

ಈ ದೃಷ್ಟಾಂತ ನಮಗೆ ಎಷ್ಟೆಲ್ಲ ಸಂದೇಶ ನೀಡುತ್ತದೆ? ಮುಖ್ಯವಾಗಿ ಇವುಗಳನ್ನಂತೂ ಬೋಧಿಸುತ್ತದೆ:

1. ಪರರ ವಸ್ತುವಿಗೆ ಆಸೆ ಪಡಬಾರದು.
2. ಕೆಟ್ಟ ಯೋಚನೆ ಕೆಟ್ಟ ಫಲವನ್ನೇ ತರುತ್ತದೆ. ದ್ರೋಹ ಚಿಂತನೆ ನಮ್ಮ ವಿನಾಶಕ್ಕೆ ಕಾರಣವಾಗುತ್ತದೆ.
3. ಪರಿಣತಿ ಇಲ್ಲದೇ ಯಾವುದೇ ವಾಹನವನ್ನೂ ಚಲಾಯಿಸಬಾರದು.
4. ಬಲ ಇದೆಯೆಂದು ಅನ್ಯಾಯದ ದಾರಿ ಹಿಡಿದಾತನಿಂದ ಅವನಲ್ಲದೆ ಅವನನ್ನು ಆಶ್ರಯಿಸಿದವರೂ ತೊಂದರೆಗೀಡಾಗುತ್ತಾರೆ.

ತರಬೇತಿ ಥಿಯರಿಗಳ ತಿಳುವಳಿಕೆಯಿರದಿರಲು
ತರವಲ್ಲ ಕಾರ್ಯದಲಿ ತೊಡಗುವುದು ದುಡುಕಿ ॥
ಪರಿಣತಿಯ ಹೊಂದದೆಯೆ ವಾಹನದ ಚಾಲಿಸಲು
ದರಿಯಲ್ಲಿ ಬೀಳದೆ? – ವನರಾಗ ಮಿತ್ರ ॥

---

ಮಧುರ ಪ್ರಕಾಶನ

ಲೇ॥ ಎಂ.ಎಲ್.ರಾಘವೇಂದ್ರರಾವ್

# ಮಾನಸಿಕ ಪ್ರಶಾಂತತೆಗಾಗಿ ಏನು ಮಾಡಬೇಕು?

**ಒತ್ತಡ ಸಾರ್ವತ್ರಿಕವೇ ಆದರೂ.. ಅದರ ಪ್ರಕ್ರಿಯೆ ಬೇರೆ ಬೇರೆ... ನಿವಾರಣೆಗೆ ದೈಹಿಕ ಮಾನಸಿಕ ಸ್ಥಿತಿ–ಗತಿಗಳಿಗೆ ತಕ್ಕಂತೆ ಚೆಕ್ಕರ್, ತಂತ್ರ ಬಳಸಿಕೊಳ್ಳಬೇಕಾಗಿರುತ್ತದೆ.**

ಮಾನಸಿಕ ಒತ್ತಡಗಳು ಕಡಿಮೆಯಾಗಬೇಕಾದರೆ ಅತಿ ಸುಲಭವಾದ ದಾರಿಯೆಂದರೆ ವ್ಯಾಯಾಮ ಮಾಡುವುದು. ಇದಕ್ಕೆ ಅನೇಕ ಕಾರಣಗಳನ್ನು ಕೊಡಬಹುದು. ಅದರಲ್ಲಿ ಮುಖ್ಯವಾದುದು ಸ್ನಾಯುಗಳ ಟೆನ್ಸನ್ ಕಡಿಮೆಯಾಗುವುದು. ಉದಾಹರಣೆಗೆ – ದಿನವಿಡೀ ಯಾವುದೋ ಕೆಲಸದ ಒತ್ತಡದ ಮೇಲೆ ಮಾನಸಿಕ ತೊಂದರೆ ಚಿಂತೆಯಾಗಿ ಪರಿಗಣಿಸಿ ನಿತ್ರಾಣವಾಗಿರುವವರಿಗೆ, ಎಂಟು ಗಂಟೆಗಳ ಕಾಲ ಒಂದು ಕೊಠಡಿಯಲ್ಲಿ ದೂರ್ವಾಸನಂತಹ ಯಜಮಾನನ ಕೈಕೆಳಗೆ ಕೆಲಸ ಮಾಡಿ ಆತನಿಂದ ಬೈಸಿಕೊಂಡು ಆತನನ್ನು ಏನೂ ಅನ್ನಲಾರದೇ ಮನೆಗೆ ಬೇಗನೆ ಬರೋಣವೆಂದರೆ ಬಸ್ ಸಿಗದೆ ಇನ್ನಷ್ಟು ಹೆಚ್ಚಿನ ಒತ್ತಡ–ಟೆನ್ಸನ್‌ನಿಂದ ಯಾರನ್ನು ಏನೂ ಅನ್ನಲಾಗದೆ ಮನೆ ತಲುಪಿ ಈಜೀಚೇರನಲ್ಲಿ ಕುಸಿದು ಕುಳಿತ ವ್ಯಕ್ತಿಯ ಮಾನಸಿಕ ಸ್ಥಿತಿಯನ್ನು ಊಹಿಸಿರಿ. ತನ್ನ ಬಾಸನ್ನು ಎದುರಿಸಲಾರ; ಕೆಲಸ ಮಾಡದೆಯೂ ಇರಲಾರ. ಬಸ್ ಸಿಗದೆ ಬೇಸರದಿಂದಲೇ ಆಫೀಸ್‌ನಿಂದ ನಡೆಯುತ್ತಲೇ ಮನೆಗೆ ಬರುತ್ತಾನೆ. ಇಲ್ಲಿ ಆತನ ಟೆನ್ಸನ್ ನಿವಾರಣೆಯಾಗುವುದಕ್ಕೆ ಅವಕಾಶವಾದರೂ ಎಲ್ಲಿ? ಹೇಗೆ?

ಅಂತಹ ವ್ಯಕ್ತಿ ಟೆನ್ಷನ್ ನಿವಾರಣೆಯಾಗುವುದು ಟೆನ್ನೀಸ್ ಕೋರ್ಟಿನಲ್ಲೋ, ಸ್ವಿಮಿಂಗ್ ಪೂಲ್‌ನಲ್ಲೋ, ಚಂಡಾಟದಲ್ಲೋ, ಕಬ್ಬಿಣದ ಗುಂಡುಗಳನ್ನು ಎಸೆಯುವುದರಲ್ಲೋ ಆಗಿರಬೇಕು. ಅಥವಾ ಜಾಗಿಂಗ್‌ನಲ್ಲೋ ಆಗಿರಬೇಕು! ಯಾವುದೋ ವ್ಯಾಯಾಮ ಕ್ರೀಡೆಯಲ್ಲಿ ಆತನ ಸ್ನಾಯುಗಳಿಗೆ ವಿಶ್ರಾಂತಿ ದೊರಕುತ್ತದೆ. ವ್ಯಾಯಾಮ ಮಾಡುವುದರಿಂದಲೋ, ಕ್ರೀಡೆಗಳಲ್ಲಿ ಪಾಲ್ಗೊಳ್ಳುವುದರಿಂದಲೋ ಸ್ನಾಯುಗಳಲ್ಲಿ ಉಂಟಾದ ಕೆಲಕೊಲೋಮೈನ್ಸ್‌ನಲ್ಲಿನ ಹೆಚ್ಚಳವನ್ನು ಮೆಟಾಟಾಲೈಜ್ ಮಾಡಿ ಸ್ನಾಯುಗಳಲ್ಲಿನ ಟೆನ್ಷನನ್ನು ಕಡಿಮೆ ಮಾಡುತ್ತದೆ. ಅಷ್ಟೇ ಹೊರತು ವ್ಯಾಯಾಮದಿಂದ ನಿಮ್ಮ ಕೆಲಸದಲ್ಲಿನ ಒತ್ತಡ ಕಡಿಮೆ ಆಗುವುದಿಲ್ಲ. ಬಸ್ಸಗಳು ಸಿಗದೆ ಹೋಗುವುದರಿಂದ ಆಗುವ ಅಸೌಕರ್ಯ ಹೋಗುವುದಿಲ್ಲ. ಬಾಸ್‌ನಿಂದ ಆಗುವ ಮಾನಸಿಕ ತೊಂದರೆ ಗೊಂದಲ ಇಳಿಮುಖ ಆಗುವುದಿಲ್ಲ. ಆದರೆ ವ್ಯಾಯಾಮದಿಂದ ನಿಮ್ಮ ಸ್ನಾಯುಗಳು ಸಡಿಲಾಗಿ ನಿಮಗಾದ ಮಾನಸಿಕ ಒತ್ತಡಗಳು ಕಡಿಮೆಯಾಗುವುದಕ್ಕೆ ಅವಕಾಶಗಳಿವೆ. ವ್ಯಾಯಾಮ ಇಲ್ಲದೆ ಹೋದರೆ ನಿಮ್ಮಲ್ಲಿನ ಒತ್ತಡ ಏನಾಗುತ್ತದೆ? ಕ್ರೊನಿಕ್ ಪ್ರಾಬ್ಲಮ್ ತೊಂದರೆಯಾಗಿ ಬದಲಾಗಿ ಹೃದಯದ ಮೇಲೆ ಹೆಚ್ಚಿನ ಒತ್ತಡವನ್ನು ತರುತ್ತದೆ. ಅದು ನಿಧಾನವಾಗಿ ಹಾರ್ಟ್‌ಎಟಾಕ್ ಗೆ ದಾರಿ ತೆಗೆಯುತ್ತದೆ. ಆದ್ದರಿಂದ ಮಾನಸಿಕ ಒತ್ತಡದಿಂದ ಇಷ್ಟೆಲ್ಲ ಸಮಸ್ಯೆಗಳು ಹುಟ್ಟಿಕೊಂಡು ಶಾರೀರಿಕವಾಗಿ ಎಷ್ಟೋ ಬದಲಾವಣೆಗಳಿಗೆ ಕಾರಣವಾಗುತ್ತದೆ.

ಸಂಜೆ ಹೊತ್ತು ಬಹಳ ಮಂದಿ ಎಕ್ಸಿಕ್ಯೂಟಿವ್ ಆಫೀಸರ್‌ಗಳಿಗೆ ವ್ಯಾಯಾಮ ಮಾಡಿಕೊಳ್ಳುವುದಕ್ಕೆ ಸರಿಯಾದ ಸಮಯ. ಎಕ್ಸಿಕ್ಯೂಟಿವ್‌ಗೆ ಹೆಚ್ಚಿನ ಮಾನಸಿಕ ಒತ್ತಡಗಳು ಏರ್ಪಡುತ್ತಿರುತ್ತವೆ. ಅವುಗಳಿಂದ ಹೊರಬೀಳುವುದಕ್ಕೆ ಆಟಗಳಲ್ಲಿ ತೊಡಗುವುದಕ್ಕಾಗಲಿ, ಜಾಗಿಂಗ್‌ಗಾಗಲಿ ಹಾಗೂ ಇತರ ವ್ಯಾಯಾಮಗಳಿಗೆ ಅದು ಅನುಕೂಲಕರ ಸಮಯ. ಆಫೀಸ್‌ಗಳಿಂದ ಮನೆಗೆ ಬರುವ ದಾರಿಯಲ್ಲಿರುವ ಹೆಲ್ತ್ ಕ್ಲಬ್ ಗಳಿಗೆ ಹೋಗಿ ಸ್ವಲ್ಪ ಹೊತ್ತು ಆಟಗಳನ್ನಾಡಿ, ಟೆನ್ಷನ್ನಿಂದ ಬಿಡಿಸಿಕೊಂಡು ಲವಲವಿಕೆಯಿಂದ ಕತ್ತಲಾದ ಮೇಲೆ ಎಕ್ಸಿಕ್ಯೂಟಿವ್‌ಗಳು ಮನೆಗೆ ಸೇರುತ್ತಾರೆ. ಮನೆಗೆ ಬಂದು ಉಗುರು ಬೆಚ್ಚಗಿನ ಸ್ನಾನ ಮಾಡಿದೊಡನೆಯೇ ಬಹಳವಾಗೇ ರಿಲ್ಯಾಕ್ಸೇಷನ್ ಉಂಟಾಗುತ್ತದೆ. ಒಳ್ಳೇ ಉಲ್ಲಾಸಿತ–ಪ್ರಶಾಂತ ಮಾನಸಿಕ ಸ್ಥಿತಿಯಲ್ಲಿ ಹೆಂಡತಿ ಮಕ್ಕಳ ಜೊತೆಯಲ್ಲಿ ಊಟ ಮಾಡುತ್ತಾರೆ. ಸ್ವಲ್ಪ ಹೊತ್ತು ಸಂತೋಷವಾಗಿ ಕಳೆದ ಬಳಿಕ ನಿದ್ರೆ ಹೋಗುತ್ತಾರೆ. ಬೆಳಿಗ್ಗೆಗೆಲ್ಲ ಅವರು ತುಂಬಾನೇ ಪ್ರೆಷ್ಷಾಗಿ ಮತ್ತೆ ಕೆಲಸಕ್ಕೆ ಹೋಗುವುದಕ್ಕೆ ಸಿದ್ಧರಾಗುತ್ತಾರೆ. ಒತ್ತಡ ನಿರ್ವಹಣೆಗೆ ವ್ಯಾಯಾಮವೊಂದು ಮುಖ್ಯವಾದ ಭಾಗ. ಆಫೀಸ್‌ನಲ್ಲಿನ ಸಮಸ್ಯೆಗಳನ್ನು

ಮನೆವರೆಗೂ ತರಬಾರದು. ಆಫೀಸ್ನಲ್ಲೇ ಬಿಟ್ಟುಬರಬೇಕು. ಯಾಕೆಂದರೆ ಮನೆ ಆಫೀಸ್ ಅಲ್ಲವಾದ್ದರಿಂದ. ಹಾಗಿರುವಾಗ ನಿಮಗಿರುವ ಶಕ್ತಿಯನ್ನೆಲ್ಲಾ ಮನೆಗಾಗಿಯೇ ಬಳಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ.

**ಪ್ರತಿದಿನ ವ್ಯಾಯಾಮ**

ಹಲವಾರು ಸಂಶೋಧನೆಗಳಿಂದ ತಿಳಿದುಬಂದ ವಿಷಯವೇನೆಂದರೆ ರೆಗ್ಯುಲರ್ ಆಗಿ ವ್ಯಾಯಾಮ ಮಾಡುವುದರಿಂದ ನಮಗೆ ಸ್ನಾಯುಗಳಲ್ಲಿನ ಕಾರ್ಯತತ್ಪರತೆ ಬೆಳೆದು ಮೆದುಳಿನಲ್ಲಿನ ಆಲ್ಫಾವೇವ್ ಆಕ್ಟಿವಿಟಿಯನ್ನು ಉದ್ದೀಪನ ಮಾಡುತ್ತದೆ. ಇದೇ ವಿಧವಾಗಿ ಮೆದುಳಿನಲ್ಲಿ ಆಲ್ಫಾವೇವ್ ಕಾರ್ಯವೈಖರಿಯನ್ನು ಉದ್ದೀಪನ ಮಾಡುವುದು ಮತ್ತೊಂದು ಎರಡು ಸಹ ಇವೆ. ಅದೊಂದು ಮೆಡಿಟೇಷನ್ – ಧ್ಯಾನ, ಎರಡನೆಯದು ರಿಲ್ಯಾಕ್ಸೇಷನ್.

ಈ ರೀತಿಯಾಗಿ ಅರ್ಧಗಂಟೆ ಹೊತ್ತು ಏರೋಬಿಕ್ ಎಕ್ಸರ್‌ಸೈಜ್ ಮಾಡುವುದರಿಂದ ಮೆದುಳಿನಲ್ಲಿರುವ ಪಿಟ್ಯುಟರಿ ಗ್ರಂಥಿಗಳಿಂದ ಎಂಡೋರ್ಫಿನ್ ಮಾರ್ಫಿನಂಥ ಪದಾರ್ಥಗಳು ಉತ್ಪತ್ತಿ ಆಗುತ್ತವೆ. ಇವು ಪೆಯಿನ್‌ಕಿಲ್ಲರ್ಸ್‌ನಂತೆ ಕೆಲಸ ಮಾಡುವುದೇ ಅಲ್ಲದೇ ದೇಹಕ್ಕೆ ಪ್ರಶಾಂತತೆಯನ್ನು ಉಂಟಾಗಿಸುತ್ತವೆ. ಏರೋಬಿಕ್ ವ್ಯಾಯಾಮದಿಂದ ದೇಹಕ್ಕೆ ಆಗುವ ಲಾಭ ಇದು! ಅಷ್ಟೇ ಅಲ್ಲದೇ ವ್ಯಾಯಾಮದಿಂದ ಮತ್ತೊಂದು ಲಾಭ ಕೂಡಾ ಇದೆ. ನಮ್ಮಲ್ಲಿ ಉಂಟಾದ (ತಲೆದೋರಿದ ) ಒತ್ತಡ ಭಾರವನ್ನು ಶರೀರದಲ್ಲಿನ ವಿವಿಧ ಅವಯವಗಳಿಗೆ ವಿತರಿಸುತ್ತದೆ. "ಒಂದೇ ಕೆಲಸವನ್ನು ಅದೇ ಕೆಲಸವಾಗಿ ಮಾಡುವುದು ಮತ್ತೊಂದು ಕೆಲಸದಲ್ಲಿ ತೊಡಗಿದರೆ ಅದು ವಿಶ್ರಾಂತಿಯಂತೆ ಕೆಲಸ ಮಾಡಿ ನಿಮ್ಮ ಕೆಲಸದ ಒತ್ತಡವನ್ನು ತಗ್ಗಿಸುತ್ತದೆ." ಎನ್ನುತ್ತಾರೆ ಡಾಕ್ಟರ್ ಹನ್ಸ್‌ಸಲ್ಯೆ. ತನ್ನ ಪುಸ್ತಕ ( Stress without distress )ನಲ್ಲಿ

ನೀವು ಮಾಡುವ ಕೆಲಸ ನಿಮಗೆ ಸ್ವಲ್ಪ ತೊಂದರೆ ಉಂಟಾಗಿಸಿದಾಗ ಅಂದರೆ ಜಾಗಿಂಗ್‌ಗಾಗಲಿ, ಅಥವಾ ಸ್ವಿಮ್ಮಿಂಗ್‌ಗಾಗಲಿ ಹೋದರೆ ನಮಗೆ ರಿಲಾಕ್ಸೆಡ್ ಅಗಿದ್ದು ಮತ್ತೆ ಆ ಕೆಲಸವನ್ನು ಪೂರ್ತಿ ಮಾಡುವುದಕ್ಕೆ ಅನುಕೂಲವಾಗಿರುತ್ತದೆ. ಹಾಗಲ್ಲದೆ ಅದೇ ಕೆಲಸವಾಗಿ ಆ ಕೆಲಸದ ಬಗ್ಗೆನೇ ಆಲೋಚಿಸುತ್ತಾ ಕುಳಿತರೆ ನಿಮಗೆ ಉಳಿಯುವುದು ನಿತ್ರಾಣವೇ, ನಿರಾಶೆಯೇ! ಆದ್ದರಿಂದ ನಿಮ್ಮ ಮನೋಭಾರವನ್ನು ನಿಮ್ಮ ಸ್ನಾಯುಗಳು ನಿಮ್ಮ ಮೆದುಳಿಗೆ ವಿಶ್ರಾಂತಿಯನ್ನು ಕಲ್ಪಿಸುತ್ತವೆ. ಪ್ರಶಾಂತತೆಯನ್ನು ಅನುಗ್ರಹಿಸುತ್ತವೆ.

ಮತ್ತೊಬ್ಬ ಮನೋವೈದ್ಯ ವಿಲಿಯಂ ಜೇಮ್ಸ್ ಹೀಗೆಂದಿದ್ದಾರೆ "ನಿಮ್ಮ ಮನೋವ್ಯಥೆಯಿಂದ ಮಸ್ಕುಲರ್ ಸೈಯಿನನ್ನು ಬೇರ್ಪಡಿಸಿದ್ದೇ ಆದರೆ ನಿಮ್ಮ ಮನೋವ್ಯಥೆ ಮಟಮಯವಾಗಿ ಹೋಗುತ್ತದೆ." ಆದ್ದರಿಂದ ನೀವು ಮಾಡುವ ಕೆಲಸದಲ್ಲಿನ ಬದಲಾವಣೆ ನಿಮ್ಮ ಮನೋವಿಕಾಸಕ್ಕೆ ನೆರವಾಗುತ್ತದೆ. ಮಾನಸಿಕ ಒತ್ತಡ ಕಡಿಮೆಯಾಗುತ್ತದೆ. ಅದನ್ನೇ ಡೈವರ್ಷನ್ ಎನ್ನುತ್ತಾರೆ. ಡೈವರ್ಷನ್‌ನಿಂದ ಮಾನಸಿಕ ಪರಿಣಾಮ ಉಂಟಾಗುತ್ತದೆ. ಅದರಿಂದ ರಿಲ್ಯಾಕ್ಸೇಷನ್ ಸಾಧ್ಯವಾಗುತ್ತದೆ.

ದೈಹೀಕ ವ್ಯಾಯಾಮದಿಂದ ಮಾನಸಿಕ ಸ್ಥಿತಿಯಲ್ಲಿ ವಿಶೇಷವಾದ ಬದಲಾವಣೆ ಉಂಟಾಗುತ್ತದೆ. ಅದು ಮನಸ್ಸಿನ ಮೇಲೆ ವಿಶೇಷವಾಗಿ ಅದರ ಪ್ರಭಾವ ತೋರಿಸುತ್ತದೆ. ಅದರಿಂದಾಗಿ–

1. ನಮ್ಮಲ್ಲಿನ ಕೋಪ, ತಳಮಳ, ನಿರಾಶೆ–ಹತಾಶೆ, ಎಗ್ರಿಷನ್, ಹಾಸ್ಟಿಲಿಟೀ ಮಾಯವಾಗುತ್ತವೆ.
2. ಇನ್‌ಸಾಮ್ನಿಯಾ ಕಡಿಮೆಯಾಗುತ್ತದೆ.
3. ಹೊಸ ಪರಿಚಯಗಳಾಗುವುದಕ್ಕೆ ಅವಕಾಶಗಳು ಲಭಿಸುತ್ತವೆ. ಸಾಮಾಜಿಕವಾಗಿ ಲಾಭ ಹೊಂದುವ ಅವಕಾಶಗಳು ಇರುತ್ತವೆ.
4. ನಾಲ್ವರ ಜೊತೆ ಸೇರಿ ಸಮಾಜಪರವಾದ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವ ಅವಕಾಶಗಳು ಲಭಿಸುತ್ತವೆ.
5. ಶಿಸ್ತು ಬದ್ಧತೆ ರೂಢಿಯಾಗುತ್ತವೆ.
6. ಆರೋಗ್ಯಕರವಾದ ಜೀವನಕ್ಕೆ ಕೆಲಸಕ್ಕೆ ಬರುವ ಕಾರ್ಯಕ್ರಮಗಳನ್ನು ಕೈಗೊಳ್ಳುವ ಅವಕಾಶಗಳು ಲಭಿಸುತ್ತವೆ.

ಏರೋಬಿಕ್ ವ್ಯಾಯಾಮದ ಮೂಲಕ ಆರೋಗ್ಯ ಅಭಿವೃದ್ಧಿ ಆಗುವುದೇ ಅಲ್ಲದೆ ಕಾರ್ಡಿಯೋವೆಸ್ಕ್ಯುಲಾರ್ ಸಿಸ್ಟಂ ತುಂಬಾನೇಪೆಟ್ಟು ತಿನ್ನುತ್ತದೆ. ಆದ್ದರಿಂದ ಅದರ ದುಷ್ಪರಿಣಾಮಗಳನ್ನು ನಿವಾರಿಸುವುದಕ್ಕೆ ಏರೋಬಿಕ್ ವ್ಯಾಯಾಮ ತುಂಬಾ ಒಳ್ಳೆಯದು. ಹಾರ್ಟ್‌ಬೀಟ್ ರೇಟ್, ರಕ್ತದೊತ್ತಡ ಹತೋಟಿಗೆ ಬರುತ್ತವೆ. ಇವೆರಡು ಒತ್ತಡದಲ್ಲಿ ತುಂಬಾ ಹೆಚ್ಚಾಗುತ್ತದೆ. ಆದ್ದರಿಂದ ಒತ್ತಡದಿಂದ ಆಗುವ ದುಷ್ಫಲಗಳನ್ನು ಇದರ ಮೂಲಕ ನಿವಾರಿಸಬಹುದು. ಕಾರ್ಡಿಯೋ ವೆಸ್ಕ್ಯುಲರ್ ಫಿಟ್ಸ್ ಇರುವ ವ್ಯಕ್ತಿಗಳಿಗೆ ಏರೋಬಿಕ್ ವ್ಯಾಯಾಮಗಳು ತುಂಬಾನೇ ಉಪಕರಿಸುತ್ತವೆ. ದಿನಾ ಇರುವ ಮಾನಸಿಕ ಒತ್ತಡಗಳ ಪ್ರಭಾವ ಕಡಿಮೆಯಾಗುತ್ತವೆ.

**ಪ್ರೋಗ್ರೆಸಿವ್ ಮಸೆಲ್ ರಿಲ್ಯಾಕ್ಸೇಷನ್**

ಪ್ರೊಗ್ರೆಸಿವ್ ಮಸೆಲ್ ರಿಲ್ಯಾಕ್ಸೇಷನನ್ನು ಡಾಕ್ಟರ್ ಎಂಡ್ಸೆಂಡ್ ಜಾಕೋಬ್‌ಸನ್ 1930ರಲ್ಲಿ ಕಂಡುಹಿಡಿದರು. ಇದರ ಮುಖೇನ ಓಪ್ ರಿಲ್ಯಾಕ್ಸೇಷನ್ ಒಂದು ಆದ್ಯತೆ ವ್ಯಕ್ತವಾಗುತ್ತದೆ. ಇದರಿಂದಾಗಿ ಶರೀರ ಇಡೀ ಹರಡಿರುವ ಸ್ನಾಯುಗಳ ಪ್ರೋಗ್ರೆಸಿವ್ ರಿಲ್ಯಾಕ್ಸೇಷನ್ ತಂತ್ರ (ಟೆಕ್ನಿಕ್ ) ತಿಳಿಯುತ್ತದೆ. ಯಾಕೆಂದರೆ ತೀವ್ರವಾದ ಒತ್ತಡದಿಂದ ಕ್ರಮೇಣ ರಿಲ್ಯಾಕ್ಸ್ ಆಗುವುದಕ್ಕೆ ಸಾಧ್ಯವಾಗುತ್ತದೆ. ಅದು ಕೂಡಾ ಶಕ್ತಿಗನುಗುಣವಾಗಿ ಅಂದರೆ ಧಾರಾಳವಾಗಿ ರಿಲಾಕ್ಸ್ ಆಗುವುದಕ್ಕೆ ಸಾಧ್ಯವಾಗುತ್ತದೆ.

ದಿನನಿತ್ಯ ನಾವು ಅನುಭವಿಸುವ ಒತ್ತಡಗಳನ್ನು, ಅದರ ಮೂಲಕ ಉಂಟಾಗುವ ವಿಷಾದ ಛಾಯೆಗಳನ್ನು ಈ ಮಾರ್ಗ ಮುಖೇನ ನಿವಾರಿಸಿಕೊಳ್ಳಬಹುದು.

**ರಿಲ್ಯಾಕ್ಸೇಷನ್ ವ್ಯಾಯಾಮಗಳನ್ನು ಎಲ್ಲಿ ಮಾಡಬೇಕು?**

ರಿಲ್ಯಾಕ್ಸೇಷನ್ ವ್ಯಾಯಾಮಗಳನ್ನು ವಿಶಾಲವಾಗಿರುವ ಕೊಠಡಿಗಳಲ್ಲಿ, ಒಳ್ಳೆ ಗಾಳಿ-ಬೆಳಕು ಪಸರಿಸುವ ಜಾಗಗಳಲ್ಲಿ ರಿಲ್ಯಾಕ್ಸೇಷನ್ ವ್ಯಾಯಾಮವನ್ನು ಮಾಡಬೇಕು. ಅದು ಕೂಡ ಒಂದು ವಿಧಾನದಲ್ಲಿ ಶಿಸ್ತುಬದ್ಧವಾಗಿ ಸಮಯವನ್ನು ಅನುಸರಿಸುತ್ತಾ ಮಾಡಬೇಕು. ಒಬ್ಬೊಬ್ಬರ ವಿಧಾನವನ್ನು ಅನುಸರಿಸುತ್ತಲೇ ಅದನ್ನೇ ಒಟ್ಟಾರೆ ಅನುಸರಿಸಬೇಕೆ ಹೊರತು ಮಧ್ಯದಲ್ಲಿ ಕಾರಣಾಂತರಗಳಿಂದ ಅನುಸರಿಸುವ ವಿಧಾನವನ್ನು ಬದಲಾಯಿಸಬಾರದು. ಇಲ್ಲಿ ನಾವು ಮುಖ್ಯವಾಗಿ ಗಮನಿಸಬೇಕಾದ ವಿಷಯ ಏನೆಂದರೆ ನೀವು ವ್ಯಾಯಾಮ ಮಾಡಿದ ಪ್ರತಿಬಾರಿ ನಿಮ್ಮ ಮಸಲ್ ರಿಲ್ಯಾಕ್ಸೇಷನ್ ಪ್ರಭಾವ ಹೇಗಿದೆಯೋ ಗಮನಿಸುತ್ತಿರಬೇಕು. ನೀವು ಮಾಡುವ ವ್ಯಾಯಾಮ ಶರೀರದಲ್ಲಿನ ಎಲ್ಲಾ ಮಜಲ್ ತಂಡಗಳಿಗೂ ಸೇರಿದ್ದಾಗಿರಬೇಕು. ಪ್ರತಿ ವ್ಯಾಯಾಮಕ್ಕೆ ಕನಿಷ್ಟ ಇಪ್ಪತ್ತು ನಿಮಿಷ ಮೀಸಲಿಡಬೇಕು. ಅದಕ್ಕಿಂತ ಕಡಿಮೆ ಸಮಯ ತೆಗೆದುಕೊಂಡು ತ್ವರಿತಗತಿಯಲ್ಲಿ ವ್ಯಾಯಾಮ ಮಾಡಿದರೆ ಒಳ್ಳೆ ಫಲಿತಾಂಶಗಳು ಬರಲಾರದು. ಸಾಮಾನ್ಯವಾಗಿ ಪ್ರತಿದಿನ ಎರಡು ಸಾರಿ ಈ ರೀತಿಯಾದ ಮಜಲ್ ರಿಲ್ಯಾಕ್ಸೇಷನ್ ವ್ಯಾಯಾಮ ಮಾಡಬೇಕು.

ಈ ವ್ಯಾಯಾಮಗಳನ್ನು ಮಾಡುವ ವ್ಯಕ್ತಿ ನೆಲದ ಮೇಲೆ ಮಲಗಿ ಮುಖವನ್ನು ಮೇಲಕ್ಕೆತ್ತಿ ಮೊಣಕಾಲುಗಳ ಕೆಳಗೆ ಒಂದು ದಿಂಬು ಇಟ್ಟುಕೊಂಡು, ಸಕಾರಾತ್ಮಕ ದೃಷ್ಟಿಕೋನದಿಂದ ಮಾಡಬೇಕು. ದೇಹವನ್ನು ಎಲ್ಲಿವರೆಗೆ ಸಾಧ್ಯವಾದರೆ ಅಲ್ಲಿಯವರೆಗೂ ರಿಲಾಕ್ಸ್ ಮಾಡಬೇಕು. ದೇಹದಲ್ಲಿನ ಪ್ರತಿ ಮಜಲ್ ತಂಡವನ್ನು ದೃಷ್ಟಿಯಲ್ಲಿಟ್ಟುಕೊಂಡು, ಸನ್ನಿವೇಶ ಪ್ರಕಾಶ ಈ ವ್ಯಾಯಾಮಗಳನ್ನು ಮಾಡಬೇಕು. ಸ್ನಾಯುಗಳನ್ನು ಬಿಗಿಹಿಡಿಯಬೇಕು; ಪೂರ್ತಿಯಾಗಿ ಬಿಗಿಹಿಡಿದರೆ ಸ್ನಾಯುಗಳು ಹಿಡಿದುಕೊಳ್ಳುತ್ತವೆ. ನೀವು ನಿಜಕ್ಕೂ ವ್ಯಾಯಾಮ ಮಾಡಲಾರಿರಿ. ಮೊದಲು ಸ್ನಾಯುಗಳನ್ನು ಬಿಗಿಯಾಗಿಟ್ಟು ನಂತರ ಕ್ರಮೇಣ ಬಿಡುಗಡೆ ಮಾಡಬೇಕು. ಆಗ ಹೊರತು ಆಶಿಸಿದ ರೀತಿಯಲ್ಲಿ ರಿಲ್ಯಾಕ್ಸೇಷನ್ ಪಡೆಯಲಾರಿರಿ; ಸ್ನಾಯುಗಳನ್ನು ಐದು ಸೆಕೆಂಡಗಳಿಗೆ ಮೀರಿ ಬಿಗಿಸಬಾರದು. ನಂತರ ಪೂರ್ತಿಯಾಗಿ ಸ್ನಾಯುಗಳನ್ನು ಸಡಿಲ ಮಾಡಬೇಕು. ಮಜಲ್ ಕಂಟ್ರಾಕ್ಷನ್‌ಗೆ ರಿಲ್ಯಾಕ್ಸೇಷನ್‌ಗೆ ಸ್ವಲ್ಪ ಸಮಯ ಮೀಸಲಿಡಬೇಕು; ಆ ಬಳಿಕವೇ ಮತ್ತೊಂದು ಗ್ರೂಪ್- ತಂಡಕ್ಕೆ ಹೋಗಬೆಕು.

ಸಂಪೂರ್ಣ ಪ್ರೋಗ್ರೆಸ್ಸಿವ್ ಮಜಲ್ ರಿಲ್ಯಾಕ್ಸೇಷನ್ ಹೇಗೆ ಮಾಡಬೇಕು?

1. ಮೊದಲು ನಿಮ್ಮ ಹೆಬ್ಬೆರಳನ್ನು ಬಗ್ಗಿಸಿ ನಿಮ್ಮ ಪಾದಗಳ ಮೇಲೆ ಭಾರ ನಿಮ್ಮ ಕಾಲುಗಳ ಮಜಲ್ ಟೆನ್ಷನನ್ನು ಪಾದಗಳ ಬಳಿ ಗಮನಿಸಿರಿ, ಅಂದರೆ ಹೆಬ್ಬೆರಳಿನಿಂದ ಪಾದಗಳ ಮೇಲ್ಭಾಗದವರೆಗಿನ ಟೆನ್ಷನ್ ಗಮನಿಸಿರಿ. ನಂತರ ರಿಲ್ಯಾಕ್ಸ್ ಆಗಿ, ಮತ್ತೊಮ್ಮೆ ಇದನ್ನೇ ರಿಪೀಟ್ ಮಾಡಿ.
2. ನಂತರ ಪಾದಗಳನ್ನು ನಿಮ್ಮ ಮುಖದ ಕಡೆಗೆ ಚೆನ್ನಾಗಿ ಬಾಗಿಸಿರಿ. ನಿಮ್ಮ ಪಾದಗಳ ಹತ್ತಿರ ತೊಡೆಗಳ ಹತ್ತಿರ ನೀವು ಮಜಲ್ ಟೆನ್ಷನನ್ನು ನೋಟ್ ಮಾಡಿರಿ; ಹಾಗೇ ಸ್ವಲ್ಪ ಹೊತ್ತು ಬಿಡಿ; ಆ ಬಳಿಕ ರಿಲ್ಯಾಕ್ಸ್ ಆಗಿ; ಮತ್ತೊಮ್ಮೆ ರಿಪೀಟ್ ಮಡಿ.
3. ನಿಮ್ಮ ಹಿಮ್ಮಡಿಗಳನ್ನು ನೆಲದ ಮೇಲೆ ಚೆನ್ನಾಗಿ ಊರಿಡಿ. ನಿಮ್ಮ ತೊಡೆಗಳ ಸ್ನಾಯುಗಳ ಮೇಲೆ ಅದರ ಪ್ರಭಾವವನ್ನು ನೋಟ್ ಮಾಡಿ; ರಿಲಾಕ್ಸ್ ರಿಪೀಟ್ ಮಾಡಿ.
4. ನಿಮ್ಮ ಬಲ ತೊಡೆಯನ್ನು ನೆಲದ ಮೇಲಿನಿಂದ ಮೇಲಕ್ಕೆತ್ತಿ ನೇರವಾಗಿಡಿ, ಕಂಟ್ರಾಕ್ಟ್ ಮಾಡಿ. ಹಾಗೇ ಸ್ವಲ್ಪ ಹೊತ್ತು ಇಟ್ಟು ಟೆನ್ಷನ್ ಸ್ಟಡೀ ಮಾಡಿ, ರಿಲಾಕ್ಸ್; ಹಾಗೇ ಎಡಗಾಲನ್ನು ಚಾಚಿರಿ; ಟೆನ್ಷನನ್ನು ಸ್ಟಡೀ ಮಾಡಿ; ರಿಪೀಟ್ ಮಾಡಿ ( ಎರಡೂ ಕಾಲುಗಳನ್ನು ಸಹ)
5. ಈಗ ಪಕ್ಕೆಗಳನ್ನು ನೆಲದ ಮೇಲಿನಿಂದ ಸ್ವಲ್ಪ ಮೇಲಕ್ಕೆತ್ತಿರಿ, ಹಾಗೇ ಇರಿಸಿರಿ. ರಿಲಾಕ್ಸ್ ಆಗಿ; ಮತ್ತೆ ರಿಪೀಟ್ ಮಾಡಿ.
6. ಈಗ ಕಿಬ್ಬೊಟ್ಟೆ ಹತ್ತಿರ ಇರುವ ಸ್ನಾಯುಗಳನ್ನು ಸಂಕುಚಿತ ಮಾಡಿ, ಹಾಗೇ ಇರಿಸಿರಿ. ರಿಲಾಕ್ಸ್ ಆಗಿ; ಮತ್ತೆ ರಿಪೀಟ್ ಮಾಡಿ.
7. ನಿಮ್ಮ ಉದರ (ಹೊಟ್ಟೆ)ವನ್ನು ಒಳಗೆ ಚೆನ್ನಾಗಿ ಎಳೆದುಕೊಂಡು ನಿಮ್ಮ ಬೆನ್ನುಹುರಿವರೆಗೆ ಹಿಂದಕ್ಕೆ ಎಳೆಯಿರಿ, ಹಾಗೇ ಇರಿ. ಕ್ರಮೇಣ ಮೆಲ್ಲನೆ ರಿಲಾಕ್ಸ್ ಆಗಿ.ಟೆನ್ಷನ್ ನೋಟ್ ಮಾಡಿ. ಹೊಟ್ಟೆಯನ್ನು ಒಳಗೆಳೆದು, ನೆಲದ ಮೇಲೆ ಅಂಗಾತ ಮಲಗಿರಿ. ಹೊಟ್ಟೆಯನ್ನು ಯಥಾಸ್ಥಾನಕ್ಕೆ ಕರೆತನ್ನಿ. ರಿಲ್ಯಾಕ್ಸ್ ಆಗಿ; ಮತ್ತೆ ರಿಪೀಟ್ ಮಾಡಿ.
8. ಉಸಿರನ್ನು ಚೆನ್ನಾಗಿ ಒಳಗೆಳೆದುಕೊಂಡು ಉಸಿರನ್ನು ಒಳ ಬಂಧಿಸಿರಿ. ನಂತರ ನಿಧಾನವಾಗಿ ಹೊರ ಹಾಕಿರಿ. ರಿಪೀಟ್ ಮಾಡಿ. ನೀವು ಉಸಿರು ಹೀರುವುದನ್ನು ಗಮನಿಸಿರಿ; ರಿಲ್ಯಾಕ್ಸ್ ಆಗುವುದನ್ನು ಗಮನಿಸಿರಿ.
9. ನಿಮ್ಮೆರಡು ಕೈಗಳನ್ನು ದೇಹದ ಇಕ್ಕೆಡೆಗಳಲ್ಲಿಡಿ; ಮುಷ್ಟಿ ಬಿಗಿಸಿರಿ; ಹಾಗೇ ಇರಿ. ಟೆನ್ಷನನ್ನು ಸ್ಟಡೀ ಮಾಡಿ, ಸಡಿಲಿಸಿ, ಮತ್ತೆ ಪುನರುಕ್ತಿ(ರಿಪೀಟ್) ಮಾಡಿ.
10. ಎರಡು ಕೈಗಳನ್ನು ನಿಮ್ಮ ಭುಜಗಳ ಹತ್ತಿರಕ್ಕೆ ಮೊಣಕೈಗಳ ಹತ್ತಿರಕ್ಕೆ ಬಗ್ಗಿಸಿರಿ. ಎರಡು ಕೈಗಳನ್ನು ಸೇರಿಸಿ ಬಲವಾಗಿ

ಬಂಧಿಸಿರಿ. ಟೆನ್ಷನನ್ನು ಗಮನಿಸಿರಿ, ಸಡಿಲಿಸಿರಿ,ರಿಲಾಕ್ಸ್ ಆಗಿ; ಮತ್ತೆ ರಿಪೀಟ್ ಮಾಡಿ.

11. ನಿಮ್ಮ ಎರಡು ಕೈಗಳು ನೆಲದ ಮೇಲೆ ಅಂಗೈಗಳೆರಡೂ ಮೇಲಿರುವಂತೆ ಅಮುಕಿ ನಿಮ್ಮ ಟ್ರೈಸೆಪ್ ಮೇಲಿರುವ ಟೆನ್ಷನನ್ನು ಗಮನಿಸಿರಿ; ರಿಲ್ಯಾಕ್ಸ್ ಆಗಿ ರಿಪೀಟ್ ಮಾಡಿ.
12. ನಿಮ್ಮೆರಡು ಭುಜಗಳನ್ನು ನಿಮಗೆ ಸಾಧ್ಯವಾಗುವಷ್ಟು ಮೇಲಕ್ಕೆತ್ತಿರಿ; ಹಾಗೇ ಇರಿಸಿ ಟೆನ್ಷನ್ ಗಮನಿಸಿರಿ; ರಿಲಾಕ್ಸ್ ಆಗಿ; ರಿಪೀಟ್ ಮಾಡಿ.
13. ನಿಮ್ಮ ತಲೆಯನ್ನು ಹಿಂದಕ್ಕೆ ಬಗ್ಗಿಸಿರಿ. ಟೆನ್ಷನ್ ಗಮನಿಸಿರಿ. ನಿಮ್ಮ ಬೆನ್ನು ಹುರಿಯಲ್ಲಿ, ನಿಮ್ಮ ಕತ್ತಿನಲ್ಲಿ ಟೆನ್ಷನ್ ಗಮನಿಸಿರಿ; ರಿಲಾಕ್ಸ್ ರಿಪೀಟ್ ಮಾಡಿ.
14. ಈಗ ತಲೆಯನ್ನು ಗುಂಡಿಗೆ ಮೇಲೆ ಮುಂದಕ್ಕೆ ಬಾಗಿಸಿರಿ. ಕತ್ತಿನ ಮೇಲಿನ ಟೆನ್ಷನ್ ಗಮನಿಸಿರಿ; ರಿಲಾಕ್ಸ್, ರಿಪೀಟ್ ಮಾಡಿ.
15. ನಿಮ್ಮ ನಾಲಿಗೆಯನ್ನು ನಿಮ್ಮ ಬಾಯಿ ಮೇಲ್ಭಾಗಕ್ಕೆ ಲೇಪಿಸಿರಿ. ಹಾಗೇ ಇಟ್ಟು ಟೆನ್ಷನ್ ಗಮನಿಸಿರಿ. ರಿಲ್ಯಾಕ್ಸ್ ಆಗಿ, ರಿಪೀಟ್ ಮಾಡಿ.
16. ನಿಮ್ಮ ಹಲ್ಲುಗಳನ್ನು ಜೋಡಿಸಿ ಒತ್ತಿಡಿರಿ; ಟೆನ್ಷನನ್ನು ಗಮನಿಸಿರಿ. ರಿಲಾಕ್ಸ್ ಆಗಿ; ರಿಪೀಟ್ ಮಾಡಿ.
17. ನಿಮ್ಮ ಕಣ್ಣುಗಳನ್ನು ಗಟ್ಟಿಯಾಗಿ ಮುಚ್ಚಿಬಿಡಿ. ಟೆನ್ಷನನ್ನು ಗಮನಿಸಿರಿ. ಕಣ್ಣುಗಳನ್ನು ಮುಚ್ಚಿಕೊಂಡೇ ರಿಲಾಕ್ಸ್ ಆಗಿ. ರಿಪೀಟ್ ಮಾಡಿ.
18. ನಿಮ್ಮ ಫೋರಹೆಡ್ (ಹಣೆಭಾಗ)ಅನ್ನು ಸಂಕುಚಿತಗೊಳಿಸಿರಿ, ಟೆನ್ಷನನ್ನು ಗಮನಿಸಿರಿ, ರಿಲಾಕ್ಸ್ ಆಗಿ; ರಿಪೀಟ್ ಮಾಡಿ.

ಈ ರೀತಿಯಾಗಿ ಪ್ರತಿದಿನ ಮಾಡಿ. ನಿಮಗೆ ಸಮಯ ಇಲ್ಲದೆ ಹೋದರೆ ಕನಿಷ್ಟ ನಿಮ್ಮ ಸ್ನಾಯುಗಳು ಯಾವ ಜಾಗದಲ್ಲಿ ನೋವಾಗಿದೆಯೋ ಆ ಜಾಗದಲ್ಲಷ್ಟೇ ಮಾಡಿ. ಬಿಟ್ಟುಬಿಡಬೇಡಿ. ಯಾವುದನ್ನೇ ಆದರೂ ಮುಂದುವರೆಸುತ್ತಾ ಹೋದರೆ ಫಲಿತಾಂಶ ಲಭಿಸುತ್ತದೆ. ಸಾಧ್ಯವಾದ ಮಟ್ಟಿಗೆ ಪೂರ್ತಿಯಾಗಿ ಮಾಡುವುದಕ್ಕೆ ಪ್ರಯತ್ನಿಸಿರಿ.

ಶ್ರೀಧರ ಸ್ಮರಣೆ

ಲೇ॥ ಶ್ರೀ ಜಿ. ಟಿ. ಶ್ರೀಧರಶರ್ಮ
9480473568

# ಶ್ರೀಧರಸ್ವಾಮಿಗಳು–ದೇವರು ಬೇರೆ ಬೇರೆ ಅಲ್ಲ, ಎಲ್ಲವೂ ಶ್ರೀಧರರೇ ಸರಿ

ಶ್ರೀಧರಸ್ವಾಮಿಗಳನ್ನೇ ದತ್ತಾವತಾರಿ, ಸಾಕ್ಷಾತ್ ಭಗವಂತ ಎಂದು ತಿಳಿದು ಸದಾ ಅವರ ಧ್ಯಾನದಲ್ಲಿಯೇ ಇರುವವರು ಸಾಕಷ್ಟು ಭಕ್ತರಿದ್ದಾರೆ. ಅವರಿಗೆ ಶ್ರೀಧರರ ಮಹಿಮೆ, ಪವಾಡ, ಉಪದೇಶ ಮುಂತಾದವುಗಳ ಬಗ್ಗೆ ಎಷ್ಟು ಹೇಳಿದರೂ ಕಡಿಮೆಯೇ. ಅಂಥ ಒಬ್ಬ ಸಾಧಕಿಯ ಸ್ಮರಣೆಯಿದು.

ಸಾಗರದ ರೈಲ್ವೇ ನಿಲ್ದಾಣದ ತೀರ ಹತ್ತಿರ ಕೋಳಿವಾಡ ಸಹೋದರರ ಮನೆಯೊಂದಿದೆ. ಅಲ್ಲಿ ಸುಮಾರು 85 ವರ್ಷದ ನಾಗರತ್ನಮ್ಮ ಕೋಳಿವಾಡ ಎನ್ನುವ ಶ್ರೀಧರ ಭಕ್ತರೊಬ್ಬರಿದ್ದಾರೆ. ಅವರು ಹುಟ್ಟಿದ್ದು, ಬೆಳೆದದ್ದು, ಪತಿಯ ಮನೆ ಎಲ್ಲವೂ ಸಾಗರ. ಸರಕಾರಿ ನೌಕರಿಯಲ್ಲಿ ಅವರ ಪತಿಯಿದ್ದುದರಿಂದ ಬೀರೂರು, ಶ್ರೀರಂಗಪಟ್ಟಣ, ಶಿಕಾರಿಪುರ ಹೀಗೆ ಕೆಲವು ಊರುಗಳ ಪರಿಚಯವಿದೆ. ನಾಗರತ್ನಮ್ಮನವರಿಗೆ ಸುಮಾರು 21 ವರ್ಷವಾಗಿದ್ದಾಗ ಗುರುಚರಿತ್ರೆಯನ್ನು ಪಾರಾಯಣ ಮಾಡಲು ಶುರುಮಾಡಿದವರು ಇತ್ತೀಚಿನವರೆಗೂ ಬಿಟ್ಟಿರಲಿಲ್ಲವಂತೆ. ಅವರು ಶಿಕಾರಿಪುರದ ಕೇವಲಾನಂದಾಶ್ರಮದ ಬಳಿ ದತ್ತ ಮಂದಿರಕ್ಕೆ ಪ್ರತಿದಿನ ಬೆಳಿಗ್ಗೆ, ಮಧ್ಯಾಹ್ನ ಮತ್ತು ಸಂಜೆ ಹೋಗುತ್ತಿದ್ದರು. ಸಾಗರದಲ್ಲಿದ್ದಾಗ ಅಗ್ರಹಾರದ ದತ್ತಮಂದಿರಕ್ಕೂ ಹೋಗುತ್ತಿದ್ದರು. ಎಲ್ಲಿಗೆ ಹೋದರೂ ಅವರು ಕಾಣುವುದು ಶ್ರೀಧರರನ್ನೇ. ಸದಾ ಲಲಿತಾ ಸಹಸ್ರನಾಮ, ರಾಮರಕ್ಷಾ ಸ್ತೋತ್ರ, ದೇವರ ಹಾಡುಗಳು ಅಥವಾ ಗುರುಚರಿತ್ರೆ ಓದಲೇಬೇಕು. ಶ್ರೀಧರರ "ನಮಶ್ಯಾಂತಾಯ,,,," ವಂತೂ ತಪ್ಪುವಂತೆಯೇ ಇಲ್ಲ.

ಒಮ್ಮೆ ವರದಪುರಕ್ಕೆ ಹೋಗಿ ಶ್ರೀಧರರ ಪಾದಪೂಜೆ, ಭಿಕ್ಷೆ ಮಾಡಿದಾಗಲೂ ಶ್ರೀಧರರಲ್ಲಿ ಮುಕ್ತಿಯನ್ನು ಕೇಳಲಿಲ್ಲ ಎಂದು ಈಗಲೂ ಪರಿತಪಿಸುತ್ತಾರೆ. ಶ್ರೀಧರರು ಮಹಾಸಮಾಧಿಯಾದ ದಿನವನ್ನು ನೆನಪು ಮಾಡಿಕೊಳ್ಳುವ ಇವರು, ಅಂದು ಪಕ್ಕದ ಮನೆ ಹೆಂಗಸರು, ಪುಟ್ಟ ಮಗಳು ಶ್ಯಾಮಲಾ ಜೊತೆಗೆ ವರದಪುರಕ್ಕೆ ಹೋಗಿ ಗುರುಗಳ ಅಂತಿಮ ದರ್ಶನ ಪಡೆದಿದ್ದೆ ಎಂದು ವಿವರಿಸುವಾಗ ಭಾವುಕರಾಗುತ್ತಾರೆ. ಅಂದು ಒಂದು ಜ್ಯೋತಿ ಹೋದ ಅನುಭವ ತನಗಾಯಿತೆಂದೂ ಸೇರಿಸುತ್ತಾರೆ. ಇತ್ತೀಚಿಗೆ ನಾಗರತ್ನಮ್ಮ ಮತ್ತು ಅವರ ಸಹೋದರಿ ಶಿವಮೊಗ್ಗದ ಸವಿತ ಇಬ್ಬರೂ ವರದಪುರಕ್ಕೆ ಹೋಗಿ ಐದು ದಿನ ಸೇವೆ ಮಾಡಿ ಬಂದರಂತೆ. ಇಬ್ಬರಿಗೂ ಒಂದೇ ಕನಸು ಬಿತ್ತೆಂದು ವಿವರಿಸುತ್ತಾರೆ. ಆವಾಗ ಅಕ್ಕನಿಗೆ 84 ವರ್ಷಗಳಾಗಿದ್ದರೆ ತಂಗಿಗೆ 75

ವರ್ಷಗಳು! ಈ ಇಳಿವಯಸ್ಸಿನಲ್ಲಿಯೂ ಅವರು ಮೂರು ಬಾರಿ ಮೇಲೆ ಹತ್ತಿ ಇಳಿದರಂತೆ! ನಾವಲ್ಲ, ಗುರುಗಳೇ ಹತ್ತಿ ಇಳಿಸಿದ್ದು ಎನ್ನುತ್ತಾರೆ.

ಗುರುಗಳು ಇದ್ದಾಗಲೇ ಸೋಮವಾರ ಊಟ ಬಿಟ್ಟಿದ್ದ ನಾಗರತ್ನಮ್ಮ ಆಶ್ರಮದವರಿಗೆ ತೊಂದರೆ ಬೇಡವೆಂದು ಸುಮ್ಮನಾದರಂತೆ. ಕೊನೆಗೆ ಅವರೇ ಸೀಮೆಅಕ್ಕಿ ಪಾಯಸ ಕೊಟ್ಟರೆಂದೂ ಸೇರಿಸುತ್ತಾರೆ. ಈಗ ಹೇಗಿದ್ದಾರೆ? ಏನು ಮಾಡುತ್ತಿದ್ದಾರೆ? ತುಂಬ ಲವಲವಿಕೆಯಿಂದಲೇ ಇದ್ದಾರೆ. ಸದಾ ಗುರುಸ್ಮರಣೆಯಲ್ಲಿಯೇ ಇರುತ್ತಾರೆ. ಒಮ್ಮೆ ಭಾವುಕರಾಗಿ, ಮತ್ತೊಮ್ಮೆ ಭಕ್ತಿಯ ಪರಾಕಾಷ್ಟತೆಯಿಂದ, ಮಗದೊಮ್ಮೆ ಆನಂದಾನುಭೂತಿಗಳಿಂದ ಮತ್ತೆ ಮತ್ತೆ ಹೇಳುತ್ತಲೇ ತಮ್ಮನ್ನೇ ತಾವು ಮರೆಯುತ್ತಾರೆ. "ಶ್ರೀಧರ ಸ್ವಾಮಿಗಳು–ದೇವರು ಬೇರೆ ಬೇರೆ ಅಲ್ಲ, ಎಲ್ಲವೂ ಶ್ರೀಧರರೇ ಸರಿ". ಶಬರಿಯನ್ನು ಕೇಳಿದ್ದೇವೆ, ನೋಡಿಲ್ಲ. ಆದರೆ ಸಾಗರದಲ್ಲಿ ನಾಗರತ್ನಮ್ಮನವರಿಂದ ಶ್ರೀಧರರ ಬಗ್ಗೆ ಕೇಳುತ್ತೇವೆ, ನೋಡುತ್ತೇವೆ

ಶ್ರೀ ರಾಮ ಕಥಾಸಾರ

ಲೇ॥ ಬಸ್ತಿ ಸದಾನಂದ ಪೈ

# ಸಾಗರೋಲ್ಲಂಘನ

ಸಂಪಾತಿಯಿಂದ ರಾವಣನ ವಾಸಸ್ಥಳವನ್ನು ತಿಳಿದು ಸೀತೆಯ ದರ್ಶನವನ್ನು ಮಾಡುವ ಇಚ್ಛೆಯಿಂದ ಕಪಿ ವೀರರು ಸಾಗರದ ಕಡೆಗೆ ಹೋಗುತ್ತಾರೆ. ಪಾತಾಳ ತಳದಲ್ಲಿ ವಾಸಿಸುವ ರಾಕ್ಷಸ ಶ್ರೇಷ್ಠರನ್ನು ಕಂಡು ಚಿಂತಾಕ್ರಾಂತರಾಗುತ್ತಾರೆ. ಆಕಾಶದಂತೆ ದಾಟಲಸಾಧ್ಯವಾದ ಸಾಗರವನ್ನು ಕಂಡು ಕಪಿ ವೀರರೆಲ್ಲಾ ದಿಕ್ಕು ತೋಚದೇ ಕುಳಿತಿರುವಾಗ ಅವರನ್ನು ಅಂಗದನು ಸಮಾಧಾನಗೊಳಿಸುತ್ತಾನೆ.

ಈಗ ನಮ್ಮ ಪರಾಕ್ರಮವನ್ನು ತೋರುವ ಸಮಯ. ವಿಷಾದ ಪಡುವುದರಿಂದ ನಮ್ಮ ಪುರುಷಾರ್ಥ ಕೈಗೂಡುವುದಿಲ್ಲ ಎನ್ನುತ್ತಾನೆ. ವೃದ್ಧರೂ, ಹಿರಿಯರೂ ಆದ ಕಪಿ ವೀರರೊಡನೆ ಮುಂದಿರುವ ಸಾಗರವನ್ನು ದಾಟುವ ಬಗ್ಗೆ ಸಮಾಲೋಚಿಸುತ್ತಾನೆ. ನೂರು ಯೋಜನ ವಿಸ್ತಾರವಾದ ಈ ಸಾಗರವನ್ನು ಹಾರಿ ಸುಗ್ರೀವನ ಮಾತನ್ನು ಈಡೇರಿಸುವವರು ಯಾರಿದ್ದಾರೆ? ಎಂದು ವಿಚಾರಿಸುತ್ತಾನೆ. ಅಂಗದನ ಮಾತು ಕೇಳಿ ಕಪಿ ವೀರರಿಗೆ ಸೈನ್ಯವೆಲ್ಲ ನಿಶ್ಯಬ್ಧವಾಗುತ್ತದೆ. ಯಾರೂ ಏನನ್ನೂ ಉತ್ತರಿಸುವುದಿಲ್ಲ. ಅಂಗದನು ಕಪಿ ವೀರರಿಗೆ ಸಂಚಾರದಲ್ಲಿ ಯಾರು ಯಾರಿಗೆ ಎಷ್ಟು ಶಕ್ತಿ ಇದೆ ಹೇಳಿರಿ ಎನ್ನುತ್ತಾನೆ.

ಅಂಗದನ ಮಾತನ್ನು ಕೇಳಿ ಗಜ, ಗವಾಕ್ಷ, ಗವಯ, ಶರಭ, ಗಂಧಮಾದನ, ಮೈಂದ, ದ್ವಿವಿಧ, ಸುಷೇಣ, ಜಾಂಬವಂತ ಮೊದಲಾದ ಎಲ್ಲಾ ಕಪಿ ವೀರರು ತಮ್ಮ ತಮ್ಮ ಸಾಮರ್ಥ್ಯವನ್ನು ತಿಳಿಸುತ್ತಾರೆ. ಅತೀ ಹೆಚ್ಚು ತೊಂಭತ್ತು ಯೋಜನ ಹಾರಬಲ್ಲೆ ಎಂದು ಜಾಂಬವಂತ ತಿಳಿಸುತ್ತಾನೆ. ನಂತರ ಅಂಗದನು ತನ್ನ ಸಾಮರ್ಥ್ಯವನ್ನು ಹೇಳುತ್ತಾನೆ. ನಾನು ನೂರು ಯೋಜನ ಹಾರಬಲ್ಲೆ. ಆದರೆ ಹಿಂತಿರುಗಿ ಬರಲು ಸಾಧ್ಯವಾಗುತ್ತದೆಯೋ ಇಲ್ಲವೋ ಎಂಬುದು ನಿಶ್ಚಯವಿಲ್ಲ ಎನ್ನುತ್ತಾನೆ.

ನಿನಗಿರುವ ಶಕ್ತಿ ನಮಗೆ ತಿಳಿದಿದೆ. ನೂರು ಯೋಜನವಾದರೂ ಸರಿ, ಸಾವಿರ ಯೋಜನವಾದರೂ ಸರಿ ನಿನಗೆ ಕಷ್ಟವಲ್ಲ. ಆದರೆ ನೀನು ನಮಗೆ ಸ್ವಾಮಿಯ ಸ್ಥಾನದಲ್ಲಿರುತ್ತಿ. ನಿನ್ನನ್ನು ರಕ್ಷಿಸಬೇಕಾದ್ದು ನಮ್ಮ ಕರ್ತವ್ಯ. ಈ ಕಾರ್ಯಕ್ಕೆ ನೀನು ಮೂಲಾಧಾರ. ತಾಯಿ ಬೇರು ಗಟ್ಟಿಯಾಗಿದ್ದರೆ, ಹೂ, ಹಣ್ಣುಗಳನ್ನು ಮರ ಬಿಡುತ್ತದೆ. ನೀನು ನಮಗೆ ಗುರುವೂ ಹೌದು, ಗುರುಪುತ್ರನೂ ಹೌದು ಎಂದು ಜಾಂಬವಂತನು ಹೇಳುತ್ತಾನೆ.

ನಾನು ಹೋಗದೆ ಬೇರೆ ಯಾರೂ ಹೋಗದಿದ್ದಲ್ಲಿ ಕಪಿರಾಜನ ಆಜ್ಞೆಯನ್ನು ನೆರವೇರಿಸದೇ ಅಲ್ಲಿಗೆ ಹಿಂತಿರುಗಿ ಹೋದಲ್ಲಿ ನಮ್ಮ ಪ್ರಾಣ ಉಳಿಯುವುದಿಲ್ಲ. ಅದಕ್ಕಿಂತ ನಾವು ಇಲ್ಲಿ ಪ್ರಾಯೋಪ್ರವೇಶ ಮಾಡುವುದೇ ಉತ್ತಮ ಎನ್ನುತ್ತಾನೆ.

ಇವರ ಮಾತುಗಳನ್ನೆಲ್ಲಾ ಕೇಳುತ್ತಾ ಮೌನವಾಗಿ ಏಕಾಂತದಲ್ಲಿ ಕುಳಿತಿದ್ದ ವಾನರ ಶ್ರೇಷ್ಠನಾದ ಹನುಮಂತನನ್ನು ಜಾಂಬವಂತನು ಸಾಗರೋಲ್ಲಂಘನೆಗೆ ಪ್ರೇರೇಪಿಸುವನು. ಕಪಿ ವೀರರು ದುಃಖ ಪಡುತ್ತಿರುವುದನ್ನು ಕಂಡು ಜಾಂಬವಂತನು ತನ್ನ ಅವತಾರದ ಬಗ್ಗೆ ವಿವರಿಸಿದ್ದನ್ನು ಗ್ರಹಿಸಿ ನನ್ನಿಂದಲೇ ಸೀತಾನ್ವೇಷಣೆಯಾಗುತ್ತದೆಂದು ರಾಮನೂ ಉಂಗುರವನ್ನು ಕೊಟ್ಟಿರುವುದನ್ನು ನೆನಪಿಸಿಕೊಂಡು ಹನುಮಂತನು ಸಾಗರೋಲ್ಲಂಘನೆಗೆ ಸಿದ್ಧನಾಗುತ್ತಾನೆ.

ಜಾಂಬವಂತನಿಂದ ಪ್ರೇರೇಪಿಸಲ್ಪಟ್ಟ ವಾಯುಪುತ್ರನು ಕಪಿ ವೀರರಿಗೆ ಸಂತಸ ಉಂಟು ಮಾಡುತ್ತಾ ಮಹದ್ರೂಪವನ್ನು ತಾಳುತ್ತಾನೆ. ನೂರು ಯೋಜನ ಹಾರುವ ಸಲುವಾಗಿ ತನ್ನ ಶರೀರವನ್ನು ಬೆಳೆಸುತ್ತಾನೆ. ವೃದ್ಧರಾದ ಕಪಿ ವೀರರೆಲ್ಲರೂ ಆನಂದ ಭರಿತರಾಗಿ ಹನುಮಂತನನ್ನು ಕೊಂಡಾಡುತ್ತಾರೆ.

ನಾನು ಹಾರುವಾಗ ನನ್ನ ವೇಗವನ್ನು ಈ ನೆಲವು ತಡೆದುಕೊಳ್ಳಲಾರದು, ಎತ್ತರವಾದ ಬಂಡೆಗಳಿಂದ ಕೂಡಿದ ಮಹೇಂದ್ರ ಗಿರಿಯ ಶಿಖರಗಳು ದೃಢವಾಗಿಯೂ ದೊಡ್ಡದಾಗಿಯೂ ಇವೆ. ನನ್ನ ತುಳಿತವನ್ನು ಅವು ತಡೆದುಕೊಳ್ಳುತ್ತದೆ. ನಾನು ಶಿಖರದಿಂದ ವೇಗ ತೆಗೆದುಕೊಳ್ಳುತ್ತೇನೆ ಎಂದು ಹೇಳಿ ಮಹೇಂದ್ರ ಗಿರಿಯ ಮೇಲೇರುತ್ತಾನೆ.

ಮಹೇಂದ್ರ ಗಿರಿಯಲ್ಲಿ ಅಲ್ಲೋಲ ಕಲ್ಲೋಲ ಉಂಟಾಗುತ್ತದೆ. ಹನುಮಂತನ ಪಾದಗಳಿಂದ ತುಳಿಯಲ್ಪಟ್ಟ ಮಹಾ

ಗಿರಿಯಲ್ಲಿ ದೊಡ್ಡ ದೊಡ್ಡ ಮರಗಳು ಅಲ್ಲಾಡಿದವು. ಪಾನ ಸಂಪರ್ಕದಲ್ಲಿ ದೃಢ ಚಿತ್ತರಾಗಿದ್ದ ನಾಗ, ಗಂಧರ್ವರು, ವಿದ್ಯಾಧರರ ತಂಡಗಳು ಮೇಲಕ್ಕೆದ್ದು ಭಯ ಭ್ರಾಂತರಾದ ಋಷಿಗಳು ತಮ್ಮ ಆಶ್ರಮವನ್ನು ತೊರೆದು ಹೊರಟರು. ಹನುಮಂತನು ವೇಗದಲ್ಲಿ ಮನಸ್ಸಿಟ್ಟು ಶಾಂತ ಚಿತ್ತನಾಗಿ ಒಡನೆಯೇ ಲಂಕೆಗೆ ಮುಟ್ಟುತ್ತಾನೆ.

ಎಲ್ಲರೂ ಎಲ್ಲಾ ಕೆಲಸಗಳನ್ನು ಮಾಡಲು ಸಾಧ್ಯವಿಲ್ಲ. ತಮ್ಮ ತಮ್ಮ ಮಿತಿಗಳನ್ನು ಅರಿತು ಕೆಲಸ ಮಾಡಬೇಕು. ಅತಿಯಾದ ಆತ್ಮ ವಿಶ್ವಾಸವೂ ನಮ್ಮ ನಾಶಕ್ಕೂ ಕಾರಣವಾದೀತು ಎಂಬುದನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಯೋಚನೆ, ಯೋಜನೆ, ಚತುರತೆ ಜೀವನದಲ್ಲಿ ಅತೀ ಮುಖ್ಯ.

---

ಸಂಪ್ರದಾಯ

ಲೇ॥ ಜಿ.ವಿ. ಶರ್ಮಾಪಂಡಿತ್

# ಒಂದನ್ನು ಪಡೆಯ ಬೇಕೆಂದರೆ, ಇನ್ನೊಂದು ಬಿಡಬೇಕೆ ?

**ಎಂದೆಂದೂ ಹಗಲುರಾತ್ರಿಗಳು ಒಂದೇ ಬಾರಿ ಬರುವುದಿಲ್ಲ. ರಾತ್ರಿ ಕಳೆದರೇನೇ ಹಗಲು ಬರುತ್ತದೆ. ಅಲ್ಲವೇ?**

ಸುಖವನ್ನು ಪಡೆಯಬೇಕಾದರೇ ಹಣವನ್ನು ಬಿಡಬೇಕು. ಹಣವನ್ನು ಪಡೆಯಬೇಕಾದರೇ ಸುಖವನ್ನು ತ್ಯಜಿಸಬೇಕು. ಈ ಲೋಕದಲ್ಲಿ ನಾವೇನೇ ಪಡೆಯಬೇಕಾದರೂ ನಮ್ಮ ಬಳಿಯಲ್ಲಿರುವ ಯಾವುದಾದರೊಂದನ್ನು ಕಳೆದುಕೊಳ್ಳಲೇ ಬೇಕಾಗುತ್ತದೆ. ಬಾಲ್ಯವನ್ನು ಕಳೆದುಕೊಂಡರೇ ಮಾತ್ರ ಯೌವ್ವನ ಬರುತ್ತದೆ. ಯೌವ್ವನವನ್ನು ಕಳೆದುಕೊಂಡರೆ ಮಾತ್ರ ಹಿರಿಯತನ ಸಿಗುತ್ತದೆ. ಚಲಿಗಾಲ ಬೇಸಗೆ ಒಂದೇಬಾರಿ ಬರುವುದಿಲ್ಲ.

ಹೊಸ ಎಲೆ ಬರಬೇಕಾದರೆ ಹಣ್ಣೆಲೆ ಬೀಳಬೇಕಲ್ಲವೇ? ಹಳೆಯ ನೀರು ಹೋದರೆ ಮಾತ್ರ ಹೊಸನೀರು ಬಂದು ಸೇರುತ್ತದೆ. ಮೇವು ಕಳೆದುಕೊಂಡಾಗಲೇ ಹಾಲು ಸಿಗುತ್ತದೆ.

ಕೆಲವರು ಏನನ್ನು ಕಳೆದುಕೊಳ್ಳದೇ ಎಲ್ಲವನ್ನು ಪಡೆಯಲಿಕ್ಕೆ ನೋಡುತ್ತಾರೆ. ಇದು ದುರಾಶೆ. ಕಟ್ಟಿಗೆಯನ್ನು ಸುಡದೇ ಅನ್ನ ತಯಾರಿಸಲಾಗದು.

ಒಂದನ್ನು ಪಡೆಯಬೇಕೆಂದರೇ ಇನ್ನೊಂದನ್ನು ನಾವು ಕಳೆದುಕೊಳ್ಳಬೇಕು ಎಂಬ ಮಾತನ್ನು ಯಾಕೆ ಹೇಳುತ್ತಾರೆಂದರೇ, ಕೆಲವು ಜನರು ಗತಿಸಿ ಹೋದ ವಿಷಯಗಳನ್ನು ನೆನೆಯುತ್ತಾ ಇರುತ್ತಾರೆ. "ಮಗುವಾಗಿದ್ದರೇ ಎಷ್ಟು ಸುಖವಾಗಿರುತ್ತಿತ್ತು" ಎನ್ನುತ್ತಾರೆ. ಆದರೇ "ಚಿಕ್ಕವಯಸ್ಸಿನಲ್ಲಿದ್ದಾಗ" ನಾವು ಯಾವಾಗ ದೊಡ್ಡವರಾಗುತ್ತೇವೆ" ಎಂದು ಯೋಚನೆ ಮಾಡುತ್ತಾರೆ.

ನಾವು ದೊಡ್ಡ ಚಿತ್ರನಟರಾಗುತ್ತೇವೆ ಅಥವಾ ದೊಡ್ಡ ಮಂತ್ರಿಯಾಗುತ್ತೇವೆ ಇಂಥಾ ಸಮಯದಲ್ಲಿ ಫುಟ್‌ಪಾತನ ಮೇಲೆ ಇರುವ ಬಿಸಿಬಿಸಿ ಇಡ್ಲಿ ತಿನ್ನಲಿಕ್ಕೆ ಆಗದು. ಸಾಮಾನ್ಯ ಸ್ವೇಚ್ಛೆಯನ್ನು ಸಹ ಅನುಭವಿಸಲಾಗದು. ರಾಜಬೀದಿಯಲ್ಲಿ ಒಂಟಿಯಾಗಿ ನಡೆಯಲಾಗದು.

ಕೆಳಗಿನ ಮೆಟ್ಟಲು ಬಿಟ್ಟರೇ ಮಾತ್ರ ಮೇಲಿನ ಮೆಟ್ಟಲಿನ ಮೇಲೆ ನಿಲ್ಲಲು ಬರುತ್ತದೆ. ಇದು ಸಹಜ ಬದಲಾವಣೆ. ಇದಕ್ಕೆ ಯೋಚಿಸಬಾರದು. ದಾತೃತ್ವ ಗುಣವಿದ್ದರೇ ದುಡ್ಡು ಕೊಡಿಡಲು ಆಗುವುದೇ ಇಲ್ಲ. ಸಮಯವನ್ನು ಖರ್ಚು ಮಾಡದಿದ್ದರೇ ಕಲಿಯಲು ಆಗೋಲ್ಲ. ಸಂಸಾರ ಮಾಡುತ್ತಾ ಸನ್ಯಾಸ ದೀಕ್ಷೆ ವಹಿಸಲು ಬರುವುದಿಲ್ಲ.

ನಾವು ಏನಾದರೊಂದನ್ನು ಪಡೆಯಲು ಪ್ರಯತ್ನಿಸುವಾಗ ಸ್ವಲ್ಪ ಯೋಚನೆ ಮಾಡಬೇಕು. ನಾವು ಪಡೆಯ ಬಯಸಿದಕ್ಕೂ ಬಿಡುವ ಬಯಸಿದಕ್ಕೂ ತಾರತಮ್ಯಗಳನ್ನು ಗುಣಿಸಿ ನೋಡಿದ ನಂತರವೇ ಮುಂದಕ್ಕೆ ಸಾಗಬೇಕು. ಓಡೋಡಿ ಹಾಲು ಕುಡಿಯುವುದಕ್ಕಿಂತಲೂ, ನಿಂತಲ್ಲಿ ನಿಂತುಕೊಂಡು ನೀರು ಕುಡಿಯುವುದೇ ಒಂದೊಂದು ಬಾರಿ ಸಂತೃಪ್ತಿ ನೀಡುತ್ತದೆ..

---

# ಪರಮೇಶ್ವರನ 25 ಲೀಲೆಗಳು

**ಗಣಪತಿಯುನ್ನು ಗಜಮುಖವನ್ನಾಗಿ ಮಾಡಿದ ಲೀಲೆಯು**

ಪರಮೇಶ್ವರನು ಗಜಾಸುರನ ಸಂಗಡ ಯುದ್ಧಕ್ಕೆ ಹೋಗಿದ್ದನು. ಪಾರ್ವತಿದೇವಿಯು ಸ್ನಾನ ಮಾಡಬೇಕಿತ್ತು. ಬಾಗಿಲಲ್ಲಿ ಯಾರೂ ಒಳಗೆ ಪ್ರವೇಶಿಸದಂತೆ ಪ್ರತಿಬಂಧಿಸಲು ಒಬ್ಬನು ಬೇಕಾಗಿದ್ದನು. ಅವಳಿಗೆ ಮೇಲಾಗಿ ಮಕ್ಕಳ ಇಚ್ಛೆಯು ಪ್ರಬಲವಾಗಿತ್ತು, ಅದಕ್ಕಾಗಿ ಒಬ್ಬ ಮಗನನ್ನು ಸೃಜಿಸಿದಳು.

ಅವನಿಗೆ ಯಾರನ್ನೂ ಒಳಗೆ ಬಿಡದಂತೆ, ಕಟ್ಟಾಜ್ಞೆಯನ್ನು ಮಾಡಿ ಬಾಗಿಲಲ್ಲಿ ಕೂಡ್ರಿಸಿ ತಾನು ಸ್ನಾನಮಾಡಲು ಒಳಗೆ ಹೋದಳು, ಆದರೆ ಅಲ್ಪಕಾಲದಲ್ಲಿಯೇ ಪರಮೇಶ್ವರನು ಗಜಾಸುರನನ್ನು ಯುದ್ಧದಲ್ಲಿ ಸೋಲಿಸಿ ಅವನ ಸೊಂಡಿಲಿನ ರುಂಡವನ್ನು

ತನ್ನ ತ್ರಿಶೂಲಕ್ಕೆ ಚುಚ್ಚಿಕೊಂಡು ಬಂದನು. ಶಿವನ ಒಳಗೆ ಪ್ರವೇಶಮಾಡಲುಪರಿಕ್ರಮಿಸಲು ದ್ವಾರದಲ್ಲಿರುವ ಪಾರ್ವತಿಯ ಮಾನಸಪುತ್ರನು ತಡೆದನು. ಅವನಿಗೆ ತನಗೆ ತಂದೆಯಾದ ಪರಮೇಶ್ವರನು ಇವನೇ ಎಂಬುದು ಗೊತ್ತಿರಲಿಲ್ಲ. ತನ್ನ ಮನೆಯೊಳಗೆ ತನಗೆ ಪ್ರವೇಶಕ್ಕೆ ಅಡ್ಡಿ ಮಾಡುವವನಾರೆಂದು ಕೋಪದಿಂದ, ತನ್ನ ಚಳ್ಳುಗುರಿಯಿಂದ ಮಗನ ರುಂಡವನ್ನು ಚಿವುಟಿ ಆಗಸಕ್ಕೆ ತೂರಿ ಒಗೆದನು. ಅದು ಸಾಗರಾಂತರ್ಗತವಾಯಿತು. ಶಿವನು ಒಳಗೆ ಹೋಗಲು ಪಾರ್ವತಿಯು ಅಯ್ಯೋ! ನೀವು ಒಳಗೆ ಹೇಗೆ ಬಂದಿರಿ. ಬಾಗಿಲಲ್ಲಿ ನನ್ನ ಮಗನು ನಿಮ್ಮನ್ನು ಪ್ರತಿಬಂಧಿಸಲಿಲ್ಲವೇ? ನಾನು ಸ್ನಾನಮಾಡುತ್ತಿರುವೆನೆನ್ನಲು, ಆಗ ಪರಮೇಶ್ವರನು ಓಹೋ ಅವನು ನಿನ್ನ ಮಗನೇನು? ಅವನು ನನ್ನನ್ನು ತಡೆದನು. ನಾನು ಸಿಟ್ಟಿನಿಂದ ಅವನ ರುಂಡವನ್ನು ಚಿವುಟಿ ಒಗೆದೆನು, ಎನ್ನಲು ಪಾರ್ವತಿಯು ತುಂಬಾ ಚಿಂತೆಮಾಡಿ ಅಳತೊಡಗಿದಳು. ಅಲ್ಲದೇ ಅವನನ್ನು ಈಗ ಬದುಕಿಸಿರೆಂದಳು.

ಆಗ ಶಿವನು ತಾನು ತ್ರಿಶೂಲಕ್ಕೆ ಚುಚ್ಚಿಕೊಂಡು ಬಂದಿದ್ದ ಗಜಾಸುರನ ರುಂಡವನ್ನೇ ಅವನಿಗೆ ಹಚ್ಚಿ ಜೀವಕಳೆಯನ್ನು ತುಂಬಿದನು. ಆಗ ಮಗನು ಗಜಮುಖನಾದನು, ಅವನಿಗೆ ಶಿವನು ವಿನಾಯಕನೆಂದನು. ಆಗ ಪಾರ್ವತಿಯು ಇವನಿಗೆ ಗಣಪತಿ ಪದವಿಯನ್ನು ಕೊಡಿರಿ ಎಂದಳು. ಶಿವನು ಅವನನ್ನು ಗಣಪತಿ ಅಂದರೆ ಗಣಗಳ ಒಡೆಯನನ್ನಾಗಿ ಮಾಡಿದನು. ಅವನಿಗೆ ಹದಿನಾಲ್ಕು ವಿದ್ಯೆಗಳು ಲಭಿಸುವಂತೆ ವರವನ್ನಿತ್ತನು.

ಇತ್ತ ಪಾರ್ವತಿಯು ನೀನು ವಿಘ್ನಗಳನ್ನು ಪರಿಹರಿಸುವವನಾಗು. ಯಾರು ನಿನ್ನನ್ನು ಪೂಜಿಸಿ ಸ್ತುತಿಸುವರೋ ಅವರ ವಿಘ್ನಗಳನ್ನು ದೂರಮಾಡುವವನಾಗೆಂದು ವರವನ್ನಿತ್ತಳು ಮತ್ತು ಅವನು ದೊಡ್ಡ ಶರೀರವುಳ್ಳವನಾದುದರಿಂದ ಅವನು ಕೂತಲ್ಲಿಯೇ ಕುಳಿತು ಜನರನ್ನು ದಂಡಿಸಲು ಬರುವಂತೆ ಅವನಿಗೊಂದು ಅಂಕುಶವನ್ನೂ, ಒಂದು ಪಾಶವನ್ನೂ ದಯಪಾಲಿಸಿದಳು.

ಇದರಿಂದ ಗಣಪತಿಗೆ ಕೂತಲ್ಲಿಯೇ ಕುಳಿತು ದುಷ್ಟರನ್ನು ಶಿಕ್ಷಿಸುವ ಬಲ ಬಂದಿತು ಅಲ್ಲದೇ ಪರಮೇಶ್ವರನು ಅವನಿಗೆ ನೀನು ವಿದ್ಯಾರ್ಥಿದೇವತೆಯಾಗು ನಿನ್ನನ್ನು ಪೂಜಿಸುವ ವಿದ್ಯಾರ್ಥಿಗಳು ವಿದ್ಯಾವಂತರಾಗಲಿಯೆಂದು ವರವನ್ನಿತ್ತನು.

ಅವನಿಗೆ ಬುದ್ಧಿ ಮತ್ತು ಸಿದ್ಧಿ ಎಂಬ ಈರ್ವರು ಸತಿಯಾದರು. ತನ್ನ ಬಲತೊಡೆಯ ಮೇಲೆ ಬುದ್ಧಿಯನ್ನೂ, ಎಡತೊಡೆಯ ಮೇಲೆ ಸಿದ್ಧಿಯನ್ನು ಕುಳ್ಳಿರಿಸಿಕೊಂಡು ಪರಮೇಶ್ವರನ ಸನ್ನಿಧಿಯಲ್ಲಿ ವಿರಾಜಮಾನನಾದನು ಎಂಬಲ್ಲಿಗೆ ಹದಿನಾರನೆಯದಾದ ಗಣಪತಿಯನ್ನು ಗಜಮುಖನನ್ನಾಗಿ ಮಾಡಿದ ಪರಮೇಶ್ವರನ ಲೀಲೆಯು ಮುಗಿದುದು.

ಮಹಾಕ್ಷತ್ರಿಯ

ಲೇ॥ ದೇವುಡು

# ಧರ್ಮಾಸನದಲ್ಲಿ ಅರಸ

ನಹುಷಚಕ್ರವರ್ತಿಯು ಧರ್ಮಾಸನಾಸೀನನಾಗಿದ್ದಾನೆ. ನ್ಯಾಯಸ್ಥಾನದ ನಿರ್ಣಯವನ್ನು ವಿರೋಧಿಸಿದ ಮೂವರು ಅರಸನ ಬಳಿಗೆ ಬಂದಿದ್ದಾರೆ. ಧರ್ಮ ವಿಚಾರವನ್ನು ಚಕ್ರವರ್ತಿಯ ಎದುರಿನಲ್ಲಿ ನಿವೇದಿಸಲು ಅರಮನೆಯ ಧರ್ಮಾಧಿಕಾರಿಗಳು ಬಂದಿದ್ದಾರೆ. ರಾಜಪುರೋಹಿತ, ರಾಜಗುರು ಇಬ್ಬರೂ ಅವರವರ ಸ್ಥಾನಗಳಲ್ಲಿದ್ದಾರೆ. ಸಭೆಯು ಮಿತವಾಗಿದೆ.

ಮೊದಲನೆಯ ವಾದಿ ಜನ್ಮತಃ ಬ್ರಾಹ್ಮಣ. ಆದರೆ ಆತ ಬ್ರಾಹ್ಮಣ ಧರ್ಮವನ್ನು ಗೌರವಿಸದೆ ಅದು ಬೇಡವೆಂದನು. ನ್ಯಾಯಸ್ಥಾನವು "ಇವನು ಪತಿತ ಸಾವಿತ್ರೀಕ. ಗಾಯತ್ರಿ, ಅಗ್ನಿ, ವೇದಗಳನ್ನು ಬಿಟ್ಟವನು. ಆದ್ದರಿಂದ, ಇವನಿಗೆ ದಾಯವನ್ನು ಕೊಟ್ಟರೂ ಧರ್ಮವೂ ಅಗ್ನಿಯೂ ವೃದ್ಧಿಯಾಗುವುದಿಲ್ಲವಾದ್ದರಿಂದ, ಇವನು ದಾಯಭಾಗಕ್ಕೆ ಅರ್ಹನಲ್ಲ. ಇವನು ಪ್ರಾಯಶ್ಚಿತ್ತಗಳನ್ನು ಮಾಡಿಕೊಂಡು ಸಾವಿತ್ರಿಯನ್ನು ಅಂಗೀಕರಿಸಿದರೆ ಮಾತ್ರ ದಾಯಭಾಗಕ್ಕೆ ಅರ್ಹನು" ಎಂದು ನಿರ್ಣಯಿಸಿದೆ. ಅವನು ವಿರೋಧಿಸಿ ತನಗೆ ದಾಯಭಾಗ ಬೇಕೆಂದು ಅರಸನ ಬಳಿಗೆ ಬಂದಿದ್ದಾನೆ.

ಮತ್ತೊಬ್ಬನು ತಾನು ದೇಶಾಂತರದಲ್ಲಿ ನೆಲೆಸಬೇಕಾಗಿರುವುದರಿಂದ ತನ್ನ ಆಸ್ತಿಯನ್ನು ಅಲ್ಲಿಗೆ ತೆಗೆದುಕೊಂಡು ಹೋಗಬೇಕೆನ್ನುತ್ತಾನೆ. ನ್ಯಾಯಸ್ಥಾನವು "ಇವನು ದೇಶವನ್ನೇ ಬಿಟ್ಟು ಹೋಗುವವನಾದ್ದರಿಂದ ಈ ಆಸ್ತಿಯಲ್ಲಿ ಈತನಿಗೆ ಒಂದು ವರ್ಷಕ್ಕೆ ಬೇಕಾಗುವಷ್ಟು ಮಾತ್ರ ತೆಗೆದುಕೊಂಡು ಹೋಗಬೇಕಲ್ಲದೆ, ಹೆಚ್ಚಾಗಿ ತೆಗೆದುಕೊಂಡು ಹೋದರೆ ನಮ್ಮ ದೇಶದ ಆಸ್ತಿಯು ಅಷ್ಟು ಕಡಿಮೆಯಾಗುವುದರಿಂದ ಅದು ಕೂಡದು. ಅಲ್ಲದೆ ಉಪಭೋಗಕ್ಕೆ ಎಂದರೆ, ಧರ್ಮಾರ್ಥಕಾಮೋಪಭೋಗಕ್ಕೆ ತನ್ನ ಆಸ್ತಿಯನ್ನು ಉಪಯೋಗಿಸಲು ಎಲ್ಲರಿಗೂ ಅಧಿಕಾರವುಂಟು. ಆದರೆ ಅದನ್ನು ಪೋಲು ಮಾಡಲು, ದೇಶಾಂತರಕ್ಕೆ ಕೊಂಡ್ಯೊಯಲು ಅಧಿಕಾರವಿಲ್ಲ" ಎಂದು ನಿರ್ಣಯಿಸಿದೆ. ಅದನ್ನು ವಿರೋಧಿಸಿರುವ ವಾದಿ ವೈಶ್ಯ.

ಇನ್ನೊಬ್ಬನು ಅದಮ್ಯನಾದ ದುಷ್ಟ ಪಾಳೆಗಾರ, ಸಾಹಸಿ. ತನ್ನ ಪ್ರಾಂತ್ಯದಲ್ಲಿ ಕಳ್ಳಕಾಕರಾದಿಯಾಗಿ ದುಷ್ಟರು ಯಾರಿಗೂ ಅವಕಾಶ ಕೊಡದವನು. ತನ್ನ ಪ್ರಾಂತ್ಯದ ನೆರೆಹೊರೆಯವರಲ್ಲಿ ತಾನೇ ದುಷ್ಟನಾಗಿ ವರ್ತಿಸುತ್ತಿದ್ದಾನೆ. ನಾಲ್ಕೈದು ಸಲ ಶಿಕ್ಷೆಯನ್ನು ವಿಧಿಸಿದ್ದಾಯಿತು. ಕೊನೆಗೆ ಈಗ ಚಕ್ರವರ್ತಿಗಳ ಸನ್ನಿಧಾನಕ್ಕೆ ಕಳುಹಿಸಲಾಗಿದೆ. ಅವನು ಕ್ಷತ್ರಿಯ.

ಅರಸನು ವಿಚಾರಣೆಯನ್ನು ಆರಂಭಿಸಿದರು. ಮೊದಲು ಬ್ರಾಹ್ಮಣನು ಬಂದನು. ಅರಿಕೆ ಮಾಡಿದನು: "ದೇವರು ಚಿತ್ತವಿಸಬೇಕು.

ನನಗೆ ತಾವು ಹೇಳುವ ಧರ್ಮದಲ್ಲಿ ವಿಶ್ವಾಸವೂ ಇಲ್ಲ; ಶ್ರದ್ಧೆಯಿಲ್ಲ; ಭಕ್ತಿಯಿಲ್ಲ. ಆದ್ದರಿಂದ, ನನಗೆ ತೋರಿದಂತೆ ನಾನು ಇರಲು ಅಪ್ಪಣೆಯಾಗಬೇಕು."

ಅರಸನು ಧರ್ಮಾಧಿಕಾರಿಯ ಮುಖವನ್ನು ನೋಡಿದನು. ಆತನು ಎದ್ದು ನಿಂತು ಧರ್ಮಾಸನಕ್ಕೆ ಕೈಮುಗಿದು ಹೇಳಿದನು: " ಧರ್ಮಪುರುಷನಿಗೂ ಚಕ್ರವರ್ತಿಗೂ ಜಯವಾಗಲಿ. ಈತನು ತನಗೆ ಧರ್ಮದಲ್ಲಿ ವಿಶ್ವಾಸವಿಲ್ಲ, ಶ್ರದ್ಧೆಯಿಲ್ಲ, ಭಕ್ತಿಯಿಲ್ಲ ಎಂದ ಮಾತ್ರಕ್ಕೆ ಸ್ವತಂತ್ರವಾಗುವುದು ಮೋಕ್ಷವಿಚಾರದಲ್ಲಿಯೇ ಹೊರತು ಧರ್ಮವಿಚಾರದಲ್ಲಲ್ಲ. ಧರ್ಮವಿಚಾರದಲ್ಲಿ ಪುರುಷನು ಸ್ವತಂತ್ರನಲ್ಲ. ಜನ್ಮ ವಿಚಾರದಲ್ಲಿ ಎಷ್ಟು ಮಟ್ಟಿಗೆ ಪುರುಷನು ಪರತಂತ್ರನೋ ಧರ್ಮವಿಚಾರದಲ್ಲಿಯೂ ಪುರುಷನು ಅಷ್ಟೇ ಮಟ್ಟಿಗೆ ಪರತಂತ್ರನು. ದೀಕ್ಷಾಚಾರದವರೂ ಇದನ್ನು ಮೌನವಾಗಿ ಅಂಗೀಕರಿಸಿ ಹುಟ್ಟಿದ ಮಕ್ಕಳಿಗೇ ದೀಕ್ಷೆಯನ್ನು ಕೊಟ್ಟು ಧರ್ಮವಿಚಾರದಲ್ಲಿ ಪುರುಷನ ಪಾರತಂತ್ರ್ಯವನ್ನು ಒಪ್ಪಿಕೊಳ್ಳುವರು. ಆ ಪಾರತಂತ್ರ್ಯವೇ ಸಕಲ ಸಂಪ್ರದಾಯಗಳ ಮೂಲವು. ಅದರಿಂದ ಅದನ್ನು ವಿರೋಧಿಸಿದರೆ ಸಮಾಜದ ಅಸ್ತಿಭಾರವೇ ಸಡಿಲವಾಗುವುದರಿಂದ ಸಾಮಾನ್ಯವಾಗಿ ಯಾರೂ ಅದನ್ನು ವಿರೋಧಿಸಕೂಡದು. ಹಾಗೆಂದರೆ ಪುರುಷನಿಗೆ ಧರ್ಮಾಂತರ ಮಾಡಿಕೊಳ್ಳಲು ಅವಕಾಶವಿಲ್ಲವೇ? ಹಾಗಾದರೆ ಧರ್ಮವು ಪ್ರಗತಿಯ ವಿರೋಧಿಯೇ? ಎಂದರೆ ಒಂದು ಧರ್ಮದಲ್ಲಿ ಹುಟ್ಟಿದವನು ಆ ಧರ್ಮವನ್ನು ಬಿಡಬೇಕಾದರೆ, ಆ ಧರ್ಮವನ್ನು ವಿರೋಧಿಸಲು, ತಿರಸ್ಕರಿಸಲು, ತ್ಯಾಗಮಾಡಲು, ತಕ್ಕಷ್ಟು ಕಾರಣಗಳನ್ನು ತನ್ನ ದಾಯಾದಿಗಳ ಎದುರು ವಿವರಿಸಿ, ಅದನ್ನು ತ್ಯಾಗಮಾಡಬೇಕು. ತಮ್ಮ ಸಮಾಜವು ಧರ್ಮಕಾಮಿಯೂ, ಧರ್ಮೇಚ್ಛುವೂ, ಧರ್ಮಿಷ್ಠವೂ ಆದುದರಿಂದ, ಧರ್ಮಾಂತರವನ್ನು ಇಚ್ಛಿಸುವವನು ಪರಧರ್ಮವನ್ನು ಬಯಸುವಾಗ, ಪೂರ್ವಧರ್ಮದ ಆಶ್ರಯದಲ್ಲಿ ಇಲ್ಲದಿದ್ದರೆ ತನಗೆ ಪ್ರಾಪ್ತವಾಗುತ್ತಿದ್ದ ಪ್ರೇಯೋಭಾಗವನ್ನು ಬಯಸಕೂಡದು. ಈತನು ತಾನು ಧರ್ಮದಲ್ಲಿ ತೋರಿಸುವ ಅವಿಶ್ವಾಸ, ಅಶ್ರದ್ಧೆ ಅಭಕ್ತಿಗಳ ಕಾರಣವನ್ನು ದಾಯಾದಿಗಳ ಎದುರಿನಲ್ಲಿ ವಿವರಿಸಿಲ್ಲವಾದ್ದರಿಂದ, ಈತನು ಅಪೇಕ್ಷಿಸುವುದು ಅವಿಭಕ್ತ ಕುಟುಂಬದ ಆಸ್ತಿಯಲ್ಲಿ ಒಂದು ಪಾಲು ಆದ್ದರಿಂದ, ಈತನು ಕುಟುಂಬದಲ್ಲಿ ಪಿಂಡಭಾಗಿಯಾಗಬಹುದೇ ಹೊರತು ದಾಯಭಾಗಿಯಾಗಲು ಅರ್ಹನಲ್ಲ. ಅಲ್ಲದೆ, ಇನ್ನೂ ಒಂದು ಮಾತು. ಅವಿಶ್ವಾಸ, ಅಶ್ರದ್ಧೆ, ಅಭಕ್ತಿ ಎಂಬುದು ಕುರುಡು, ಕಿವುಡು, ಹೆಳವುಗಳಂತೆ ಒಂದು ವ್ಯಾಧಿ. ಅದನ್ನು ಶಾಸ್ತ್ರಾಧ್ಯಯನ, ವೃದ್ಧೋಪಸೇವೆಗಳಿಂದ ನಿವಾರಿಸಿಕೊಳ್ಳಲು ಸಾಧ್ಯ. ಅವನೂ ಈತನು ಮಾಡಿಲ್ಲ. ಅದರಿಂದ ಈತನು ದಾಯಭಾಗಕ್ಕೆ ಅರ್ಹನಲ್ಲ."

ವಾದಿಯು ಅರಿಕೆ ಮಾಡಿದನು: "ದೇವ, ಯಾರೂ ನನಗೆ ಹೇಳಿಕೊಡಲಿಲ್ಲ"

ಅರಸನು ದೃಢವಾಗಿ ಗುಡುಗಿನಂತೆ ಮೊಳಗುವ ಕಂಠದಲ್ಲಿ ಹೇಳಿದನು: "ಅದು ಸರಿಯಿಲ್ಲ. ನೀನು ಧರ್ಮವನ್ನು ಅರಸಿಕೊಂಡು ಹೋಗಬೇಕು. ಪುರುಷನು ಅರ್ಥಕಾಮಗಳ ಸಂಪಾದನೆಗೆ ತಾನಾಗಿ ಸಹಜವಾಗಿ ತೊಡಗುವಂತೆ, ಧರ್ಮಕ್ಕಾಗಿ ಪ್ರಯತ್ನಪುರಸ್ಸರವಾಗಿ ತೊಡಗಬೇಕು. ಇಂದ್ರಿಯಾರ್ಥಗಳನ್ನು ಸಾಧಿಸುವಂತೆ ಅದನ್ನು ಸಾಧಿಸಬೇಕು. ಅಭ್ಯಾಸಮಾಡಬೇಕು. ವೃದ್ಧರನ್ನು ಸೇವಿಸಿ ತಿಳಿಯಬೇಕು. ಅಧ್ಯಯನ, ಶ್ರವಣ, ಮನನಗಳಿಂದ ಧರ್ಮವನ್ನು ಒಲಿಸಿಕೊಳ್ಳಬೇಕು. ಹಾಗೆ ಮಾಡಲೆಂದೇ ಪ್ರೇಯೋವಿಚಾರಕ್ಕಿಂತ ಶ್ರೇಯೋವಿಚಾರವನ್ನು ಹೆಚ್ಚಾಗಿ ಗೌರವಿಸುವನೆಂದೇ ಬ್ರಾಹ್ಮಣನಿಗೆ ಸಮಾಜವು ಗೌರವದ ಅಗ್ರಸ್ಥಾನವನ್ನು ಕೊಟ್ಟಿರುವುದು. ನೀನು ಹಾಗೆ ಮಾಡದೆ ಹೋದರೆ, ನಿನಗೆ ಅಗ್ರಜನ ಸ್ಥಾನಮಾನಗಳು ಸಲ್ಲುವುದಿಲ್ಲ. ಆಯಿತು, ನೀನು ಈಗ ಈ ಆಸ್ತಿಯನ್ನು ತೆಗೆದುಕೊಂಡು ಏನು ಮಾಡುವೆ?"

"ಕುಟುಂಬಿಯಾಗಿ ಸುಖಜೀವನ ಮಾಡುವೆನು."

"ಹಾಗೆಂದರೆ ಪಶುಜೀವನ ಮಾಡುತ್ತ ಸೋಮಾರಿಯಾಗಿರುವೆನೆಂದಾಯಿತು. ಪುರುಷಧರ್ಮವು ಯಾವಾಗಲೂ ಧರ್ಮಕರ್ಮಪ್ರಧಾನವು. ನೀನು ಅದನ್ನು ಬೇಡ ಎನ್ನುವೆ. ನಮ್ಮ ರಾಜ್ಯದಲ್ಲಿ ಧರ್ಮಾರ್ಥಗಳನ್ನು ಅಭಿವೃದ್ಧಿ ಮಾಡುವವರಿಗೆ ಮಾತ್ರ ಸ್ಥಾನವು. ಅದರಿಂದ ನೀನು ಈ ಎರಡರಲ್ಲಿ ಒಂದನ್ನು ಹಿಡಿಯಬೇಕು. ಇಲ್ಲವಾದರೆ ಪಿಂಡಭಾಗಿಯಾಗಿ ಅವಿಭಕ್ತ ಕುಟುಂಬದಲ್ಲಿ ಬಿದ್ದಿರಬೇಕು. ಅದರಿಂದ ನನ್ನ ಮಾತು ಕೇಳು. ನೀನು ಜಾತ್ಯಾ ಬ್ರಾಹ್ಮಣನು. ನಿನ್ನ ಮನೋಬುದ್ಧಿ ಅಹಂಕಾರಗಳು ಸಂಸ್ಕಾರ ಸಂಪನ್ನವಾದರೆ ಧರ್ಮದ ಕಡೆಗೆ ನುಗ್ಗುವುವು. ಅರ್ಥಾರ್ಜನಕ್ಕೆ ನಿನಗೆ ಶಕ್ತಿ ಸಾಲದು. ಅದರಿಂದ ನೀನು ಪ್ರಾಯಶ್ಚಿತ್ತ ಮಾಡಿಕೊಂಡು ಸಂಸ್ಕಾರಸಂಪನ್ನರಾಗಿ ಬರುವ ವರ್ಷಕ್ಕೆ ಬಾ. ಅಥವಾ ನ್ಯಾಯ ನಿರ್ಣಯವನ್ನು ಒಪ್ಪಿಕೊ."

"ದೇವ, ಸಂಸ್ಕಾರಗಳಿಂದ ನನಗೆ ಉಪಯೋಗವಾಗುವುದು ಎಂಬುದನ್ನು ಅರಿಯಿಸಿಕೊಡಬೇಡವೇ?"

ಚಕ್ರವರ್ತಿಗೆ ಭಗವಾನರ ಮಾತು ನೆನಪಿಗೆ ಬಂತು: ಸವಿಚಾರವಾಗಿ ಎದುರು ಕಡೆಯವರು ಒಪ್ಪುವಂತೆ ಧರ್ಮವನ್ನು ನಿರೂಪಿಸಬೇಕು. ಆದರೆ ತಾನು ಕುಳಿತಿರುವುದು ವಿಚಾರವೇದಿಕೆಯಲ್ಲ: ವಿಧಿವೇದಿಕೆ. ಏನು ಮಾಡಬೇಕು? ಅರಸನು ಒಂದು ಗಳಿಗೆ ಯೋಚಿಸಿ ರಾಜಪುರೋಹಿತರ ಮುಖವನ್ನು ನೋಡಿದನು.

ಆತನು ಎದ್ದು ನಿಂತು ಧರ್ಮಾಸನಕ್ಕೆ ಕೈಮುಗಿದು ಹೇಳಿದನು: "ಧರ್ಮಕ್ಕೆ ಜಯವಾಗಲಿ. ರಾಜಾಜ್ಞೆಯಂತೆ ವಿಧಿವೇದಿಕೆಯ ಮುಂದೆ ವಿಚಾರವನ್ನು ಮಂಡಿಸುತ್ತಿದ್ದೇನೆ. ಮನುಷ್ಯನಿಗೆ ಸ್ಥೂಲ, ಸೂಕ್ಷ್ಮ ಕಾರಣಗಳೆಂದು ಮೂರು ದೇಹಗಳು. ಸ್ಥೂಲದೇಹಕ್ಕೆ ಬರುವ ರೋಗರುಜಿನಗಳನ್ನು ನಿವಾರಿಸಲು ಆಯುರ್ವೇದವು ಔಷಧ, ಪಥ್ಯ, ಅನುಪಾನಗಳನ್ನು ಹೇಳುವುದು. ಅದರಂತೆಯೇ



ಬೋರಿವಿಲಿ ರಾಷ್ಟ್ರೀಯ ಉದ್ಯಾನವನ – ಮುಂಬೈ, ಮಹರಾಷ್ಟ್ರ

ಸೂಕ್ಷ್ಮದೇಹವಾದ ಮನೋಬುದ್ಧಿ ಅಹಂಕಾರಗಳಿಗೆ ಬರುವ ರೋಗರುಜಿನಗಳನ್ನು ನಿವಾರಿಸಿಕೊಳ್ಳಲು ಶ್ರುತೀ ಭಗವತಿಯ ಸಂಸ್ಕಾರಗಳನ್ನು ಅಪ್ಪಣೆಕೊಡಿಸಿರುವಳು. ಇದನ್ನು ಆತಂರಿಕವಾಗಿ ಬಾಹ್ಯವಾಗಿ ತಿಳಿದುಕೊಳ್ಳುವ ಸಾಧನೆಗಳನ್ನು ಯೋಗಶಾಸ್ತ್ರವು ನಿರೂಪಿಸಿರುವುದು. ಲೋಕದಲ್ಲಿ ಪ್ರತಿಯೊಂದು ಸಿದ್ಧಿಯೂ ಜನ್ಮ, ಮಣಿ, ಮಂತ್ರ, ಔಷಧಗಳಿಂದ ಸಾಧ್ಯವು. ಪಕ್ಷಿಗಳು ಪಕ್ಷಿಗಳಾಗಿ ಹುಟ್ಟಿದ ಮಾತ್ರದಿಂದಲೇ ಆಕಾಶದಲ್ಲಿ ಹಾರಾಡುವುವು. ಮೀನುಗಳು ಹುಟ್ಟುತ್ತಿದ್ದಂತೆಯೇ ಈಜು ಕಲಿತಿರುವುವು. ಇವು ಜನ್ಮಸಿದ್ಧಿಗಳು. ಔಷಧಸೇವನೆಯಿಂದ ಗುಣದೋಷಗಳು ಉಂಟಾಗುವುದು ಅನುಭವ ಸಿದ್ಧವು. ಇವೆರಡನ್ನೂ ಕಂಡವರು ಮಣಿಮಂತ್ರಗಳೂ ಹೀಗೆಯೇ ಸಿದ್ಧಿಪ್ರದಗಳೆಂದು ತಿಳಿದುಕೊಳ್ಳಬಹುದು; ಅಥವಾ ಬೇಕೆಂದರೆ ಅದಕ್ಕಾಗಿ ಪ್ರಯತ್ನಿಸಿ ಪ್ರತ್ಯಕ್ಷವಾಗಿ ಕಂಡುಕೊಳ್ಳಬಹುದು; ಆದರೂ ಮಣಿ, ಔಷಧಗಳು ಜಡಗಳು, ಅದರಿಂದ ಪುರುಷ ಪ್ರಯತ್ನಾಂತರವಿಲ್ಲದೆ ಸಿದ್ಧಿಯನ್ನು ಕೊಡುವುವು. ಆದರೆ ಮಂತ್ರಗಳು ಹಾಗಲ್ಲ, ಮಂತ್ರವು ತತ್ಸಿದ್ಧನಾದವನಿಂದ ಬರುವ ಶಕ್ತಿವಾಹಿನಿಯು. ಅದನ್ನು ಗುರುವು ಅನುಗ್ರಹಿಸಿದ ಬೀಜಶಕ್ತಿಯನ್ನು, ಮಹಾವೃಕ್ಷವಾಗಿ ಬೆಳೆಸಿಕೊಳ್ಳುವುದು ಶಿಷ್ಯನ ಕೈಯಲ್ಲಿರುವುದು. ಆದ್ದರಿಂದಲೇ, ಬೀಜಶಕ್ತಿಯನ್ನು ಕೊಡುವವನೆಂದೇ ಮಂತ್ರಪ್ರದನನ್ನು ತಂದೆ ಎಂದು ಆತನ ಋಣವನ್ನು ಒಪ್ಪಿಕೊಳ್ಳುವುದು. ಮಂತ್ರವೆನ್ನುವುದು ಮನನದಿಂದ ಪ್ರಕಟವಾಗುವ ಶಕ್ತಿ ಸಂಪುಟವು. ಮಂತ್ರವು ನದಿಯ ನೀರನ್ನು ತಂದೊದಗಿಸುವ ಕಾಲುವೆಯೂ ಹೌದು. ಕಾಲಾಂತಂರದಲ್ಲಿ ತಾನೇ ನದಿಯೂ ಆಗಬಲ್ಲದು. ಇದಿಷ್ಟೂ ವಿಚಾರವೇದಿಕೆಯು. ಇನ್ನು ಕ್ರಿಯಾವೇದಿಕೆಯು ವಿಚಾರ. ಬೇಕೆಂದರೆ ಅನುಭವಿಸುವುದಕ್ಕೆ ಸಿದ್ಧನಾಗಬೇಕು. ಇಷ್ಟವಿದ್ದರೆ ಅದೂ ಕೂಡ ಆಗಬಹುದು."

"ದೇವ, ಇದಿಷ್ಟೂ ಮಾಯೆಯಲ್ಲ ಎನ್ನುವುದು ಹೇಗೆ?"

"ಈ ಪ್ರಶ್ನವೇ ಅತಿಪ್ರಶ್ನವು. ಅಶ್ರದ್ಧಾಜಾಡ್ಯದಿಂದ ಬೆಳೆದ ಸಂಶಯವೆಂಬ ವಿಷಬೀಜದ ವೃಕ್ಷಸ್ವರೂಪವು ಇದು. ಆದರೂ ಉತ್ತರ ಕೊಡೋಣ. ಮಾಯೆಯೆಂಬುದು ವಸ್ತುತಂತ್ರವಾದರೆ ಕ್ಷಣಕ್ಕೊಂದು ರೂಪವನ್ನು ತಾಳುತ್ತಾ ನಿಯತ ರೂಪವಿಲ್ಲದೆ ಪ್ರತಿಭಾಸವಾಗುವುದು. ಸತ್ಯವು ತೋರಿದ ಕ್ಷಣದಲ್ಲಿ ಅಡಗುವುದು ಅದು. ಪುರುಷತಂತ್ರವಾದರೆ, ಮಾಯಿಕನ ಬಲವಿರುವವರೆಗೂ ಇದ್ದು ಅಡಗುವುದು. ಮಂತ್ರವು ಹಾಗಲ್ಲ. ಸತ್ಯಾರ್ಥದರ್ಶನಕ್ಕಾಗಿಯೇ ಜನ್ಮವೆತ್ತಿರುವುದು. ಪುರುಷತಂತ್ರವಾಗಿ ಒಬ್ಬರಿಂದ ಒಬ್ಬರಿಗೆ ಬಂದರೂ , ವಸ್ತುತಂತ್ರವಾಗಿ ಬೆಳೆಸಿದಷ್ಟು ಬೆಳೆದರೂ, ಸತ್ಯಾರ್ಥದರ್ಶನ ಮಾಡಿಸಿಯೂ ಇನ್ನೂ ಇರುವುದಾಗಿ, ನಾಶಗಳಲ್ಲಿ ಯಾವುದೊಂದಕ್ಕೂ ವಶವಾಗುವುದಿಲ್ಲವಾಗಿ, ಮಂತ್ರವು ಮಾಯೆಯಲ್ಲ."

"ಇದು ಬೇಡ ಎನ್ನುವುದಕ್ಕೆ ನನಗೆ ಅಧಿಕಾರವುಂಟೋ? ಇಲ್ಲವೋ?"

"ಆ ಅಧಿಕಾರವು ನೀನು ಸಂಪಾದಿಸಿಕೊಂಡರೆ ಉಂಟು. ಇಲ್ಲದಿದ್ದರೆ ಇಲ್ಲ. ನಿನಗೆ ಜನ್ಮತಃ ಬಂದಿರುವ ಅಧಿಕಾರ ನಿನ್ನ ತಂದೆಯ ಮಗನೆಂದು ಬಂದ ಅಧಿಕಾರ. ಈ ಅಧಿಕಾರವೆನ್ನುವುದು ಕಾಲುವೆಯ ಹಾಗೆ. ನಿನ್ನ ಜನ್ಮಬಲದಿಂದ ನಿನಗೆ ಬಂದ ಅಧಿಕಾರ ತೋಡಿದ ಕಾಲುವೆಯ ಹಾಗೆ. ಅದರಲ್ಲಿ ನೀರು ಹರಿಯಬೇಕಾದರೆ ನಿನ್ನ ಪ್ರಯತ್ನ ಆಗಬೇಕು. ನೀರು ಬಂದರೂ ಅದು ಕಾಲುವೆಯ ಎರಡು ದಡಗಳ ನಡುವೆ. ಕಾಲುವೆಯ ಆಳ, ಅಗಲಗಳಿಗೆ ತಕ್ಕಷ್ಟು ಮಾತ್ರ ಹರಿಯುವಂತೆ, ಆ ಅಧಿಕಾರವು ಜನ್ಮಸಿದ್ಧವಾದ ವರ್ಣಧರ್ಮ, ದೇಶಕಾಲಧರ್ಮಗಳೆಂಬ ಎರಡು ದಡಗಳ ನಡುವೆ ಹರಿಯುವುದು. ಅದನ್ನು ಬಿಟ್ಟು ನಿನಗೆ ಅಧಿಕಾರವೇ ಇಲ್ಲ."

"ದಯವಿಟ್ಟು ನನಗೆ ಅದನ್ನು ವಿವರಿಸಿ ಹೇಳುವಿರಾ?"

"ನೀನು ವಿನಯದಿಂದ ಕೇಳಿರುವೆಯಾಗಿ ನಿನಗೆ ಹೇಳಬೇಕು. ಧರ್ಮಕಾಮನಲ್ಲದವನಿಗೆ ಈ ವಿಷಯವು ಬರುವುದಿಲ್ಲ. ನೀನು ಅಜ್ಞಾನದಿಂದ ಧರ್ಮವನ್ನು ತಿರಸ್ಕರಿಸಿರುವೆಯೆಂದು ಈ ವಿಷಯವು ಹೇಳುವುದಾಗಿ, ನಿನಗೆ ಹೇಳಬೇಕು ಕೇಳು.ಸಮಾಜವು ಸೋಪಾನಪಂಕ್ತಿಯಂತೆ, ಗೋಪುರದಂತೆ ಇದೆ. ಸಮಾಜವು ಸ್ವಂತವಾದ ಒಂದು ರೂಪವಿಲ್ಲದ್ದಾದರೂ ಈ ಮೆಟ್ಟಿಲುಮೆಟ್ಟಿಲಾಗಿರುವಿಕೆಯ, ಉಚ್ಚ ನೀಚ ಭಾವವು ಅದರಲ್ಲಿ ಇದ್ದೇ ಇರುವುದು. ಈ ಸೋಪಾನಕ್ರಮವನ್ನು ನಿರಾಕರಿಸಿದವರದೂ ಒಂದು ಗುಂಪುಂಟು. ಅದು ಏಕಪಿಂಡ, ಏಕಜಾತಿ. ಅಲ್ಲಿ ಕೇವಲ ವಯಸ್ಸಿನಿಂದ ಹಿರಿಯತನ. ಅಲ್ಲಿ ಭೋಗಾಧಿಕಾರ ಉಂಟಾದರೂ ಸ್ವತ್ವಾಧಿಕಾರವಿಲ್ಲ. ಸ್ವತ್ತು ಏನಿದ್ದರೂ ಅದು ಕುಲದ್ದು. ಕುಲದವರು ಕೊಟ್ಟಷ್ಟು ತಿಂದುಂಡು ತಾನು ಸಂಪಾದಿಸಿದುದನ್ನೆಲ್ಲಾ ಕುಲಕ್ಕೆ ಕೊಟ್ಟು ಹೋಗಬೇಕು. ಈ ಸೋಪಾನಕ್ರಮವನ್ನು ಅಂಗೀಕರಿಸಿದವರು ವರ್ಣಾಶ್ರಮಧರ್ಮಸಂಪನ್ನರು. ಕೆಲವರು ಜಾತಿಯ ಜನ್ಮದಿಂದ ಲಭ್ಯವಾಗುವುದು ಎಂದರೆ, ಇನ್ನು ಕೆಲವರು ಗುಣದಿಂದಲೂ ವಿದ್ಯಾತಪಸ್ಸುಗಳಿಂದಲೂ ಅದನ್ನು ನಿರ್ಣಯಿಸಬೇಕು ಎನ್ನುವರು. ಕುದುರೆಯ ಮರಿಯು ಕುದುರೆಯೇ ಎನ್ನುವಂತೆ ಮಾತಾಪಿತೃಗಳಿಂದಲೇ ಜಾತಿಯು ಮಕ್ಕಳಿಗೂ ಸಂಕ್ರಮಿಸುವುದಾದರೂ, ಮನುಷ್ಯ ವಿಷಯದಲ್ಲಿ ಮಾತ್ರ ಆ ಅಧಿಕಾರವು ಸ್ಪಷ್ಟ ಅಸ್ಪಷ್ಟ ಎಂದು ಎರಡು ವಿಧವಾಗಿರುವುದು. ಹುಟ್ಟುತ್ತ ಬರುವ ಅಸ್ಪಷ್ಟಧಿಕಾರವು ಅನುವಂಶಿಕ ಗುಣವಾಗಿ ಊರ್ಜಿತವಾಗಲು ಸಂಸ್ಕಾರವನ್ನು ಅಪೇಕ್ಷಿಸುವುದು. ಅದಿಲ್ಲದಿದ್ದರೆ ಸಹಜವಾಗಿ ಗಟ್ಟಿಯಾಗಿ ಕಬ್ಬಿಣವು ಉಪಯೋಗಿಸದೆ ಇಟ್ಟಿದ್ದರೆ, ಇಟ್ಟಕಡೆಯಲ್ಲಿಯೇ ತುಕ್ಕು ಹಿಡಿಯುವಂತೆ, ಸಂಸ್ಕಾರಬಲದಿಂದ ಅನುವಂಶಿಕ ಗುಣವು ಮಸಳಿಸಿ ಹೋಗುವುದು. ಸಂಸ್ಕಾರಬಲದಿಂದ ಇಲ್ಲದ ಗುಣವನ್ನು ಹುಟ್ಟಿಸಬಹುದಾದರೂ, ಸಂಸ್ಕಾರವು ಸಾಮಾನ್ಯವಾಗಿ ಇದ್ದ ಗುಣವನ್ನೇ ವೃದ್ಧಿಪಡಿಸುವುದು. ವೈದ್ಯನು ಪ್ರಾಣಾಪಹಾರಕವಾದ ವಿಷವನ್ನು ಪ್ರಾಣದಾಯಕವಾದ ರಸಾಯನವಾಗಿ ಮಾಡಬಲ್ಲನು ಎಂಬ ತತ್ತ್ವವನ್ನು ಅಂಗೀಕರಿಸಿದ ಎರಡನೆಯ ಗುಂಪಿನವರು ಇಲ್ಲದ ಗುಣವನ್ನು ಹುಟ್ಟಿಸುವ ವಿಶೇಷ ಗುಣವನ್ನೇ ಸಂಸ್ಕಾರವೆನ್ನದೆ ದೀಕ್ಷೆಯೆನ್ನುವರು. ಈ ದೀಕ್ಷಾಸಂಪ್ರದಾಯದವರು

'ಮನುಷ್ಯರಿಗೆ ದೇಹತ್ವಕ್ಕಿಂತಲೂ ಮನಸ್ತತ್ತ್ವ ಹೆಚ್ಚು ಮನೋಬುದ್ಧಿ ಅಹಂಕಾರಗಳೇ ಮುಖ್ಯವಾದ್ದರಿಂದ ಮಾತೃತಃ ಪಿತೃತಃ ಬರುವ ದೇಹಕ್ಕಿಂತಲೂ ಗುರುವಿನಿಂದ ಸಂಸ್ಕಾರವಶನಾಗಿ ಬರುವ ಅಂತಃಕರಣಶುದ್ಧಿಯೇ ಮುಖ್ಯವಾದ್ದರಿಂದ, ಆ ಅಂತಃಕರಣಶುದ್ಧಿಯಿಂದಲೇ ಜಾತಿ ನಿರ್ಣಯವೆನ್ನುವರು.

ವರ್ಣಾಶ್ರಮಧರ್ಮಸಂಪನ್ನರು ಇದನ್ನು ಒಪ್ಪದೆ, ಅಸ್ಪೃಷ್ಟಧಿಕಾರವನ್ನು ಸ್ಪೃಷ್ಟಾಧಿಕಾರವನ್ನು ಮಾಡುವ, ಒಂದನ್ನು ನೂರುಮಾಡುವ ಸಂಸ್ಕಾರವನ್ನು ಮಾತ್ರ ಅಂಗೀಕರಿಸುವರು. ಅಂತಃಕರಣ ಶುದ್ಧಿ-ಅಶುದ್ಧಿಗಳು ಗೋಚರವಾಗುವುದು ಯಾವುದೋ ಒಂದು ವಯಸ್ಸಿಗೆ ಬಂದಾಗ. ಅದು ಕನ್ಯೆಯು ಋತುಮತಿಯಾಗಿ ಸ್ತ್ರೀ ಆದಂತೆ ಅದುವರೆಗೆ ವ್ಯವಸ್ಥೆ ಇಲ್ಲದಿದ್ದರೆ ಹೇಗೆ? ಅಲ್ಲದೆ, ಜೊತೆಗೆ ಆನುವಂಶಿಕ ಗುಣಗಳಿಂದಲೇ ಎಲ್ಲವೂ ಸಿದ್ಧವಾಗುವುವು. ಕುದುರೆ, ಒಂಟೆ, ಕುರಿಗಳು ಹಾಲು ಕರೆದರೂ, ಆ ಹಾಲು ಬಿಟ್ಟು ಮತ್ತೇನನ್ನೂ ಉಪಯೋಗಿಸದವರೇ ಇದ್ದರೂ ಅವು ಹಸುಗಳಲ್ಲ. ಅದರಿಂದ, ಮಾತೃತಃ ಪಿತೃತಃ ಬರುವ ಜಾತಿಯೇ ಜಾತಿ ಎಂಬ ತತ್ತ್ವವನ್ನೇ ಅಂಗೀಕರಿಸಿ, 'ಜನ್ಮಶುದ್ಧಿಯಿಲ್ಲದಿದ್ದಲ್ಲಿ ಸಂಸ್ಕಾರವು ಏನೂ ಮಾಡಲಾರದು. ಅದರಿಂದ, ಈ ತಜ್ಜಾತರಿಗೆ ಸಂಸ್ಕಾರ' ಎನ್ನುವರು ಇವರು.

ನಾವೆಲ್ಲರೂ ಈ ಸಿದ್ಧಾಂತವನ್ನು ಅಂಗೀಕರಿಸಿದವರು. ಜೊತೆಗೆ ಧರ್ಮಕಾಮನಲ್ಲದವನಿಗೆ ಸಮಾಜದಲ್ಲಿ ಸ್ಥಾನವಿಲ್ಲ ಎಂಬ ತತ್ತ್ವವನ್ನು ಅಂಗೀಕರಿಸಿದವರು. ಈಗ ನೀನು ತಜ್ಜಾತನಾದುದರಿಂದ ನೀನು ತತ್ಸಂಸ್ಕಾರ ಸಂಪನ್ನನಾಗಬೇಕು. ಸಂಸ್ಕಾರದಿಂದಲೇ ಫಲವಾಗದೇ ಹೋದರೋ ಎಂದರೆ ಒಂದೊಂದು ವೇಳೆ ಸಂಸ್ಕಾರಫಲವು ಸದ್ಯದಲ್ಲಿ ಕಾರಣಾಂತರಗಳಿಂದ ಗೋಚರಿಸದೆ ಹೋದರೂ, ಅದು ಅಪೂರ್ವವಾಗಿದ್ದುಕೊಂಡು ಕಾಲದೇಶಗಳು ಅನುಕೂಲವಾದಾಗ ಮುಂದಿನ ಸಂತಾನದಲ್ಲಿ ಪ್ರಕಟವಾಗುವುದು. ಅದರಿಂದ ಆನುವಂಶಿಕ ಗುಣೋತ್ತೇಜಕವಾದ ಸಂಸ್ಕಾರವನ್ನು ನೀನೂ ಪಡೆದು ಅದನ್ನು ಅನುಷ್ಠಾನ ಮಾಡುವುದಾದರೆ, ನೀನು ದಾಯಾರ್ಹನು.

ಮೇಲೆ ಹೇಳಿದ ಎರಡು ಗುಂಪುಗಳಲ್ಲಿ ಇನ್ನೊಂದು ವಿಶೇಷವುಂಟು. ಏಕಪಿಂಡ ಜಾತಿಯ ಸಾಮಾಜಿಕ ವ್ಯವಸ್ಥೆಯನ್ನು ಕಾಪಾಡುವುದಕ್ಕೆ ಅತ್ಯವಶ್ಯವಾದ ನಯ ವಿನಯರೂಪವಾದ ಸಾಮಾನ್ಯ ಧರ್ಮವನ್ನು ಅಂಗೀಕರಿಸುವುದು. ಅಲ್ಲಿ ಸೌಜನ್ಯವೇ ಧರ್ಮ ಹತ್ತು ಜನರು ಸೇರಿ ಮಾಡಿಕೊಂಡ ಕಡ್ಡಳಯೇ ಧರ್ಮ. ಆದರೆ ಸೋಪಾನಕ್ರಮದವರು ಇನ್ನೊಂದು ಹೆಜ್ಜೆ ಮುಂದೆ ಹೋಗಿ 'ಸಮಾಜವು ವ್ಯಕ್ತಿಯಂತೆಯೇ ದೇಶ ಕಾಲ ಕರ್ಮಾನುಗುಣವಾಗಿ ಭಿನ್ನೈಸಿದರೂ ಅದು ವಿಶ್ವದ ಒಂದು ಅಂಗ. ಅದರಿಂದ ಸಮಾಜದ ಉತ್ತಮವ್ಯಕ್ತಿಯು ವಿಶ್ವದ ಪ್ರತಿನಿಧಿಯಾಗಿ, ತನ್ನ ಸ್ವಧರ್ಮದ ಪ್ರತೀಕವಾಗಿ ಕಾಲ, ದೇಶ, ಜಾತಿ, ಕುಲಗಳನ್ನು ಮಾತ್ರವಲ್ಲದೆ, ವಿಶ್ವಕುಟುಂಬವನ್ನೂ ಲಕ್ಷ್ಯದಲ್ಲಿಟ್ಟುಕೊಂಡು ತನ್ನ ಕಾರ್ಯವನ್ನು ನಿರೂಪಿಸಿಕೊಂಡು, ಆಚರಿಸಬೇಕು. ಈ ಲಕ್ಷ್ಯವು ಮೇಲುಮೇಲಕ್ಕೆ ಹೋಗುತ್ತಾ ಹೆಚ್ಚು ಹೆಚ್ಚು ಪ್ರಕಟವಾಗಿ, ಕೊನೆಯ ಅಂತಸ್ತಿನಲ್ಲಿ ಕಾಣಿಸುವ ಗೋಪುರದ ಶಿಖರದಂತಿರುವುದು. ಗೋಪುರದ ಕಲಶಗಳು, ಆ ಗೋಪುರದ ಅಂತಸ್ತು ಅಂತಸ್ತಿನ ಬಲದಿಂದ ನಿಂತಿರುವಂತೆ, ಸಮಾಜದ ಉತ್ತಮ ವ್ಯಕ್ತಿಯು ಸಮಾಜದ ಸಂಬಂಧವೆನ್ನುವುದನ್ನು ಮರೆಯಬಾರದು.' ಎನ್ನುವರು.

ಮುಂದುವರೆಯುವುದು....

ಬದುಕಲೊಂದಿಷ್ಟು ಆಪ್ತಮಾತುಗಳು

ಲೇ|| ಬಿ.ಎನ್. ರಮೇಶ ಬೊಂಗಾಳೆ

# ಮುನ್ನಡೆಯುವುದನ್ನು ಕಲಿಯಬೇಕು

ಉನ್ನತವಾದ ಹುದ್ದೆ ಮತ್ತು ಹೆಚ್ಚಿನ ವೇತನವನ್ನು ಪಡೆಯುವ ವಿಚಾರ ಕೆಲವರದ್ದಾಗಿರುತ್ತದೆ, ಆದ್ದರಿಂದಲೇ ಅವರು ಹಾಗೆಯೇ ಬರಿಗೈಯಲ್ಲಿ ಕುಳಿತುಕೊಂಡಿರುತ್ತಾರೆ. ಸಣ್ಣ ಪ್ರಮಾಣದಿಂದ ಮೇಲೇರುವುದನ್ನು ಅವರು ತಿಳಿದಿರುವುದೇ ಇಲ್ಲ. ವ್ಯಕ್ತಿಯು ತಾನು ಎಲ್ಲೇ ಇರಲಿ, ಯಾವ ಸ್ಥಾನದಲ್ಲೇ ಇರಲಿ, ಅಲ್ಲಿಂದಲೇ ಮುಂದೆ ಸಾಗುವುದನ್ನು ಕಲಿಯಬೇಕು. ಅದಕ್ಕಿರುವ ಉಪಾಯವೆಂದರೆ ಯಾವುದೇ ಕೆಲಸ ಆತನ ಕೈಯಲ್ಲಿರಲಿ, ಅದನ್ನು ಸರಿಯಾದ ರೀತಿಯಲ್ಲಿ ನಿರ್ವಹಿಸಬೇಕು. ಆವರೆಗೆ ಯಾರೂ ತೋರಿಸದ ನೈಪುಣ್ಯತೆಯನ್ನು ತೋರಿಸಬೇಕು. ತನ್ನ ಸಹೋದ್ಯೋಗಿಗಳಿಗಿಂತಲೂ ಹೆಚ್ಚು ವೇಗವಾಗಿರಬೇಕು. ಉತ್ಸಾಹಿತನಾಗಿರಬೇಕು, ಹೆಚ್ಚು ಸಾಹಸಿಗನೂ ಹಾಗೂ ವಿನಮ್ರನೂ ಆಗಿರಬೇಕು.

ತನ್ನ ಕೆಲಸಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಅಧ್ಯಯನ ಮಾಡಬೇಕು, ಅದಕ್ಕೊಂದು ಒಳ್ಳೆಯ ಪ್ರತಿಫಲ ಸಿಗುವಂತಾಗಲು ಹೊಸ-ಹೊಸ ಮಾರ್ಗಗಳನ್ನು ಕಂಡುಕೊಳ್ಳಬೇಕು. ಕೆಲಸ ನಿರ್ವಹಿಸುವುದು ಒಂದು ಕಲೆಯಾದರೂ ಸಹ ಅದರ ಧ್ಯೇಯ ಕೇವಲ ತೃಪ್ತಿಪಡಿಸುವುದಷ್ಟೇ ಅಲ್ಲ, ಬದಲಿಗೆ ನಿರೀಕ್ಷೆಗಿಂತಲೂ ಹೆಚ್ಚಿನ ಒಳ್ಳೆಯ ಕೆಲಸ ಮಾಡಿ ತೋರಿಸುವಂತಾಗಬೇಕು. ಅದರ ಪರಿಣಾಮವೂ ಆಗ ಒಳ್ಳೆಯದೇ ಆಗಿರುತ್ತದೆ.

ಕೆಲವು ಯುವಕರು ಹೇಳುವುದನ್ನು ಕೇಳಬೇಕು-"ಒಂದು ವೇಳೆ ನಮಗೆ ಆ ಕೆಲಸ (ಅವರಂದು ಕೊಂಡಿರುವ) ಸಿಗದಿದ್ದರೆ ಏನನ್ನೂ ಮಾಡದೆ ಮನೆಯಲ್ಲೇ ಕುಳಿತಿರುತ್ತೇವೆ" ಆ ಮಾತುಗಳಲ್ಲಿ ಬುದ್ಧಿವಂತಿಕೆ ಏನಿದೆ? ಮನೆಯಲ್ಲಿ ಸುಮ್ಮನೆ ಕುಳಿತು ಸಮಯವನ್ನು ಹಾಳು ಮಾಡುವುದರಿಂದ ಆಗುವ ಲಾಭವಾದರೂ ಏನು? ಎಂದು ಅವರಲ್ಲಿ ಪ್ರಶ್ನಿಸಬೇಕಾಗುತ್ತದೆ. ಹಾಳು

ಮಾಡಿಕೊಳ್ಳಲು ಸಮಯ ಎನ್ನುವುದು ಹಣವೇನಲ್ಲ. ಹಣಕ್ಕಿಂತಲೂ ಹೆಚ್ಚಿನ ಮೌಲ್ಯ ಅದಕ್ಕಿದೆ, ಅದನ್ನು 'ಬದುಕು' ಎಂದರೂ ತಪ್ಪಾಗುವುದಿಲ್ಲ. ಯಾವ ಕೆಲಸ ಎಷ್ಟು ಬೇಗನೆ ಸಿಗುತ್ತದೆಯೋ ಅದನ್ನು ತಕ್ಷಣ ಅವರು ಸ್ವೀಕರಿಸುವಂತಾಗಿರಬೇಕು. ತಮ್ಮ ಯೋಗ್ಯತೆಯನ್ನು ದೊಡ್ಡದೆಂದು ತಿಳಿದು ಕೆಲಸದ ಶ್ರೇಣಿಯ ಕುರಿತು ಯೋಚಿಸುವುದೆಂದರೆ ತಮ್ಮನ್ನು ಪತನದ ಹಾದಿಗೆ ಎಳೆದುಕೊಳ್ಳುವುದೇ ಆಗಿದೆ. ಯಾವ ಕೆಲಸವನ್ನು ನಾವು ಸಣ್ಣದೆಂದುಕೊಳ್ಳುತ್ತೇವೆಯೋ, ತುಚ್ಛವೆಂದುಕೊಳ್ಳುತ್ತೇವೆಯೋ ಆ ಕೆಲಸದಲ್ಲಿಯೇ ಯೋಗ್ಯ ರೀತಿಯ ಮನುಷ್ಯತ್ವವನ್ನು ಪ್ರಯೋಗಿಸಿದ್ದೇ ಆದರೆ ಆ ಕೆಲಸದ ಮೌಲ್ಯ ಮತ್ತು ಮಹತ್ವ ತಾನಾಗಿಯೇ ವೃದ್ಧಿಸುತ್ತದೆ. ಶಿಕ್ಷಿತ ವ್ಯಕ್ತಿ ಒಂದೊಮ್ಮೆ ಬಡಗಿಯ ಕೆಲಸ ಮಾಡಿದರೆ ಆ ಕೆಲಸಕ್ಕೊಂದು ಹೊಸ ಕಳೆ ಬರುವುದಲ್ಲದೆ ಕಲ್ಪನೆಯಿಂದ ಹೊಸ-ಹೊಸ ವಸ್ತುಗಳು ರೂಪುಗೊಳ್ಳಬಹುದು.

---

ಧರೆಗಿಳಿದ ದಿವ್ಯತೇಜ

ಲೇ : ಲ. ನ. ಶಾಸ್ತ್ರೀ

# ಮೂರ್ತಿ ಪೂಜೆಯ ಬಗ್ಗೆ ಜಿಜ್ಞಾಸೆ

ಆಚಾರ್ಯರು ಬಹಿರ್ಮುಖರಾಗುವವರೆಗೆ ಮೆಲುದನಿಯಲ್ಲಿ ಸ್ತೋತ್ರಗಳ ಪಾರಾಯಣ ಮಾಡುತ್ತ ಆಗಾಗ ಶಂಖ ಮತ್ತು ಕೊಳಲುಗಳ ಧ್ವನಿಯನ್ನು ಮಾಡುತ್ತ ಶಿಷ್ಯರು ಕಾದಿದ್ದರು. ಅನಂತರ ಆಚಾರ್ಯರು ತಮ್ಮ ಪ್ರಥಮ ಪೀಠಕ್ಕೆ ಅಧ್ಯಕ್ಷರನ್ನು ನಿರ್ದೇಶಿಸುವ ಕಾರ್ಯಪ್ರವೃತ್ತರಾದರು. ಈ ಪೀಠಕ್ಕೆ ಮೊದಲನೆಯ ಆಚಾರ್ಯರು ಯಾರಾಗಬೇಕೆಂದು, ಗುರುದೇವರು ತಮ್ಮ ಶಿಷ್ಯರನ್ನೆಲ್ಲಾ ಈ ಮೊದಲೇ ಕೇಳಿದ್ದರು. ಆಚಾರ್ಯರ ಶಿಷ್ಯರಾದರೋ ಈ ವಿಚಾರದಲ್ಲಿ ಸಂಪೂರ್ಣವಾಗಿ ಆಚಾರ್ಯರೇ ನಿರ್ಧಾರ ಕೈಗೊಳ್ಳಬೇಕೆಂದು ಪ್ರಾರ್ಥಿಸಿದರು.

ಆಚಾರ್ಯರು "ಈ ಭರತಭೂಮಿ ನಮ್ಮ ಮಾತೃಭೂಮಿ. ನಮ್ಮ ನಮ್ಮಲ್ಲಿ ಉತ್ತರದವರು, ದಕ್ಷಿಣದವರು ಎಂಬ ತಾರತಮ್ಯ ಇರಬಾರದು. ಆದ್ದರಿಂದ ಮಾಹಿಷ್ಮತಿಯ ಶ್ರೀ ಸುರೇಶ್ವರಾಚಾರ್ಯರು ಈ ಪೀಠದ ಅಧ್ಯಕ್ಷರಾಗಲಿ" ಎಂದರು. ಶಿಷ್ಯರೆಲ್ಲರೂ ತಮ್ಮ ಸಂತೋಷ ಸೂಚನೆಯಾಗಿ "ಉಘೇ ಉಘೇ" ಎಂದು ಮೇಲ್ದನಿಯಲ್ಲಿ ಘೋಷಿಸಿದರು. ಆಚಾರ್ಯರು ತಮ್ಮ ಹಿರಿಯ ಶಿಷ್ಯರಾದ ಶ್ರೀ ಸುರೇಶ್ವರರನ್ನು ಕರೆತಂದು ಶ್ರೀಚಕ್ರದ ಬಳಿ ಕುಳ್ಳಿರಿಸಿ ಅವರ ಶಿರಸ್ಸಿನ ಮೇಲೆ ತಮ್ಮ ಅಮೃತ ಹಸ್ತವನ್ನು ಇಟ್ಟು "ಇಂದಿನಿಂದ ತಾವು ಈ ಪೀಠದ ಆಚಾರ್ಯರು, ವೈದಿಕ ಧರ್ಮ ಮತ್ತು ತತ್ತ್ವರಕ್ಷಣೆಗೆ ತಾವು ಸದಾ ಬದ್ಧರಾಗಿದ್ದು, ತಮ್ಮ ತಪಸ್ಸು ಅನುಷ್ಠಾನಗಳಿಂದ ಜನಕ್ಕೆ ಮಾರ್ಗದರ್ಶನ ಮಾಡುತ್ತಿರಿ" ಎಂದು ಹರಸಿದರು.

ಶ್ರೀ ಸುರೇಶ್ವರರು ಪೀಠದಲ್ಲಿ ಮಂಡಿಸಿದ ನಂತರ ಆಚಾರ್ಯರು ಅವರ ಶಿರದ ಮೇಲೆ ಸಾಲಿಗ್ರಾಮವನ್ನಿಟ್ಟು ಧ್ಯಾನ ಅವಾಹನಾದಿ ಪೂಜೆ ಮಾಡಿದರು. ಸ್ವತಃ ದಂಡವನ್ನು ಹಿಡಿದು ನಮಸ್ಕಾರ ಮಾಡಿದರು. "ಅದ್ವೈತದ ತುರೀಯ ಸ್ಥಿತಿಯಲ್ಲಿ ಎಲ್ಲವೂ ಬ್ರಹ್ಮವೇ ವಿನಾ ಬೇರೊಂದೂ ಇರುವುದಿಲ್ಲ. ಈ ಗುರು ಶಿಷ್ಯ ಭಾವವೆಲ್ಲಾ ವ್ಯವಹಾರದಲ್ಲಷ್ಟೇ. ಈಗ ನೀವು ವ್ಯಾಖ್ಯಾನ ಪೀಠದಲ್ಲಿ ಮಂಡಿಸಿದೀರಿ. ಇದು ಶ್ರೀ ಶಾರದಾ ಪೀಠ ಇದು ಅವಿಚ್ಛಿನ್ನವಾಗಿ ಬೆಳೆಯಲಿ, ಧರ್ಮ ವೃದ್ಧಿಸಲಿ ಎಲ್ಲರಿಗೂ ಸುಖಶಾಂತಿ ಲಭಿಸಲಿ" ಎಂದು ಆಚಾರ್ಯರು ನುಡಿದರು. ಶ್ರೀ ಸುರೇಶ್ವರರು ಭಾವೋದ್ವೇಗದಿಂದ ಅದುರುತ್ತಿದ್ದರು. ಅವರ ಧ್ವನಿ ಕಂಪಿಸುತ್ತಿತ್ತು. ಅವರು ಆಚಾರ್ಯರ ಬಳಿ ಸಾರಿ "ಗುರುದೇವ, ತಮ್ಮ ಅನುಗ್ರಹ ತುಂಬಾ ಗುರುತರ, ದೊಡ್ಡದು. ಈ ಹಿರಿಯ ಭಾರವನ್ನು ಭರಿಸುವ ಶಕ್ತಿ ಚೈತನ್ಯಗಳು ನನಗೆ ದೊರಕುವಂತೆ ಆಶೀರ್ವದಿಸಬೇಕು" ಎಂದು ಪ್ರಾರ್ಥಿಸಿದರು. ಅನಂತರ "ನಾನೂ ತಮಗೆ ಪ್ರತಿದಿನವೂ ಸಲ್ಲಿಸುತ್ತಿರುವ ಮಾನಸಪೂಜೆಯನ್ನು ಈ ದಿನ ಈಗ ತಮಗೆ ಬಾಹ್ಯಪೂಜೆಯಾಗಿ ಸಲ್ಲಿಸುತ್ತೇನೆ, ದಯವಿಟ್ಟು ಒಪ್ಪಿಕೊಳ್ಳಬೇಕು" ಎಂದು ಕೋರಿದರು. ಆಚಾರ್ಯರನ್ನು ಹಸ್ತಲಾಘವವನ್ನಿತ್ತು, ಅದೇ ವ್ಯಾಖ್ಯಾನ ಪೀಠಕ್ಕೆ ಕರೆತಂದು ಕುಳ್ಳಿರಿಸಿದರು.

ಅನಂತರ ಅವರ ಪಾದುಕೆಗಳನ್ನು ಭಕ್ತಿಯಿಂದ ಕೈಗಳಲ್ಲಿ ತೆಗೆದುಕೊಂಡು, ತಮ್ಮ ವಸ್ತ್ರದಿಂದ ಒರೆಸಿ, ಗಂಧಪುಷ್ಪಗಳನ್ನು ಅರ್ಪಿಸಿದರು. ಆಚಾರ್ಯರ ಪಾದುಕೆಗಳಿಗೆ ನಮಸ್ಕಾರ ಮಾಡಿದರು. ಅನಂತರ ಎಲ್ಲರೂ ಒಬ್ಬೊಬ್ಬರಾಗಿ ಬಂದು ಆಚಾರ್ಯರ ಪಾದುಕೆಗಳಿಗೆ ನಮಸ್ಕಾರ ಮಾಡಿದರು. ಶೃಂಗಗಿರಿಯ ಗ್ರಾಮಸ್ಥರೂ, ಸುತ್ತಮುತ್ತಣ ಜನರೂ ಈ ಸಮಾರಂಭಕ್ಕೆ ಆಗಮಿಸಿದ್ದು, ಫಲಪುಷ್ಪಗಳನ್ನು ಹಣ್ಣು ಕಾಯಿಗಳನ್ನೂ ಒಪ್ಪಿಸಿದರು.

ಶ್ರೀ ಶಾರದಾ ಪೀಠ ಸ್ಥಾಪನೆಯಾದ ರಾತ್ರಿ ಶುಕ್ಲಪಕ್ಷದ ಬೆಳದಿಂಗಳು ಸುತ್ತೆಲ್ಲ ಹಾಲಿನಂತೆ ಚೆಲ್ಲಿತ್ತು. ತುಂಗಾತೀರದ ಹಲವಾರು ಪರ್ಣಕುಟಿಗಳಲ್ಲಿ ಇನ್ನೂ ತೈಲದೀಪಗಳು ಬೆಳಗುತ್ತಿದ್ದವು. ಆಚಾರ್ಯರು ತುಂಗಾನದಿಯ ದಕ್ಷಿಣಕ್ಕೆ ಬಂಡೆಯೊಂದರ ಮೇಲೆ ಉತ್ತರಾಭಿಮುಖವಾಗಿ ಕುಳಿತು ಮನಸ್ಸಿನಲ್ಲಿಯೇ ಶ್ರೀದೇವೀ ಚತುಃಷಷ್ಟ್ಯುಪಚಾರ ಪೂಜೆಯನ್ನು ಮಾಡುತ್ತಿದ್ದರು. ಧ್ಯಾನದಿಂದ ಆರಂಭಿಸಿ ಪ್ರತಿಯೊಂದು ಉಪಚಾರಕ್ಕೂ ಸುಂದರವಾದ ಶ್ಲೋಕಪುಷ್ಪವೊಂದೊಂದು ಮನಸ್ಸಿನಲ್ಲಿಯೇ ವಿಕಸಿಸುತ್ತಿತ್ತು. ಅರ್ಧ ನಿಮೀಲಿತ ನೇತ್ರರಾಗಿ ಮುಖದಲ್ಲಿ ಗಾಂಭೀರ್ಯ, ಶಾಂತಿ ಸೂಸುತ್ತಿರಲು, ಆಚಾರ್ಯರು ದೇವಿಯನ್ನು ಲೋಕಾನುಗ್ರಹಕ್ಕಾಗಿ ಪ್ರಾರ್ಥಿಸುತ್ತಿರುವರೇನೋ ಎಂಬಂತೆ, ಎರಡು ಹಸ್ತಗಳೂ ಬೊಗಸೆಯಾಗಿ ಮುಂದೆ ಚಾಚಿದ್ದವು. ಆಚಾರ್ಯರ ಶರೀರದ ಸುತ್ತಲೂ ಪ್ರಭಾಮಂಡಲವೊಂದು ಪ್ರಕಾಶಿಸುತ್ತಿತ್ತು.

ಶಿಷ್ಯರು ಒಬ್ಬೊಬ್ಬರಾಗಿ ಬಂದು ನಮಸ್ಕರಿಸಿ ಸದ್ದಿಲ್ಲದೆ ಕುಳಿತರು. ಆ ದಿನದ ಸಂಭ್ರಮಸಂತೋಷದಲ್ಲಿ ಯಾರಿಗೂ ನಿದ್ರೆಯೇ ಬರದು. ತೀರಾ ಬೆಳಗಿನಿಂದ ಸಂಜೆಯವರೆಗೆ ಹಲವಾರು ರೀತಿಯ ಕೆಲಸಕಾರ್ಯಗಳಲ್ಲಿ ಮಗ್ನರಾಗಿದ್ದರೂ ಯಾರಿಗೂ ಆಯಾಸದ ಪರಿವೆಯೇ ಇಲ್ಲ. ತಮ್ಮ ಗುರುದೇವರು ಇನ್ನೂ ವಿಶ್ರಾಂತಿಗೆ ತೆರಳದೆ, ಧ್ಯಾನಾಸಕ್ತರಾಗಿದ್ದುದರಿಂದ, ಶಿಷ್ಯರೂ ಗುರುವನ್ನು ಅನುಸರಿಸಿ ಅವರ ಬಳಿಯೇ ಕುಳಿತರು.

ಆಚಾರ್ಯರು ಮಾನಸಪೂಜೆಯನ್ನೆಲ್ಲಾ ಮುಗಿಸಿ ಬಹಿರ್ಮುಖರಾಗುವ ವೇಳೆಗೂ, ಶ್ರೀ ತೋಟಕಾಚಾರ್ಯರು ಗುರುವಿಗೆ ಉಣ್ಣೆಯ ವಸ್ತ್ರವೊಂದನ್ನು ತಂದು ಮೆಲ್ಲನೆ ಹೊದಿಸುವುದಕ್ಕೂ ಸರಿಹೋಯಿತು. ಆಚಾರ್ಯರು ಮೆಲ್ಲನೆ ಕಣ್ತೆರೆದು ಸುತ್ತಲೂ ನೋಡಿದರು; ಶಿಷ್ಯರೆಲ್ಲಾ ಮೌನವಾಗಿ ಕುಳಿತಿದ್ದಾರೆ, ಮೈಮೇಲೆ ಬೆಚ್ಚನೆಯ ವಸ್ತ್ರವೊಂದಿದೆ, ತತ್‌ಕ್ಷಣ ಪಕ್ಕಕ್ಕೆ ನೋಡಿದರು, ತೋಟಕರು ಕೈಕಟ್ಟಿ ತಲೆಬಾಗಿ ನಿಂತಿದ್ದರು "ಗುರುದೇವ, ಹಿಮಬೀಳುತ್ತಿದೆ, ಛಳಿಗಾಳಿಯೂ ಅಧಿಕವಾಗಿದೆ. ಆದ್ದರಿಂದ ವಸ್ತ್ರವೊಂದನ್ನು ತಂದು ತಮ್ಮ ಶರೀರಕ್ಕೆ ಅಚ್ಛಾದನ ಮಾಡಿದೆ" ಎಂದು? ವಿಜ್ಞಾಪಿಸಿದನು. ಆಚಾರ್ಯರು ಮಂದಹಾಸಬೀರಿ "ನೀನು ನನ್ನ ಶಿಷ್ಯನೂ ಆಗಿದೀಯೆ, ಯೋಗಕ್ಷೇಮಾಧಿಕಾರಿಯೂ ಆಗಿದೀಯೆ, ತೋಟಕ" ಎಂದರು.

ಸ್ವಲ್ಪಹೊತ್ತು ಆ ದಿನದ ಶ್ರೀ ಶಾರದಾ ಪೀಠದ ಸ್ಥಾಪನೆ, ಅಧ್ಯಕ್ಷರ ನೇಮಕ ಈ ವಿಚಾರಗಳನ್ನು ಮಾತನಾಡುತ್ತ ಕಳೆಯಿತು.

ಕೃಷ್ಣಮಿಶ್ರನು "ಆಚಾರ್ಯದೇವ, ಒಂದು ಸಂಶಯ ನನ್ನನ್ನು ಪೀಡಿಸುತ್ತಿದೆ" ಎಂದನು.

"ಏನದು ಹೇಳು"

"ಅನಾದಿಯೂ ಅನಂತವೂ ನಿತ್ಯವೂ, ಸರ್ವಶಕ್ತ, ಸರ್ವವ್ಯಾಪಕವೂ ಮನೋವಾಗತೀತವೂ ನಾಮರೂಪರಹಿತವೂ ಸಚ್ಚಿದಾನಂದ ಸ್ವರೂಪವೂ ಆದ ಪರಬ್ರಹ್ಮದ ಉಪಾಸಕನಿಗೆ ಈ ನಾಮರೂಪವುಳ್ಳ ಪೂಜೆ ಅಸಿಂಧುವಲ್ಲವೇ? ದ್ವೈತಭಾವಕ್ಕೆ ಇದು ಎಡೆ ಮಾಡಿಕೊಳ್ಳುವುದಿಲ್ಲವೇ?" ಎಂದು ಪ್ರಶ್ನಿಸಿದನು.

ಆಚಾರ್ಯರು "ಕೃಷ್ಣಮಿಶ್ರ, ನಿನ್ನ ಸಂದೇಹ ಯುಕ್ತವಾದುದೇ ಸರಿ. ನಿನ್ನ ಪ್ರಶ್ನೆ ಸಕಾಲಿಕವಾಗಿಯೂ ಇದೆ. ವಿಗ್ರಹವಾಗಲೀ, ಯಂತ್ರವಾಗಲೀ, ಸಾಲಿಗ್ರಾಮವಾಗಲಿ ಅಥವಾ ಶಿವಲಿಂಗವಾಗಲಿ, ಇವೆಲ್ಲವೂ ಪರಬ್ರಹ್ಮವಲ್ಲ, ಅದರ ಪ್ರತೀಕಗಳು" ಎಂದರು.

"ಹಾಗಾದರೆ ಈ ವಿಗ್ರಹ ಪೂಜೆಯು ತೀರಾ ಅವಶ್ಯಕವೇನಲ್ಲ" ಎಂದನು ಕೃಷ್ಣಮಿಶ್ರ.

"ಸ್ಥಿರ ಮನಸ್ಕರಿಗೆ, ಧ್ಯಾನಾದಿಗಳಲ್ಲಿ ಮುಂದುವರಿದವರಿಗೆ ಅವಶ್ಯಕವಲ್ಲ. ಆದರೆ, ಮಾನವನ ಮನಸ್ಸು ಸಹಜವಾಗಿ ಚಂಚಲ. ಇಂದ್ರಿಯಗಳೆಲ್ಲವೂ ಹೊರಮುಖವಾಗಿ ಓಡುತ್ತಿರುತ್ತವೆ. ಮನಸ್ಸು ಇಂದ್ರಿಯಗಳನ್ನು ಸದಾ ಹಿಂಬಾಲಿಸುತ್ತಿರುತ್ತದೆ ಸದಾ ಚಂಚಲವಾಗಿರುವ ಮನಸ್ಸನ್ನು ಸ್ಥಿರಗೊಳಿಸುವುದು ಹೇಗೆ? ಪರಬ್ರಹ್ಮ ಸಾಕ್ಷಾತ್ಕಾರವೇ-ಅರ್ಥಾತ್ ಆತ್ಮ ಬ್ರಹ್ಮರ-ಏಕತೆಯ ಅರಿವೇ ನಮ್ಮ ಗುರಿಯಾಗಿದೆ. ನಿರಾಕಾರನೂ ಆದಿ ಮಧ್ಯ ಅಂತರಹಿತನೂ, ಸರ್ವವ್ಯಾಪಿಯೂ, ಸರ್ವಶಕ್ತನೂ, ನಿತ್ಯಬುದ್ಧ ಮುಕ್ತ ಸ್ವಭಾವನೂ ಆದ ಬ್ರಹ್ಮವನ್ನು ಈ ಕ್ಷಣಕ್ಷಣಕ್ಕೂ ಹರಿದಾಡುತ್ತಿರುವ ಮನಸ್ಸಿನಿಂದ ಕಲ್ಪಿಸಿಕೊಳ್ಳಲು ಊಹಿಸಿಕೊಳ್ಳಲು ಸಾಧ್ಯವೇ?"

"ಹೌದು, ಅದು ಸುಲಭ ಸಾಧ್ಯವಲ್ಲ."

"ಆದ್ದರಿಂದ ಮನಸ್ಸನ್ನು ಒಂದೇ ಕಡೆಗೆ ಹರಿಯುವಂತೆ, ಒಂದೇ ವಿಚಾರದತ್ತ ಹರಿಯುವಂತೆ ಮಾಡಲು, ಒಂದು ಪ್ರತೀಕ, ಮೂರ್ತಿ, ಯಾವುದಾದರೊಂದು ಆಲಂಬನೆ ಅವಶ್ಯಕ. ಆ ಪ್ರತೀಕವಾಗಲೀ, ಮೂರ್ತಿಯಾಗಲೀ ಹೇಗಿರಬೇಕು? ಮನಸ್ಸನ್ನು ತನ್ನೆಡೆಗೆ ಆಕರ್ಷಿಸಿ ಅದರಲ್ಲಿಯೇ ನೆಲೆಸುವಂತಿರಬೇಕು. ಪರಬ್ರಹ್ಮವು ಸರ್ವವ್ಯಾಪಕವಾಗಿರುವುದರಿಂದ ಅದನ್ನು ಮನಸ್ಸಿನಲ್ಲಿ ಊಹಿಸಿಕೊಳ್ಳುವುದು ತುಂಬಾ ಕಷ್ಟ. ಆದ್ದರಿಂದ ವಿಗ್ರಹ ಅಥವಾ ಪ್ರತೀಕದಲ್ಲಿ ಆ ಪರಬ್ರಹ್ಮನನ್ನು ಭಾವನೆ ಮಾಡಿ ಪೂಜಿಸುವುದು, ಧ್ಯಾನಿಸುವುದು ಒಂದು ಸುಲಭೋಪಾಯ. ಇದರಿಂದ ಮನಸ್ಸಿಗೂ, ಇಂದ್ರಿಯಗಳಿಗೂ ಒಳ್ಳೆಯ ಶಿಕ್ಷಣವು ದೊರಕಿ ಮನಸ್ಸು ಮತ್ತು ಇಂದ್ರಿಯಗಳ ನಿಗ್ರಹ ಸಾಮರ್ಥ್ಯ ಬರುತ್ತದೆ. ಕ್ರಮ ಕ್ರಮವಾಗಿ ಮೂರ್ತಿಯ ಬಾಹ್ಯ ಪೂಜೆಯಿಂದ ಪ್ರತೀಕದ ಪೂಜೆ, ಅದರಿಂದ ಅಂತರಂಗದ ಮಾನಸ ಪೂಜೆ, ಧ್ಯಾನ ಇವು ಮುಂದುವರಿಯಬೇಕು. ಇದೆಲ್ಲವೂ ಮುಂದೆ ನಿರಾಕಾರನಾದ ಪರಮಾತ್ಮನ ಧ್ಯಾನಕ್ಕೆ ಸಹಜವಾದ ಮೆಟ್ಟಿಲುಗಳು" ಎಂದರು.

ಕೃಷ್ಣಮಿಶ್ರನು "ಗುರುದೇವ, ಈ ದೇವಮೂರ್ತಿ ಪೂಜಾದಿಗಳಿಗೆ ನಮ್ಮ ಶಾಸ್ತ್ರಗಳಲ್ಲಿ ಏನಾದರೂ ಆಧಾರವಿದೆಯೇ?" ಎಂದು ಕೇಳಿದನು. "ಆಧಾರಗಳಿಲ್ಲದೇ ಏನು? ವಿಪುಲವಾಗಿ ದೊರಕುತ್ತದೆ. ಋಗ್ವೇದದ ಪುರುಷ ಸೂಕ್ತದಲ್ಲಿ ಬರುವ ಪುರುಷನು **ಸಹಸ್ರಶೀರ್ಷಾಃ ಪುರುಷಃ - ಸಹಸ್ರ ಶಿರಗಳುಳ್ಳವನು ಎಂದಿದೆ. ಸಹಸ್ರಾಕ್ಷಃ** ಸಾವಿರ ಕಣ್ಣುಗಳುಳ್ಳವನು; **ಸಹಸ್ರಪಾತ್-** ಸಹಸ್ರ ಪಾದಗಳುಳ್ಳವನು ಎಂದಿದೆ. ಇಲ್ಲಿ ವಿರಾಟ್ ಮೂರ್ತಿಯ ಭವ್ಯ ಕಲ್ಪನೆ ಬರುವುದಿಲ್ಲವೇ?

ತೈತ್ತಿರೀಯೋಪನಿಷತ್ತು ವಿರಾಟ್ ಬ್ರಹ್ಮನನ್ನು ವರ್ಣಿಸುತ್ತಾ **"ತಸ್ಯ ಯಜುರೇವ ಶಿರಃ ಋಕ್ ದಕ್ಷಿಣ ಪಕ್ಷಃ"** ಎಂದು ವರ್ಣಿಸುವಾಗ ಯಜುರ್ವೇದವು ಅದರ ಶಿರಸ್ಸು, ಋಗ್ವೇದವು ಅದರ ಬಲಭುಜ, ಸಾಮವು ಅದರ ವಾಮಭುಜವಾಗಿದೆ-ಎಂದು ಹೇಳುವಾಗ ಭವ್ಯ ಮೂರ್ತಿಯ ದಿವ್ಯ ಚಿತ್ರ ಮೂಡುವುದಿಲ್ಲವೇ?

"ಯಜ್ಞೇಶ್ವರನನ್ನು ಕುರಿತ ಮಂತ್ರದಲ್ಲಿ **ಚತ್ವಾರಿ ಶೃಂಗಾಃ** ನಾಲ್ಕು ಕೊಂಬುಗಳುಳ್ಳವನು; **ತ್ರಯೋ ಅಸ್ಯಪಾದಾಃ** ಮೂರು ಪಾದಗಳುಳ್ಳವನು; **ದ್ವೇಶಿರ್ಷೇ** ಎರಡು ಶಿರಗಳುಳ್ಳವನು; **ಸಪ್ತ ಹಸ್ತಾಸೋ ಅಸ್ಯ** ಏಳು ಹಸ್ತಗಳುಳ್ಳವನು ಎಂದು ವರ್ಣಿಸಿಲ್ಲವೇ? ಇದರಿಂದ ನಮ್ಮಲ್ಲಿ ಮೂರ್ತಿಯ ಕಲ್ಪನೆ ಉಂಟಾಗುವುದಿಲ್ಲವೇ?

ಶ್ರೀ ಶತರುದ್ರೀಯದ ರುದ್ರಮಂತ್ರವನ್ನು ಹೇಳುವಾಗ, ಪರಮಾತ್ಮನ ನಾನಾ ರೂಪನಾಮಗಳು ವ್ಯಕ್ತವಾಗುವುದಿಲ್ಲವೇ?

"ಕೇನ ಉಪನಿಷತ್ತಿನಲ್ಲಿ ಬರುವ ಯಕ್ಷ, ಇಂದ್ರ, ದೇವಿ, ಕಠೋಪನಿಷತ್ತಿನಲ್ಲಿ ಬರುವ ಯಮ ಇವರೆಲ್ಲರೂ, ಸಾಕಾರ ರೂಪವಾಗಿ ಬಂದು ವ್ಯವಹರಿಸಿದಂತೆ ತಿಳಿಯುವುದಿಲ್ಲವೇ?

"ಛಾಂದೋಗ್ಯವು ಮನೋಬ್ರಹ್ಮೇತಿ ಉಪಾಸೀತ, ಆಕಾಶೋ ಬ್ರಹ್ಮೇತ್ಯುಪಾಸೀತ ಎಂದು ಉಪದೇಶಿಸಿ, ವಾಗಿಂದ್ರಿಯ, ಘ್ರಾಣೇಂದ್ರಿಯ, ಚಕ್ಷುರಿಂದ್ರಿಯ, ಶ್ರೋತ್ರಿಂದ್ರಿಯ ಇವು ಆಧ್ಯಾತ್ಮ; ಅಗ್ನಿ ಒಂದು ಪಾದ, ವಾಯುವೊಂದು ಪಾದ, ಆದಿತ್ಯವೊಂದು ಪಾದ, ದಿಕ್ಕುಗಳು ಒಂದು ಪಾದ; ಇದು ಅಧಿದೈವಕ್ಕೆ ಎನ್ನುತ್ತದೆ. ಗೋವಿಗೆ ನಾಲ್ಕು ಪಾದಗಳಿರುವಂತೆ ಬರುವ ಈ ವರ್ಣನೆ ಒಂದು ಬೃಹತ್ತಾದ ಮೂರ್ತಿಯ ಕಲ್ಪನೆಯನ್ನು ಉಂಟುಮಾಡುವುದಿಲ್ಲವೇ? ನಮ್ಮ ಪೂರ್ವಿಕರಾದ ಋಷಿಯೋಗಿಗಳು ತಮ್ಮ ಧ್ಯಾನಾವಸ್ಥೆಯಲ್ಲಿ ತಮ್ಮ ಹೃದಯ ಗುಹೆಯಲ್ಲಿ ದರ್ಶನ ಮಾಡಿದ ನಾಮರೂಪಗಳನ್ನು ನಮಗೆ ವಿವರಿಸಿದ್ದಾರೆಯಲ್ಲವೇ?

ಮನಸ್ಸು ಮೊದಲಾದವುಗಳಲ್ಲಿ ಅದಕ್ಕೆ ಕಾರಣವಾದ ಬ್ರಹ್ಮದ ಭಾವವನ್ನು ಇಟ್ಟು ಉಪಾಸನೆ ಮಾಡಬೇಕು. ಹಾಗೆಯೇ ಸಾಲಿಗ್ರಾಮ, ಶಿವಲಿಂಗ, ಮೂರ್ತಿ, ಪ್ರತೀಕಗಳಲ್ಲಿ ಹಂತದಲ್ಲಿ ಉಪಾಸ್ಯ ಉಪಾಸಕರಲ್ಲಿ ಭೇದವಿದ್ದೇ ಇರುತ್ತದೆ.

"ಹೊರಮುಖವಾಗಿಯೇ ಸದಾ ವ್ಯವಹರಿಸುತ್ತಿರುವ ಮನಸ್ಸನ್ನು ಮತ್ತು ಇಂದ್ರಿಯಗಳನ್ನು ಸಂಯಮನ ಮಾಡಿ ಅವುಗಳನ್ನು ಒಳಮುಖವಾಗಿ ತಿರುಗಿಸಿ, ನಮ್ಮ ಹೃದಯಾಂತರಾಳದಲ್ಲಿಯೇ ಆತ್ಮನನ್ನು ಕಾಣಬೇಕು. ಇದು ಸಾಧ್ಯವಾಗುವುದು ಮನಸ್ಸು, ಇಂದ್ರಿಯಗಳು, ಶರೀರ ಇವು ಸಮರಸ ಸ್ಥಿತಿಯಲ್ಲಿ ಇದ್ದಾಗ ಮಾತ್ರ.

"ಆತ್ಮ ಸಾಕ್ಷಾತ್ಕಾರಕ್ಕೆ ಮನಸ್ಸನ್ನು ಪಳಗಿಸಿ ಹದ ಮಾಡುವುದಕ್ಕಾಗಿ ಈ ಮೂರ್ತಿಪೂಜೆ ಅವಶ್ಯಕ. ಇದೊಂದು ನಿಚ್ಚಣಿಗೆ, ಏಣಿಯಿದ್ದಂತೆ. ಆ ದಿವ್ಯಸ್ಥಿತಿಯನ್ನು ಮುಟ್ಟಿದವರಿಗೆ ಇದು ಬೇಕಾಗದು. ಆದರೆ ಬಹುಜನಕ್ಕೆ ಮನಸ್ಸನ್ನು–ಚಂಚಲವೂ ರಾಗದ್ವೇಷವಶವೂ ಆದ ಮನಸ್ಸನ್ನು ಏಕಾಗ್ರಗೊಳಿಸಲು ಮೂರ್ತಿಪ್ರತೀಕಗಳ ಉಪಾಸನೆ ಅವಶ್ಯಕ, ಅಗತ್ಯ. ಅದು ಅಸಾಧುವೂ ಅಲ್ಲ, ಅಸಿಂಧುವೂ ಅಲ್ಲ" ಎಂದು ಆಚಾರ್ಯರು ತಮ್ಮ ಶಿಷ್ಯರಿಗೆ ಉಪದೇಶಿಸಿದರು.

---

ಕಗ್ಗದ ಬೆಳಕಿನಲ್ಲಿ ಲೇ : ಜಿ.ಎಸ್.ನಟೇಶ್

# ಆವುದು ಕಿರಿದು? ಆವುದು ಹಿರಿದು?

**ಹಿಮಗಿರಿಯ ಕಂಡಂಗೆ ಕ್ರಿಮಿಯ ಹಿರಿಮೆಯದೇನು?**

ಕ್ರಿಮಿಗೆ ಹಸಿವುಂಟೆನಿತು ಬೆದಕಾಟಮುಂಟು।
ಅಮಿತಸಂತತಿಯುಂಟು ಹಿಮಗಿರಿಯ ಸಮಯುಗದ
ಕ್ರಿಮಿಪಂಕ್ತಿ ಕಿರಿದಹುದೆ – ಮಂಕುತಿಮ್ಮ॥

ಹಿಮಾಲಯದ ಪರ್ವತವನ್ನು ಕಂಡವನಿಗೆ ಕ್ರಿಮಿಯ ಶ್ರೇಷ್ಠತೆ ತಿಳಿಯದು. ಕ್ರಿಮಿಗೆ ಹಸಿವೆ ಇರುತ್ತದೆ. ಅಷ್ಟಿಷ್ಟು ಹುಡುಕಾಟವಿರುತ್ತದೆ. ಅನಂತ ಸಂತತಿ ಇರುತ್ತದೆ. ಹಿಮಾಲಯದ ಅಸ್ತಿತ್ವದ ಕಾಲದಿಂದಲೇ ಈ ಕ್ರಿಮಿಪಂಕ್ತಿ ಬಂದಿದೆ. ಅದನ್ನು ಕಿರಿದು ಎನ್ನಬಹುದೇ?

ವಿಶ್ವದ ಸೃಷ್ಟಿಯನ್ನು ಗಮನಿಸಿದರೆ ಅದೊಂದು ಅದ್ಭುತ ಹಾಗೂ ಸೋಜಿಗದ ಅನುಭವವಾಗುತ್ತದೆ. ಇಲ್ಲಿ ಅಣುವಿನಿಂದ ಮಹತ್ತಿನವರೆಗೂ ತನ್ನದೇ ಆದ ವಿಶಿಷ್ಟತೆಯನ್ನು ಹೊಂದಿರುವುದು ಕಂಡುಬರುತ್ತದೆ. ಇಲ್ಲಿ ಯಾವುದು ಶ್ರೇಷ್ಠ ಯಾವುದು ಕನಿಷ್ಠ ಎಂಬುದು ನಗಣ್ಯ. ಏಕೆಂದರೆ ಇಲ್ಲಿ ಎಲ್ಲವೂ ಪ್ರಧಾನವೇ. ಉದಾಹರಣೆಗೆ ಹಿಮಾಲಯ ಪರ್ವತ ಅನಾದಿಕಾಲದಿಂದಲೂ ಬಹಳ ದೊಡ್ಡದು ಎಂಬ ಹಿರಿಮೆಯನ್ನು ಹೊಂದಿದೆ. ಅದರ ಎದುರು ಒಂದು ಕ್ರಿಮಿ ಬಹಳ ಚಿಕ್ಕದು. ಆದರೆ ಕ್ರಿಮಿಯ ಸಂತತಿ ಹಿಮಾಲಯದಷ್ಟೇ ಹಳೆಯದು. ಮೇಲಾಗಿ ಕ್ರಿಮಿಗೆ ಹಸಿವೆ ಇದೆ. ಆಹಾರಕ್ಕಾಗಿ ಅದು ಸದಾ ಹುಡುಕಾಡುತ್ತದೆ. ಅದರ ಸಂತತಿಗೆ ಮಿತಿಯಿಲ್ಲ. ಆದರೆ ಹಿಮಾಲಯಕ್ಕೆ ಇದಾವುದೂ ಇಲ್ಲ. ಹಿಮಾಲಯದಷ್ಟೇ ಅನಾದಿಯಾದ ಕ್ರಿಮಿಪಂಕ್ತಿ ಕಿರಿದು ಎನ್ನಲು ಸಾಧ್ಯವೆ? ಸೃಷ್ಟಿಯ ಪ್ರತಿಯೊಂದು ಪಾತ್ರಕ್ಕೂ ತನ್ನದೇ ಆದ ಮಹತ್ವ ಇದ್ದೇ ಇರುತ್ತದೆ. ಇಲ್ಲಿ ಯಾರೂ ದೊಡ್ಡವರಲ್ಲ. ಯಾರೂ ಚಿಕ್ಕವರೂ ಅಲ್ಲ. ಅವರವರ ಪಾತ್ರ ಅವರವರಿಗೆ.

**ಯಾವುದು ಜಡ? ಯಾವುದು ಜೀವ?**

ಜಡವೆಂಬುದೇನು? ಸೃಷ್ಟಿಯಲಿ ಚೇತನ ಸುಪ್ತಿ
ಅಡಗಿ ನಿದ್ರಿಪುದಲ್ಲಿ ಚೈತನ್ಯದಗ್ನಿ।
ಮಿಡಿಯೆ ಪರಸತ್ತ್ವ ವಿದ್ಯುದ್ದೀಪ್ತಿಯದನಾಗ
ನಡೆವುದದು ಜೀವಿವೊಲು – ಮಂಕುತಿಮ್ಮ॥

ಸೃಷ್ಟಿಯಲಿ ಜಡವೆಂಬುದು ಏನು? ಚೇತನದ ಅಗ್ನಿ ಅಲ್ಲಿ ಅಡಗಿ ನಿದ್ರಿಸಿರುತ್ತದೆ. ಪರಸತ್ತ್ವ ವಿದ್ಯುತ್ತಿನ ಬೆಳಕು ಮಿಡಿದಾಗ ಜೀವಿಯ ಹಾಗೆ ಅದು ಚಲಿಸುತ್ತದೆ.

ಗುಂಡಪ್ಪನವರು ಜಡಕ್ಕೂ ಜೀವಕ್ಕೂ ಇರುವ ವ್ಯತ್ಯಾಸವನ್ನು ಇಲ್ಲಿ ಸೊಗಸಾಗಿ ನಿರೂಪಿಸಿದ್ದಾರೆ. ಜಡವಸ್ತುವಿನಲ್ಲಿ ಚೇತನ ಮಲಗಿರುತ್ತದೆ. ಚೈತನ್ಯದ ಸ್ಥಿತಿಯೇ ಅದು. ಅಲ್ಲಿ ಚೈತನ್ಯರೂಪದ ಅಗ್ನಿ ಅಡಗಿ ನಿದ್ರಿಸುತ್ತಿರುತ್ತದೆ. ಪರಸತ್ತ್ವವೆಂಬ ವಿದ್ಯುತ್ತಿನ ಬೆಳಕು ಜಡದಲ್ಲಿ ಹರಿದಾಗ ಅದು ಕೂಡ ಜೀವಿಯಂತೆ ನಡೆದಾಡಲು ತೊಡಗುತ್ತದೆ. ಚೈತನ್ಯವಿಲ್ಲದ ಜೀವ ಒಂದು ಕಟ್ಟಿಗೆ ತುಂಡಿನಂತೆ. ಚೈತನ್ಯ ಹರಿದಾಡುತ್ತಿದ್ದರೆ ನಾವೆಲ್ಲ ಮನುಷ್ಯರು. ಅದಿಲ್ಲದಿದ್ದರೆ ಒಂದು ಬೆರಳನ್ನೂ ಅಲುಗಾಡಿಸಲು ನಮ್ಮಿಂದ ಸಾಧ್ಯವಾಗದು. ಆದರೂ ನಾವು 'ನಾನು ನಾನು' ಎಂದು ಹಾರಾಡುತ್ತೇವೆ. ನಾನು ಎನ್ನುವ ಅಹಂಕಾರವನ್ನು ಬಿಟ್ಟು ನಿಜವಾದ ನಾನು ಯಾರು ಎಂಬುದನ್ನು ಅನ್ವೇಷಣೆ ಮಾಡಬೇಕಲ್ಲವೆ? ಆ ದಾರಿಯಲ್ಲಿ ನಡೆದರೆ ಆತ್ಮಜ್ಞಾನವುಂಟಾಗುತ್ತದೆ. ಆತ್ಮಜ್ಞಾನದಿಂದಲೇ ಪರಮಾತ್ಮನ ದರ್ಶನವೂ ಆಗುತ್ತದೆ. ಸದಾ ಶರೀರ ಪೋಷಣೆಯಲ್ಲಿಯೇ ಕಾಲ ಕಳೆದರೆ ಒಂದು ದಿನ ಅದು ಹೇಳಹೆಸರಿಲ್ಲದಂತಾಗುವುದು ದಿಟವಲ್ಲವೇ?

**ವೇದ ನಿಧಿ ಯಾವುದು?**

ಹಿಮಗಿರಿಯೊಳವಿತಿಹುದು ಚೈತನ್ಯದಗ್ನಿಕಣ
ಸ್ತಿಮಿತದಿಂ ನಿಂತಿರ್ಪುದದು ಧರೆಯ ಹಿತಕೆ।
ಶಮದ ಸುಂದರದ ಸಾತ್ತ್ವಿಕದ ಗಾಂಭೀರ್ಯವದು
ನಮಗೊಂದು ವೇದನಿಧಿ – ಮಂಕುತಿಮ್ಮ॥

ಚೈತನ್ಯದ ಅಗ್ನಿಕಣ ಹಿಮಗಿರಿಯಲ್ಲಿ ಅಡಗಿರುತ್ತದೆ. ಭೂಮಿಯ ಹಿತಕ್ಕಾಗಿ ಅದು ಸ್ಥಿರವಾಗಿ ನಿಂತಿದೆ. ಶಾಂತಿ, ಸೌಂದರ್ಯ, ಸಾತ್ವಿಕದ ಗಾಂಭೀರ್ಯ ಇವನ್ನೆಲ್ಲಾ ಅದು ಹೊಂದಿದೆ. ಅದೊಂದು ನಮಗೆ ಜ್ಞಾನದ ನಿಧಿ.

ಹಿಮಾಲಯ ಜಡವಾಗಿ ಕಂಡುಬಂದರೂ ಅದರೊಳಗೊಂದು ಚೈತನ್ಯದ ಅಗ್ನಿಕಣ ಕೆಲಸ ಮಾಡುತ್ತದೆ. ಅದು ಅಲುಗಾಡದೆ ನಿಂತಿರುವುದು ಭೂಮಿಯ ಹಿತಕ್ಕೋಸ್ಕರವೇ, ಸಹನೆಯ ಸಾಕಾರಮೂರ್ತಿಯದು. ಸೌಂದರ್ಯದ ಪ್ರತೀಕವದು. ಗಾಂಭೀರ್ಯದ ದ್ಯೋತಕವದು. ಜಗತ್ತಿನ ಹಿತಕ್ಕೋಸ್ಕರ ಸಹನೆ, ಗಾಂಭೀರ್ಯದಂತಹ ಗುಣಗಳು ಅವಶ್ಯಕವೆಂದು ಅದು ನಮಗೆ ಸಾರಿ ಹೇಳುತ್ತದೆ. ಹಾಗಿದ್ದರೆ ಸೌಂದರ್ಯಗುಣವೂ ಕೂಡಿಬರುತ್ತದೆ. ಎತ್ತರಕ್ಕೇರಿದವರು ಸಹನಶೀಲರಾಗಿರಬೇಕಾಗುತ್ತದೆ. ಗಂಭೀರವೂ ಆಗಿರಬೇಕಾಗುತ್ತದೆ. ಹೊರನೋಟಕ್ಕೆ ಹಿಮಾಲಯ, ಒಳಗೆ ಅನಂತ ರತ್ನಗಳನ್ನೂ, ಔಷಧಿ ವರ್ಗಗಳನ್ನೂ ತುಂಬಿಕೊಂಡಿದೆ. ಆಡಂಬರದ ಬದುಕು ಯಾವತ್ತೂ ಶೋಭೆಯಲ್ಲ ಎಂದು ಜಗತ್ತಿಗೆ ಸಾರಿ ಹೇಳುತ್ತದೆ. ಹಿಮಾಲಯ ಪರ್ವತ ಇಂಥ ಅಪೂರ್ವ ಜ್ಞಾನದ ಬೋಧೆಯನ್ನು ಸದಾ ನಮಗೆ ಮಾಡುತ್ತಲೇ ಇರುತ್ತದೆ. ಅದರ ಮುಂದೆ ನಾವೆಲ್ಲ ಕುಬ್ಜರೇ ಸರಿ.

**ಮಹತ್ತತ್ತ್ವ ಯಾವುದು?**

ಅಣುಸಂಖ್ಯೆಯೆಣಿಸುವವನು ವಿಶ್ವದಲಿ ವಿಜ್ಞಾನಿ
ಗುಣಿಸುವನು ಭೂತಶಕ್ತಿಗಳನದರಿಂದೇಂ?
ಗಣಿತಸಾಧ್ಯದ ಹಿಂದಗಣ್ಯದ ಮಹತ್ತತ್ತ್ವ
ವಣಗಿಹುದು ಮೂಲವದು – ಮಂಕುತಿಮ್ಮ॥

ಅಣುಗಳ ಸಂಖ್ಯೆಯನ್ನು ಎಣಿಸುವವನು ವಿಜ್ಞಾನಿ. ಭೌತಿಕ ಶಕ್ತಿಯನ್ನು ಅವನು ಲೆಕ್ಕ ಮಾಡುತ್ತಾನೆ. ಅದರಿಂದ ಪ್ರಯೋಜನವೇನು? ಲೆಕ್ಕ ಮಾಡುವ ಸಾಧ್ಯತೆಯಿರುವ ಶಕ್ತಿಯ ಹಿಂದೆ ಲೆಕ್ಕಕ್ಕೆ ಸಿಗದ ಮಹತ್ತು ಅಡಗಿರುತ್ತದೆ. ಅದೇ ಎಲ್ಲದಕ್ಕೂ ಮೂಲ.

ವಿಜ್ಞಾನಿ ಕಣ್ಣಿಗೆ ಕಾಣುವ ಎಲ್ಲ ವಸ್ತುಗಳನ್ನೂ ಅಣುಅಣುಗಳಾಗಿ ವಿಂಗಡಿಸಿ ಲೆಕ್ಕ ಮಾಡುತ್ತಾನೆ. ಹೀಗೆ ವಿಂಗಡಣೆ ಮಾಡುವುದರಿಂದ ಜಗತ್ತಿನ ಹಿಂದಿರುವ ಶಕ್ತಿಯನ್ನು ಅಳೆದು ಅರ್ಥಮಾಡಿಕೊಳ್ಳಲಾದೀತೆ? ಅಣುಗಳನ್ನು ಎಣಿಸುವುದು ಸಾಧ್ಯವಾಗುವುದಾದರೂ ಅದರ ಹಿಂದಿರುವ ಗಣಿಸಲಸಾಧ್ಯವಾದ ಮಹತ್ತತ್ತ್ವವನ್ನು ಅರಿಯಲು ಸಾಧ್ಯವಾಗದು. ಅದು ಲೆಕ್ಕಕ್ಕೆ ಸಿಗದ, ಅಳೆಯಲಸಾಧ್ಯವಾದ, ತಿಳಿಯಲಾಗದ ತತ್ತ್ವ. ಅದೇ ವಿಶ್ವದ ಮೂಲಸ್ವರೂಪ. ಆ ಮಹತ್ತತ್ತ್ವದಿಂದಲೇ ವಿಶ್ವದ ಅಸ್ತಿತ್ವ ನಿಂತಿರುತ್ತದೆ. ಅದು 'ಅಣೋ ರಣೀಯಾನ್ ಮಹತೋ ಮಹೀಯಾನ್' ಅಂದರೆ ಆ ಶಕ್ತಿ ಅಣುವಿಗಿಂತಲೂ ಚಿಕ್ಕದು. ಮಹತ್ತಿಗಿಂತಲೂ ದೊಡ್ಡದು. ಅದನ್ನು ಅರ್ಥಮಾಡಿಕೊಳ್ಳಲು ಯಾರಿಗೂ ಸಾಧ್ಯವಾಗುವುದಿಲ್ಲ. ಪಾರ್ಥಿವ ಕಣ್ಣುಗಳು ಅದನ್ನು ಕಾಣಲು ಸೋಲುತ್ತವೆ. ಅದು ಮನೋವಾಗಗೋಚರ, ಬುದ್ಧಿಗೂ ಅಗಮ್ಯ.

**ಸರಕಾರದ ಗುಟ್ಟೇನು?**

ಸರಕಾರ ಹರಿಗೋಲು ತೆರೆಸುಳಿಗಳತ್ತಿತ್ತ
ಸುರೆ ಕುಡಿದವರು ಕೆಲವು ಹುಟ್ಟು ಹಾಕುವರು।
ಬಿರುಗಾಳಿ ಬೀಸುವುದು ಜನವೆದ್ದು ಕುಣಿಯುವುದು
ಉರುಳದಿಹುದಚ್ಚರಿಯೊ – ಮಂಕುತಿಮ್ಮ॥

ಸರಕಾರ ಒಂದು ತೆಪ್ಪ.(ಸಣ್ಣ ನೌಕೆ). ತೆರೆಗಳು ಸುಳಿಗಳು ಅತ್ತಿತ್ತ ಇರುತ್ತವೆ. ಮದ್ಯ ಕುಡಿದ ಕೆಲವರು ಹುಟ್ಟು ಹಾಕುತ್ತಾರೆ. ಬಿರುಗಾಳಿ ಬೀಸುತ್ತದೆ. ಜನರು ಎದ್ದು ಕುಣಿಯುತ್ತಾರೆ. ಆದರೂ ಅದು ಉರುಳುವುದಿಲ್ಲ. ಆಶ್ಚರ್ಯ.

ಇಂದು ನಡೆಯುತ್ತಿರುವ ಸರಕಾರಗಳ ಹಣೆಬರಹವನ್ನು ಡಿ.ವಿ.ಜಿ.ಯವರು ಆರೇಳು ದಶಕಗಳ ಹಿಂದೆ ನಿರ್ಣಯಿಸಿದ್ದರು. ಇಂದಿಗೂ ಆ ವಿಚಾರಗಳು ಸಂಪೂರ್ಣವಾಗಿ ಅನ್ವಯಿಸುತ್ತಿವೆ. ಸರಕಾರವೆಂಬುದು ಒಂದು ದೋಣಿಯಂತೆ. ಈ ದೋಣಿ ನೀರಿನಲ್ಲಿ ಸಾಗುತ್ತಿರುವಾಗ ಒಂದು ಕಡೆ ತೆರೆಯ ಹೊಡೆತ. ಇನ್ನೊಂದೆಡೆಯಲ್ಲಿ ಸುಳಿಯ ಸೆಳೆತ. ಹುಟ್ಟು ಹಾಕುತ್ತಿರುವವರು ಮದ್ಯವನ್ನು ಕುಡಿದಿದ್ದಾರೆ. ಇದೇ ಸಂದರ್ಭದಲ್ಲಿ ಬಿರುಗಾಳಿ ಬಿರುಸಾಗಿ ಬೀಸುತ್ತಿದೆ. ಅದರಲ್ಲಿ ಕುಳಿತ ಜನರು ಹುಚ್ಚೆದ್ದು ಕುಣಿಯುತ್ತಿದ್ದಾರೆ. ಇಷ್ಟೆಲ್ಲ ಅಧ್ವಾನಗಳ ಸಂತೆಯಾಗಿದ್ದರೂ ಸರಕಾರವೆಂಬ ದೋಣಿ ಉರುಳುತ್ತಿಲ್ಲ. ಏನಾಶ್ಚರ್ಯ! ಇಂದು ನಾವು ಕಾಣುತ್ತಿರುವುದು ಇದನ್ನೇ ಅಲ್ಲವೇ? ನಮ್ಮನ್ನು ಆಳುತ್ತಿರುವ ನಾಯಕರುಗಳಿಗೆ ಒಂದು ಆದರ್ಶವಿಲ್ಲ. ದೂರದರ್ಶಿತ್ವವಂತೂ ದೂರವೇ ಉಳಿದುಹೋಗಿದೆ. ಸಮಾಜದ ಋಣವನ್ನು ಸೇವೆಯ ಮೂಲಕ ತೀರಿಸಬೇಕು ಎಂಬ ಮನಸ್ಸಿಲ್ಲ. ಕೇವಲ ಹಣ ಆಸ್ತಿಗಳನ್ನು ಸ್ವಾರ್ಥಕ್ಕಾಗಿ ಸಂಗ್ರಹಿಸಿಕೊಳ್ಳುವ ಇಚ್ಛೆಬಿಟ್ಟರೆ ಉದಾತ್ತಭಾವ ಮಾಯವಾಗಿಬಿಟ್ಟಿದೆ. ಸರಕಾರವನ್ನು ನಡೆಸಿಕೊಂಡು ಹೋಗುವುದೇ ಹರಸಾಹಸವಾಗಿಬಿಟ್ಟಿದೆ. ಜನಪರ ಕಾಳಜಿ ನೈಜವಾಗುವುದೆಂದು? ಇದನ್ನು ಮುಂದಾದರೂ ನಿರೀಕ್ಷಿಸಲಾದೀತೆ?

ಆನೋ ಭದ್ರಾಃ ಕೃತವೋಯಂತು ವಿಶ್ವತಃ ಅಂತರ್ಜಾಲದಿಂದ ಪಡೆದದ್ದು

# ಹೃದಯವಂತಿಕೆ ಜತೆ ಯುಕ್ತಿಯಿರಲಿ

ಮುದಿಕುರುಡಿ ಹೊಂಗೆಯನು 'ಬಾದಾಮಿ,ಕೋ'ಯೆನುತ ।
ಪದುಳದಿಂ ಮೊಮ್ಮಂಗೆ ಕೊಡಲು ಸಿಹಿಯಹುದೆ? ॥
ಹೃದಯವೊಳಿತಾದೊಡೇಂ? ತಿಳಿವಿಹುದೆ? ಜಾಣಿಹುದೆ?।
ಸುಧೆ ಬಂತೆ ಸುಲಭದಲಿ? – ಮಂಕುತಿಮ್ಮ ॥863॥

ದೃಷ್ಟಿಹೀನ ಮುದುಕಿಯೊಬ್ಬಳು ಬಾದಾಮಿಗೂ ಹೊಂಗೆಗೂ ವ್ಯತ್ಯಾಸ ಕಾಣಲಾರದೆ ಮೊಮ್ಮಗನನ್ನು ಕರೆದು, 'ಬಾದಮಿ ತೆಗೆದುಕೋ' ಎಂದು ವಾತ್ಸಲ್ಯದಿಂದ ಕೊಟ್ಟರೆ, ಆ ಹೊಂಗೆಯಕಾಯಿ ಕಹಿಗುಣ ಬಿಟ್ಟು ಬಾದಾಮಿಯಂತೆ ಸಿಹಿಯಾಗಲು ಸಾಧ್ಯವೆ? ಹೃದಯದಲ್ಲಿ ಉತ್ತಮ ಭಾವನೆ ಇದ್ದರೆ ಸಾಕೇ? ಒಳಿತು–ಕೆಡಕುಗಳನ್ನು ಗುರುತಿಸುವ ಜಾಣ್ಮೆಯೂ ಬೇಕಲ್ಲ? ಅಮೃತವು ಸುಲಭದಲ್ಲಿ ದೊರೆತದ್ದಲ್ಲ. ದೇವತೆಗಳ ಜಾಣ್ಮೆ ಮತ್ತು ಅರಿವಿನಿಂದ ಕೂಡಿದ ಕೆಲಸದಿಂದಲೇ ಸುಧೆಯು ಪ್ರಾಪ್ತಿಯಾಯಿತು.

ಅದೊಂದು ಪ್ರಶಾಂತ ಊರು, ತುಂಬಿ ಹರಿವ ನದಿಯ ಹಿನ್ನೆಲೆಯಲ್ಲಿ ಮನಸೆಳೆವ ಪುರಾತನ ದೇಗುಲ. ಹಲವಾರೂ ಭಕ್ತರೂ ಬಂದುಹೋಗುತ್ತಿದ್ದರು. ಆ ಪರಿಸರದಲ್ಲೇ ಹುಟ್ಟಿದ ಕೋತಿಯೊಂದಕ್ಕೆ ದೇಗುಲ ಮತ್ತು ಅಲ್ಲಿಗೆ ಬರುವ ಭಕ್ತರು ಆಕರ್ಷಣೆಯ ಕೇಂದ್ರವಾಗಿದ್ದರು. ಅದು ಯಾರಿಗೂ ತೊಂದರೆ ಕೊಡುತ್ತಿರಲಿಲ್ಲ, ಬದಲಾಗಿ ಭಕ್ತರ ಮಾತುಗಳನ್ನು ಕೇಳಿಸಿಕೊಳ್ಳುತ್ತಿತ್ತು. ಒಂದು ದಿನ ಅದಕ್ಕೆ ತಾನೂ ಒಳಿತು ಮಾಡಬೇಕು. ಉತ್ತಮ ಕೆಲಸ ಮಾಡಿ ದೇವರ ಕೃಪೆಗೆ ಪಾತ್ರರಾಗಬೇಕೆನಿಸಿತು. ಮರವೊಂದರ ಮೇಲೆ ಕುಳಿತು ನದಿಯ ನೀರನ್ನೇ ದಿಟ್ಟಿಸಿತು. ಅಲ್ಲಿ ಹರಿದಾಡುವ ಮೀನುಗಳನ್ನು ನೋಡಿತು. ಅವು ನೀರೊಳಗೆ ಚಡಪಡಿಸಿದಂತೆ, ಹೊರಳಿ ಹೊರಳಿ ಬಿದ್ದಂತೆ ಕಂಡಿತು. ಅಯ್ಯೋ ಪಾಪ ಎಂದು ಮರುಗಿ ಒಂದೇ ನೆಗೆತಕ್ಕೆ ನದಿಯ ಸನಿಹಕ್ಕೆ ಹಾರಿ, ಕಷ್ಟಪಟ್ಟು ತನ್ನಿಂದಾದಷ್ಟು ಮೀನುಗಳನ್ನು ಹಿಡಿದು ಮರದ ಮೇಲಿದ್ದ ಪೊಟರೆಯೊಂದರಲ್ಲಿ ಇಡತೊಡಗಿತು. ತುಂಬ ಹೊತ್ತಿನ ನಂತರ ಆ ದಾರಿಯಲ್ಲಿ ಬಂದ ಸಾಧುವೊಬ್ಬ ಕೋತಿಯ ಕೆಲಸವನ್ನು ಗಮನಿಸಿದ. ಈ ಕೋತಿಯೇನು ಮೀನು ತಿನ್ನ ಹೊರಟಿತೇ ಎಂದು ಹತ್ತಿರ ಬಂದು ಕೋತಿಯನ್ನು ವಿಚಾರಿಸಿದ. ಆಗ ಕೋತಿ ವಿಷಯವನ್ನು ತಿಳಿಸಿತು. 'ಮರಳು ಕೋತಿಯೇ! ಒಳ್ಳೆಯ ಕೆಲಸ ಮಾಡಬೇಕು ಎನ್ನುವುದೇನೋ ನಿಜ. ಆದರೆ ಅದು ತಿಳಿವಳಿಕೆಯಿಂದ ಕೂಡಿರಬೇಡವೆ? ನೀರಿನಲ್ಲೇ ಬದುಕಬೇಕಾದ ಮೀನುಗಳನ್ನು ಹೀಗೆ ಮರದಲ್ಲಿಟ್ಟರೆ ಅವು ಸತ್ತುಹೋಗುತ್ತವೆ. ಅವನ್ನೆಲ್ಲ ಮತ್ತೆ ನದಿಗೆ ಬಿಟ್ಟು ಪುಣ್ಯ ಕಟ್ಟಿಕೋ' ಎಂದ.

ಕೆಲವೊಮ್ಮೆ ನಾವೂ ಹೀಗೆ ಮಾಡುತ್ತೇವೆ. ಒಳಿತು ಯಾವುದೆನ್ನುವ ಅರಿತು ಇಲ್ಲದೇ ಮೋಹ, ವಾತ್ಸಲ್ಯ, ಕರುಣೆಗೆ ಒಳಗಾಗಿ ಮೂಢ ಕೆಲಸ ಮಾಡುವುದಿದೆ. ಮಕ್ಕಳ ವಿಚಾರದಲ್ಲಂತೂ ಈ ಮೋಹದ ಕುರುಡು ಅತಿಯಾಗಿ ಕಾಡುತ್ತದೆ. ಮಕ್ಕಳನ್ನು ಅತಿವ್ಯಾಮೋಹದಿಂದ ಅನಿಯಂತ್ರಿತರಾಗಿ ಬೆಳೆವಂತೆ ಮಾಡಿ, ಕೊನೆಗೆ ಅವರ ಬದುಕಿನ ಸೋಲಿಗೆ ನಾವೇ ಕಾರಣರಾಗುತ್ತೇವೆ. ದೃಷ್ಟಿಹೀನ ಅಜ್ಜಿ ಮೊಮ್ಮಗನ ಮೇಲಿನ ಪ್ರೀತಿಯಿಂದ ಹೊಂಗೆಯ ಕಾಯಿಯನ್ನು 'ಇದು, ಬದಾಮಿ ತೆಗೆದುಕೋ' ಎಂದು ನೀಡುವ ದೃಷ್ಟಾಂತದ ಮೂಲಕ ಡಿ.ವಿ.ಜಿ ಇದನ್ನು ಸುಂದರವಾಗಿ ವಿವರಿಸುತ್ತಾರೆ. ಆಕೆ ಒಳ್ಳೆಯ ಉದ್ದೇಶದಿಂದಲೇ ನೀಡಿದ್ದಾಳೆ. ಆದರೆ ಆ ಕಹಿ ಹೊಂಗೆಕಾಯಿ ತನ್ನ ಸ್ವರೂಪ ಬದಲಿಸಿಕೊಂಡು ಬಾದಾಮಿಯಾಗಲು ಸಾದ್ಯವೇ? ಸಕಾರಾತ್ಮಕ ಭಾವವಿದ್ದರಷ್ಟೇ ಸಾಲದು, ಪರಾಮಶಿಸುವ ವಿವೇಕವೂ ಬೇಕು. ಮುಂದಾಲೋಚನೆ ಮತ್ತು ಜಾಣತನ ಬದುಕಿನ ಸಾಫಲ್ಯಕ್ಕೆ ಅನಿವಾರ್ಯ. ಹೀಗೆಯೇ ದೇವತೆಗಳು–ರಾಕ್ಷಸರು ಸಮುದ್ರಮಥನ ಮಾಡಿ ಅಮೃತವನ್ನು ಪಡೆದದ್ದು. ಹಾವಿನ ವಿಷದ ಕಾವಿನಿಂದ ಉಳಿಯುವುದಕ್ಕಾಗಿ ದೇವತೆಗಳು ಹಾವಿನ ಬಾಲ ಹಿಡಿದು ನಿಂತದ್ದು, ಮೋಹಿನಿಯ ರೂಪ ಧರಿಸಿ ಶ್ರೀಹರಿಯು ಅಮೃತವನ್ನು ಹಂಚಿದ್ದು. ಇದರ ಹಿಂದೆ ದೇವಾನುದೇವತೆಗಳ ಜಾಣತನವಿತ್ತು. ಆದ್ದರಿಂದ ಅಪಾತ್ರರನ್ನು ಗುರುತಿಸುವ ಮತಿ, ಹೃದಯವಂತಿಕೆ, ಯುಕ್ತಿ, ಬದುಕಿಗೊಂದು ನೀತಿ ಇರಲೇಬೇಕು

ವಚನಭಾಗವತ ಲೇ: ತ. ಸು. ಶಾಮರಾಯ

# ಮಾಂಧಾತ ಮಹಾರಾಜ

ಪುರಂಜಯನ ತರುವಾಯ ಹಲವು ತಲೆಗಳು ಕಳೆದಮೇಲೆ 'ಯುವನಾಶ್ವ' ನೆಂಬ ಮಹಾಪುರುಷನೊಬ್ಬನು ಆ ವಂಶದಲ್ಲಿ ಹುಟ್ಟಿದ. ಆತನು ನೂರು ಜನ ಹೆಂಡಿರನ್ನು ಮದುವೆಯಾಗಿ ಹಲವುಕಾಲ ಸಂಸಾರಜೀವನವನ್ನು ನಡೆಸಿದರೂ ಮಕ್ಕಳಾಗಲಿಲ್ಲ. ಇದರಿಂದ ಆತನು ತುಂಬ ದುಃಖಿತನಾಗಿ, ತನ್ನ ಹೆಂಡಿರೊಡನೆ ವೈರಾಗ್ಯದಿಂದ ಅಡವಿಗೆ ಹೋದ. ಆ ಅಡವಿಯಲ್ಲಿದ್ದ ಕೆಲವು ಮಹರ್ಷಿಗಳು ಈತನ ವೈರಾಗ್ಯಕ್ಕೆ ಕಾರಣವೇನೆಂಬುದನ್ನು ತಿಳಿದು, ಕರುಣೆಯಿಂದ ಅವನ ಕೈಲಿ 'ಪುತ್ರಕಾಮೇಷ್ಟಿ' ಎಂಬ ಯಾಗವನ್ನು ಮಾಡಿಸಿದರು. ಈ ಯಾಗ ಮಾಡುತ್ತಿರುವಾಗ ಒಂದು ದಿನ ರಾತ್ರಿ ಯುವನಾಶ್ವನಿಗೆ ತುಂಬ ಬಾಯಾರಿಕೆಯಾಯಿತು. ಆತನು ನೀರನ್ನು ಹುಡುಕುತ್ತಾ ಯಜ್ಞಶಾಲೆಗೆ ಹೋದ. ಅಲ್ಲಿ ಇದ್ದವರೆಲ್ಲರೂ ಗಾಢನಿದ್ರೆಯಲ್ಲಿ ಮುಳುಗಿದ್ದರು. ಅವರ ಸಮೀಪದಲ್ಲಿ ಒಂದು ತಂಬಿಗೆ ತುಂಬ ನೀರಿತ್ತು. ರಾಜನು ಅದನ್ನು ತೆಗೆದುಕೊಂಡು ಹೊಟ್ಟೆತುಂಬ ನೀರು ಕುಡಿದ. ಮರುದಿನ ಬೆಳಗಾದ ಮೇಲೆ ಬರಿದಾಗಿದ್ದ ಆ ತಂಬಿಗೆಯನ್ನು ಕಂಡು ಖುಷಿಗಳು ಗಾಬರಿಯಾದರು. ಆ ನೀರು ಮಂತ್ರದ ನೀರು; ಮಕ್ಕಳು ಹುಟ್ಟುವುದಕ್ಕಾಗಿ ರಾಣಿಯರಿಗೆ ಕೊಡಬೇಕೆಂದು ಇಟ್ಟಿದುದು. ಅವರು ರಾಜನ ಬಳಿಗೆ ಬಂದು 'ಮಹಾರಾಜ, ಆ ಮಂತ್ರದ ನೀರನ್ನು ಯಾರು ಕುಡಿದರೆಂಬುದನ್ನು ಮೊದಲು ಕಂಡುಹಿಡಿ' ಎಂದರು. ರಾಜನು ಹೊಸದಾಗಿ ಕಂಡುಹಿಡಿಯುವುದೇನು? ತಾನೇ ಕುಡಿದನೆಂದು ತಿಳಿಸಿದ. ಖುಷಿಗಳು ತಮ್ಮ ಮನಸ್ಸಿನಲ್ಲಿಯೇ 'ಮನುಷ್ಯಪ್ರಯತ್ನಕ್ಕೆ ಏನು ಬೆಲೆ? ದೈವಬಲವೇ ಬಲ' ಎಂದುಕೊಂಡು ತತ್ಕಾಲಕ್ಕೆ ಸುಮ್ಮನಾದರು.

ಮಂತ್ರದ ನೀರು ತನ್ನ ಕೆಲಸವನ್ನು ತಾನು ಮಾಡಿತು. ರಾಜನು ಗರ್ಭಧರಿಸಿದ. ಒಂಬತ್ತು ತಿಂಗಳು ತುಂಬುತ್ತಲೆ ಆತನ ಹೊಟ್ಟೆಯನ್ನು ಸೀಳಿಕೊಂಡು ಒಂದು ಮಗು ಹೊರಕ್ಕೆ ಬಂತು. ಹುಟ್ಟುತ್ತಲೆ ಅದಕ್ಕೆ ಹೊಟ್ಟೆಯ ಹಸಿವು, ಕಿರುಚಿಕೊಳ್ಳುವುದಕ್ಕೆ ಪ್ರಾರಂಭಿಸಿತು. ಅದಕ್ಕೆ ಮೊಲೆಹಾಲು ಎಲ್ಲಿಂದ ತರುವುದು? ಖುಷಿಗಳೆಲ್ಲ ಸೇರಿ ಮುಂದೇನು ಮಾಡಬೇಕೆಂದು ಯೋಚಿಸುತ್ತಿರಲು, ಇಂದ್ರನು ಮಗುವಿನ ಬಳಿ ಪ್ರತ್ಯಕ್ಷನಾಗಿ 'ಮಗು ಅಳಬೇಡ, ಮಾಂಧಾತಾ(ನನ್ನನ್ನು ಕುಡಿ)' ಎಂದು ಹೇಳಿ ತನ್ನ ತೋರುಬೆರಳನ್ನು ಅದರ ಬಾಯಲ್ಲಿಟ್ಟ; ಆ ಬೆರಳಿನಿಂದ ಅಮೃತ ತೊಟ್ಟಿಕ್ಕುತ್ತಿತ್ತು. ಮಗುವು ಅದನ್ನು ಕುಡಿದು 'ಮಾಂಧಾತಾ' ಎಂಬ ಹೆಸರನ್ನೇ ಪಡೆಯಿತು. ಆ ಮಗುವನ್ನು ಹೊತ್ತು ಹೆತ್ತ ಯುವನಾಶ್ವನು ಹೊಟ್ಟೆ ಸೀಳಿಹೋಗಿದ್ದರೂ ಖುಷಿಗಳ ಆಶೀರ್ವಾದದಿಂದಲೂ ದೇವರ ಕೃಪೆಯಿಂದಲೂ ಸಾಯದೆ ಉಳಿದುಕೊಂಡು, ಆತ ಅಲ್ಲಿಯೇ ದೊಡ್ಡ ತಪಸ್ಸನ್ನು ಕೈಗೊಂಡು ಮುಕ್ತಿಯನ್ನು ಪಡೆದ.

ಮಾಂಧಾತನು ಬೆಳೆದು ದೊಡ್ಡವನಾಗಿ ಎಣೆಯಿಲ್ಲದ ಪರಾಕ್ರಮಿ ಎನಿಸಿದನು. ರಾವಣನಂತಹ ಮಹಾ ಪರಾಕ್ರಮಿ ಕೂಡ ಅವನಿಗೆ ಸೋತು ಶರಣಾದನು. ಇದನ್ನು ಕಂಡು ದೇವೇಂದ್ರನು ಆತನಿಗೆ 'ತ್ರಸದ್ದಸ್ಯು' ಎಂದು ಬಿರುದನ್ನು ಕೊಟ್ಟನು. ಆತನು ಜಗತ್ತೆಲ್ಲವನ್ನೂ ಜಯಿಸಿ, ಅಖಂಡ ಭೂಮಂಡಲಕ್ಕೆ ಚಕ್ರವರ್ತಿಯಾದನು. ಆತನು ಅನೇಕ ಯಾಗಗಳನ್ನು ಮಾಡಿ ಮಾನವರನ್ನೂ ಬಾನವರನ್ನೂ ತಣಿಸಿದನು. ಆತನು ಬಹುದೊಡ್ಡ ಭಕ್ತನಾಗಿ ಭಗವಂತನ ಕೃಪೆಗೂ ಪಾತ್ರನಾಗಿದ್ದನು. ಈ ಮಾಂಧಾತ ಚಕ್ರವರ್ತಿಯು ಶತಬಿಂದುವಿನ ಮಗಳಾದ ಬಿಂದುಮತಿಯೆಂಬ ಸುಂದರಿಯನ್ನು ಮದುವೆಯಾಗಿ ಮೂವರು ಗಂಡುಮಕ್ಕಳನ್ನೂ ಐವತ್ತು ಜನ ಹೆಣ್ಣುಮಕ್ಕಳನ್ನೂ ಪಡೆದನು. ಈ ಹೆಣ್ಣುಗಳೆಲ್ಲರೂ ಸೌಭರಿಯೆಂಬ ಮಹರ್ಷಿಯನ್ನು ಮದುವೆಯಾದರು. ಅವರು ಆ ಖುಷಿಯನ್ನು ವರಿಸಿದುದೇ ಒಂದು ಸುಂದರ ಕಥೆ. ಮಹಾತಪಸ್ವಿಯಾದ ಸೌಭರಿಮಹರ್ಷಿ ಒಮ್ಮೆ ಯಮುನಾ ನದಿಯಲ್ಲಿ ಮುಳುಗಿ ತಪಸ್ಸು ಮಾಡುತ್ತಿದ್ದ. ಆಗ ಎರಡು ಮೀನುಗಳು ಕಾಮಕೇಳಿಯಲ್ಲಿದ್ದುದು ಅಕಸ್ಮಾತ್ತಾಗಿ ಆತನ ಕಣ್ಣಿಗೆ ಬಿತ್ತು. ಅದರಿಂದ ಆತನ ಮನಸ್ಸು ಚಂಚಲವಾಯಿತು. ತಾನು ಹೆಣ್ಣಿನ ಸುಖವನ್ನು ಪಡೆಯಬೇಕೆಂಬ ಆಶೆ ಮೊಳೆತು ತಡೆಯಲಾರದಷ್ಟು ಉಲ್ಬಣಿಸಿತು. ಆತನು ನೀರಿನಿಂದೆದ್ದು ಬಂದು, ನೇರವಾಗಿ ಮಾಂಧಾತೃವಿನ ಹತ್ತಿರಹೋಗಿ 'ಅಯ್ಯಾ ಚಕ್ರವರ್ತಿ, ನಿನಗೆ ಐವತ್ತು ಹೆಣ್ಣುಮಕ್ಕಳಿದ್ದಾರಲ್ಲ, ಒಬ್ಬಳನ್ನು ನನಗೆ ಮದುವೆಮಾಡಿಕೊಡು' ಎಂದು ಕೇಳಿದ. ಕುರೂಪಿಯಾಗಿದ್ದ ಈ ಮುಪ್ಪಿನ ಮುದುಕ ಹೆಣ್ಣಿಗೆ ಕಣ್ಣು ಹಾಕಿದ್ದನ್ನು ಕಂಡು ಮಾಂಧಾತನಿಗೆ ಆಶ್ಚರ್ಯವಾಯಿತು, ಅಸಹ್ಯವೂ ಆಯಿತು. ಆದರೆ ಮಾಡುವುದೇನು? ಸೌಭರಿಯಂತಹ ಮಹಾಮಹಿಮನಾದ ಮಹರ್ಷಿ ಬಾಗಿಲಿಗೆ ಬಂದು ಬೇಡುವಾಗ ಇಲ್ಲವೆಂದು ಹೇಳಲಾಗುತ್ತದೆಯೆ? ಆತ ಉಪಾಯವಾಗಿ 'ಸ್ವಾಮಿ, ನನ್ನ ಮಕ್ಕಳನ್ನೆಲ್ಲ ನಿಮ್ಮ ಮುಂದೆ ನಿಲ್ಲಿಸುತ್ತೇನೆ. ಅವಳಲ್ಲಿ ಯಾವಳು ವರಿಸುತ್ತಾಳೊ ಅವಳನ್ನು ವಿವಾಹ ಮಾಡಿಕೊಡುತ್ತೇನೆ' ಎಂದ. ಖುಷಿ ಅದಕ್ಕೆ ಒಪ್ಪಿದ.

ತನ್ನನ್ನು ವರಿಸುವವಳನ್ನು ತಾನು ಸ್ವೀಕರಿಸುವುದಾಗಿ ಸೌಭರಿ ಮಹರ್ಷಿ ಹೇಳಿದನಾದರೂ, ತನ್ನನ್ನು ಯಾರು ವರಿಸಿಯಾರು ಎಂಬ ಆತಂಕ ಆತನ ಮನಸ್ಸಿನಲ್ಲಿ ಹುಟ್ಟಿತು. ಕ್ಷಣಕಾಲ ಆತ ಹಾಗೆಯೇ ಆಲೋಚಿಸಿದ. ತನ್ನ ತಪಶ್ಶಕ್ತಿಯೇನು ಸಾಮಾನ್ಯವಾದುದೆ? ತನ್ನ ಯೋಗಶಕ್ತಿಯ ಬಲದಿಂದ ತಾನು ತರುಣನಾಗಲಾರನೆ? ಅಪ್ಸರಸಿಯರು ಕೂಡ ತನ್ನನ್ನು ಕಂಡು ಮೋಹಿಸುವಂತಹ ರೂಪವನ್ನು ಧರಿಸಿದರಾಯಿತು. ಹೀಗೆಂದು ನೆನೆದ ಸೌಭರಿಖುಷಿಯು ರಾಜನು ಕಳುಹಿಸಿದ ದೂತರೊಡನೆ ರಾಜಕುಮಾರಿಯಿದ್ದ ಅಂತಃಪುರಕ್ಕೆ ಹೋದನು. ಹೋಗು ಹೋಗುತ್ತಿರುವಂತೆಯೆ ಆತನು ಮನ್ಮಥನಂತಹ ಸುಂದರ ಯುವಕನಾದನು. ರಾಜಕುಮಾರಿಯರು ಆತನನ್ನು ಕಾಣುತ್ತಲೆ ಮೋಹಪರವಶರಾದರು. ಚಿಕ್ಕಂದಿನಿಂದ ಅವರು ಪರಸ್ಪರ ಅಕ್ಕರೆಯುಳ್ಳವರಾಗಿದ್ದರೂ ಯುವಕನನ್ನು ವರಿಸುವ ವಿಚಾರದಲ್ಲಿ

ಮಾತ್ರ ಅವರ ಸ್ನೇಹ ಹಾರಿಹೋಯಿತು. ಅವರಲ್ಲಿ ಪ್ರತಿಯೊಬ್ಬರೂ 'ನಾನೆ ಈತನನ್ನು ವರಿಸುತ್ತೇನೆ' ಎಂದು ಹೇಳಿ, ಪರಸ್ಪರ ಕಿತ್ತಾಡುವುದಕ್ಕೆ ಪ್ರಾರಂಭಿಸಿದರು. ಇದನ್ನು ಕಂಡ ಸೌಭರಿ ಮಂದಹಾಸವನ್ನು ಬೀರುತ್ತಾ, ತನ್ನನ್ನು ಮೆಚ್ಚಿದ ಆ ಐವತ್ತು ಮಂದಿಯನ್ನೂ ಮದುವೆಯಾಗುವುದಾಗಿ ಹೇಳಿದನು. ರಾಜಕುಮಾರಿಯರು ಇದಕ್ಕೆ ಒಪ್ಪಿದರು. ಮಾಂಧಾತನು ತನ್ನ ಐವತ್ತು ಮಕ್ಕಳನ್ನೂ ಆತನಿಗೆ ಧಾರೆಯೆರೆದು ಕೊಟ್ಟನು.

ಸೌಭರಿಯ ತಪೋಮಹಿಮೆಯಿಂದ ಐವತ್ತು ಅರಮನೆಗಳು ಸಿದ್ಧವಾದವು. ಒಂದೊಂದರ ಸುತ್ತಲೂ ಸುಂದರವಾದ ಉದ್ಯಾನವನ, ಅದರ ಮಧ್ಯದಲ್ಲಿ ಕಮಲದ ಸರೋವರ, ಅದರಲ್ಲಿ ನಾನಾ ಬಗೆಯ ಹಕ್ಕಿಗಳು, ಅವುಗಳ ಇಂಪಾದ ಗಾನ, ದುಂಬಿಗಳ ಝೇಂಕಾರ. ನಂದನವನವನ್ನು ಹೀಯಾಳಿಸುವ ಈ ಉದ್ಯಾನವನದ ಮಧ್ಯೆ ಇದ್ದ ಅರಮನೆ ಎಲ್ಲ ಬಗೆಯ ಭೋಗಸಾಮಗ್ರಿಗಳಿಂದ ಸಜ್ಜಾಗಿತ್ತು. ಅಲ್ಲಿನ ಚಿತ್ರವಿಚಿತ್ರವಾದ ವಸ್ತುಗಳು, ಹೂಮಾಲೆಗಳು, ಆಭರಣಗಳು, ಸುವಾಸನ ದ್ರವ್ಯಗಳು, ಸುಪ್ಪತ್ತಿಗೆಗಳಿಂದ ಕೂಡಿದ ಮಂಚಗಳು, ಆಸನಗಳು, ಬಯಸಿ ಬಯಸಿ ಬಾಯ್ಬಿಡುವಂತಹ ಆಹಾರ ಪಾನೀಯಗಳು, ಹೇಳಿದ ಕೆಲಸವನ್ನು ಒಡನೆಯೆ ನಡೆಸುವುದಕ್ಕಾಗಿ ಕೈ ಕಟ್ಟಿ ಸಿದ್ಧರಾಗಿ ನಿಂತಿರುವ ದಾಸದಾಸಿಯರು! ಸೌಭರಿಯು ತನ್ನ ಮಡದಿಯರಲ್ಲಿ ಒಬ್ಬೊಬ್ಬರನ್ನು ಒಂದೊಂದು ಅರಮನೆಯ ಒಡತಿಯನ್ನಾಗಿ ಮಾಡಿದನು. ತಾನು ಐವತ್ತು ಶರೀರಗಳನ್ನು ಧರಿಸಿ, ತನ್ನ ಮಡದಿಯರೊಡನೆ ಪ್ರತ್ಯೇಕವಾಗಿ ವಿಹರಿಸುತ್ತಾ ಅವರನ್ನು ಸಂತೋಷದ ಶಿಖರಕ್ಕೆ ಏರಿಸಿದನು! ಆತನ ಸಿರಿಯನ್ನೂ ಭೋಗಭಾಗ್ಯಗಳನ್ನೂ ಕಂಡು ಮಾಂಧಾತ ಆಶ್ಚರ್ಯಪಡುತ್ತಿದ್ದನು. ಇಡೀ ಭೂಮಂಡಲಕ್ಕೆ ಚಕ್ರವರ್ತಿಯಾಗಿದ್ದರೂ ಸೌಭರಿಯ ಭಾಗ್ಯಕ್ಕೆ ಅದು ಸರಿಬಾರದೆಂದು ವಿನಮ್ರನಾಗುತ್ತಿದ್ದನು. ಸೌಭರಿಯ ಇಂದ್ರಿಯಗಳು ಭೋಗಸುಖವನ್ನು ಕುಡಿಕುಡಿದು ತೇಗಿದುವು. ಆದರೆ ಇಂದ್ರಿಯಸುಖಕ್ಕೆ ತೃಪ್ತಿಯೆಂಬುದುಂಟೆ? ತುಪ್ಪವನ್ನು ಸುರಿದಷ್ಟೂ ಬೆಂಕಿ ಪ್ರಜ್ವಲಿಸುವಂತೆ, ಭೋಗಿಸಿದಷ್ಟೂ ಭೋಗದ ಆಶೆ ಹೆಚ್ಚುತ್ತದೆ. ಸೌಭರಿ ಬಹುಕಾಲ ಈ ಸುಖವನ್ನು ಅನುಭವಿಸಿದರೂ ತೃಪ್ತನಾಗಲಿಲ್ಲ. ಆತನ ದಾಹ ದಿನದಿನಕ್ಕೆ ಹೆಚ್ಚುತ್ತಿತ್ತು. ವಿಚಾರಪರನಾದ ಆತ ಒಮ್ಮೆ ಇದನ್ನು ಗಮನಿಸಿ, ತನ್ನ ಅವಿವೇಕಕ್ಕಾಗಿ ತಾನೆ ಪಶ್ಚಾತ್ತಾಪಪಟ್ಟ. 'ಹೇಗಿದ್ದವನು ನಾನು ಹೇಗಾಗಿಬಿಟ್ಟೆ! ಕೇವಲ ಎರಡು ಮೀನುಗಳ ರತಿಸುಖವನ್ನು ಕಂಡು ನನ್ನ ಬಾಳೇ ಹಾಳಾಗಿಹೋಯಿತಲ್ಲ! ಸಹವಾಸದೋಷ ಎಷ್ಟು ಭಯಂಕರವಾದುದು? ಮೋಕ್ಷವನ್ನು ಗಳಿಸಬೇಕೆನ್ನುವವನು ಸಂಸಾರಿಗಳನ್ನು ಮರೆತಾದರೂ ಕಣ್ಣೆತ್ತಿ ನೋಡಬಾರದು' ಎಂದುಕೊಂಡ. ಒಡನೆಯೆ ಆತನು ತನ್ನ ಐವತ್ತು ಜನ ಹೆಂಡಿರನ್ನೂ, ಆ ವೇಳೆಗೆ ಹುಟ್ಟಿದ್ದ ಅರವತ್ತು ಸಾವಿರ ಮಕ್ಕಳನ್ನೂ ಬಿಟ್ಟು ತಪೋವನಕ್ಕೆ ಹೋದನು. ಪತಿವ್ರತೆಯರಾದ ಪತ್ನಿಯರೂ ಆತನನ್ನು ಹಿಂಬಾಲಿಸಿದರು. ಅವರೆಲ್ಲರೂ ಭಗವದಾರಾಧನೆಯಿಂದ ಮುಕ್ತಿಯನ್ನು ಪಡೆದರು.

ಮಾಂಧಾತನು ಬಹುಕಾಲ ಧರ್ಮದಿಂದ ರಾಜ್ಯಭಾರ ಮಾಡುತ್ತಿದ್ದು ಕೊನೆಗೆ ಪುರುಕುತ್ಸ, ಅಂಬರೀಶ, ಮುಚುಕುಂದ– ಎಂಬ ತನ್ನ ಮೂವರು ಮಕ್ಕಳಿಗೆ ರಾಜ್ಯವನ್ನು ವಹಿಸಿ, ತಪಸ್ಸಿನಿಂದ ಸದ್ಗತಿಯನ್ನು ಪಡೆದನು.

ವರದಿ

# ಶ್ರೀ ದೇವರ ಜಾತ್ರಾಮಹೋತ್ಸವ

ದೈವಾನುಗ್ರಹದ ಮಹಾಶಕ್ತಿ ಕೇಂದ್ರವಾಗಿರುವ ಶ್ರೀಕ್ಷೇತ್ರ ಬಂಗಾರಮಕ್ಕಿಯಲ್ಲಿ ಪ್ರಸಕ್ತ ವರ್ಷದ ಜಾತ್ರಾ ಮಹೋತ್ಸವ ದಿನಾಂಕ 13/04/2019ರ ಶ್ರೀ ರಾಮನವಮಿಯಿಂದ 19/04/2019ರ ಹನುಮಜಯಂತಿಯವರೆಗೆ ವಿಶೇಷ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ, ಸಹಸ್ರಾರು ಭಕ್ತರ ಶ್ರದ್ಧಾ ಭಕ್ತಿಯೊಂದಿಗೆ ಜರುಗಿತು.

ಶ್ರೀ ರಾಮನವಮಿಯಂದು ಶ್ರೀದೇವರಿಗೆ ವಿಶೇಷ ಅಲಂಕಾರ, ಮಹಾಪೂಜೆ ಹಾಗೂ ಪಲ್ಲಕ್ಕಿ ಉತ್ಸವ ಭಕ್ತರ ಸಮ್ಮುಖದಲ್ಲಿ ನೆರವೇರಿತು.

ಶರಾವತಿ ನದಿ ತೀರದಲ್ಲಿರುವ ವನವಾಸಿ ಸೀತಾರಾಮಲಕ್ಷ್ಮಣ ಮಂದಿರದ ಆವಾರದಲ್ಲಿ ದಿನಾಂಕ 14/04/2019ರಂದು ಆರಂಭಗೊಂಡ ಶರಾವತಿ ಕುಂಭ ಹಾಗೂ ಶರಾವತಿ ಕಲ್ಪವಾಸ ಕಾರ್ಯಕ್ರಮಗಳು ದಿನಾಂಕ 17/04/2019ರ ಮುಂಜಾನೆ ಸಂಪನ್ನಗೊಂಡವು. ವಿವಿಧ ರಾಜ್ಯಗಳಿಂದ ಆಗಮಿಸಿದ್ದ ಸಾಧು–ಸಂತರು ಹಾಗೂ ಭಕ್ತಾದಿಗಳು ಶುಭ ಮುಹೂರ್ತಗಳಲ್ಲಿ ಪುಣ್ಯಸ್ನಾನ ಮಾಡಿ ಪುನೀತಗೊಂಡರು.

ದಿನಾಂಕ 18/04/2019ರ ಸಂಜೆ ಶ್ರೀದೇವರ ಪುಷ್ಪರಥೋತ್ಸವ ಭಕ್ತಿ–ಭಾವದಿಂದ ನೆರವೇರಿತು. ದಿನಾಂಕ 19/04/2019ರ ಹನುಮ ಜಯಂತಿಯಂದು ಹೋಮ ಹವನಾದಿಗಳ ಪೂರ್ಣಾಹುತಿಯೊಂದಿಗೆ ಶ್ರೀದೇವರ ಬ್ರಹ್ಮರಥೋತ್ಸವ ಸಹಸ್ರಾರು ಭಕ್ತಾದಿಗಳ ಸಮ್ಮುಖದಲ್ಲಿ ಅದ್ಧೂರಿಯಾಗಿ ನೆರವೇರಿತು. ಹಲವಾರು ಜಾನಪದ ಕಲಾ ತಂಡಗಳು ರಥೋತ್ಸವದಲ್ಲಿ ಪಾಲ್ಗೊಂಡಿದ್ದವು. ಸಂಜೆ ನಡೆದ ಶ್ರೀನಿವಾಸ ಕಲ್ಯಾಣೋತ್ಸವ ಕಾರ್ಯಕ್ರಮವನ್ನು ಕಂಡು ನೆರೆದ ಭಕ್ತರು ಕಣ್ಮನ ತುಂಬಿಕೊಂಡರು.

ರಾಮನವಮಿಯಿಂದ ಹನುಮ ಜಯಂತಿಯವರೆಗೆ ಪ್ರತಿದಿನ ವಿವಿಧ ಭಜನಾ ಮಂಡಳಿಗಳಿಂದ ನಿರಂತರ ಭಜನಾ ಸೇವೆ ನಡೆಯಿತು. ಭಕ್ತಾದಿಗಳೆಲ್ಲರೂ ವಿವಿಧ ಸೇವೆಗಳಲ್ಲಿ ಪಾಲ್ಗೊಂಡು ಶ್ರೀ ದೇವರ ಕೃಪೆಗೆ ಪಾತ್ರರಾದರು.

ಸುಂದರಕಾಂಡದ ಸೌಂದರ್ಯ

ಲೇ॥ ರಾಮಕೃಷ್ಣ ಎನ್. ಹೆಗಡೆ

# ಶ್ರೀ ವೀರಾಂಜನೇಯ

ಶ್ರೀರಾಮನಿಗೆ ಹನುಮಂತನು ಎಲ್ಲಾ ವಿಚಾರಗಳನ್ನು ತಿಳಿಸಿ ಸೀತೆಯು ಸುರಕ್ಷಿತವಾಗಿರುವ ಕುರಿತು ತಿಳಿಸುತ್ತಾನೆ. ಇದನ್ನೆಲ್ಲಾ ಹನುಮಂತನ ಮೂಲಕ ತಿಳಿದ ಶ್ರೀರಾಮನು ಮತ್ತೆ ಮತ್ತೆ ಏನಾದರೂ ವಿಷಯಗಳಿವೆಯೋ? ಎಂದು ತಿಳಿಯಲು ಬಯಸುತ್ತಾನೆ. ಹಾಗೆಯೇ ಸೀತೆಯು ಮತ್ತೇನು ಹೇಳಿದಳು? ಎಂದು ಕೇಳುತ್ತಾನೆ. ಆಗ ಹನುಮಂತನು ಸೀತೆಯು ಹೇಳಿರುವ ಇನ್ನೊಂದು ವಿಚಾರವನ್ನು ಶ್ರೀರಾಮನ ಮುಂದೆ ನಿವೇದನೆ ಮಾಡುತ್ತಾನೆ. ಹೇ ರಾಘವಾ! ನಿನ್ನ ಸಲುವಾಗಿಯೇ ಆ ದಿವ್ಯವಾಗಿರುವ ಮಣಿಯನ್ನು ಪಡೆದು, ಪೂಜ್ಯಳಾದ ಆ ದೇವಿಗೆ ಸಾಷ್ಟಾಂಗ ನಮಸ್ಕಾರವನ್ನು ಮಾಡಿ ಹೊರಡುವುದಕ್ಕೆ ಸಿದ್ಧವಾದಾಗ ಹೀಗೆ ಹೇಳಿದಳೆಂಬ ಮತ್ತೊಂದು ವಿಚಾರವಿದೆ. ಆ ಮಾತುಗಳನ್ನು ಹೇಳುವಾಗ ಅವಳ ಕಣ್ಣುಗಳಲ್ಲಿ ನೀರು ತುಂಬಿದ್ದವು. ಕಣ್ಣೀರು ಸುರಿಯುತ್ತಿದ್ದರಿಂದ ಅವಳ ಮಾತುಗಳು ಗದ್ಗದವಾಗಿದ್ದವು. ಮಹಾಬಲಶಾಲಿಯಾಗಿರುವ ಮತ್ತು ಭುಜಬಲ ಸಂಪನ್ನನಾಗಿರುವ ಆ ಶ್ರೀರಾಮನನ್ನು ಸಂದರ್ಶಿಸುತ್ತಿರುವ ನೀನೇ ಭಾಗ್ಯವಂತನು. ನನಗೆ ಆ ಭಾಗ್ಯವಿಲ್ಲ, ಎನ್ನುತ್ತಾ ತುಂಬಾ ನೊಂದುಕೊಂಡಳು.

ಅಶ್ರುಪೂರ್ಣಮುಖೀ ದೀನಾ ಬಾಷ್ಪಸಂದಿಗ್ಧ ಭಾಷಿಣೀ।
ಮಮೋತ್ಪತನ ಸಂಭ್ರಾಂತಾ ಶೋಕವೇಗ ಸಮಾಹತಾ॥

ಹೀಗೆ, ಸೀತೆಯ ಮನೋವೇದನೆಯನ್ನು ಇಲ್ಲಿ ಚಿತ್ರಿಸಲಾಗಿದೆ. ಈ ಮನೋವೇದನೆಯು ಸಹಜವಾದರೂ ಕೂಡ ಸಾಂದರ್ಭಿಕವಾಗಿ ಕವಿಯು ಇಲ್ಲಿ ಕರುಣಾರಸಪೂರಕವಾಗಿ ವರ್ಣಿಸಿದ್ದಾನೆ.

ಸೀತಾಮಾತೆಯ ಮನಸ್ಸಿನ ಅಭಿಲಾಷೆಯೆಂದರೆ ಶ್ರೀರಾಮನನ್ನು ಕಾಣುವುದಾಗಿತ್ತು. ಅದಕ್ಕಾಗಿ ಅವಳು ಹಂಬಲಿಸುತ್ತಿದ್ದಳು. ತಾನೂ ಶೀಘ್ರವಾಗಿ ಬರುವ ಆತುರದಲ್ಲಿದ್ದಳು. ಇವೆಲ್ಲವೂ ಅವಳ ಮಾತುಗಳಿಂದಲೇ ವ್ಯಕ್ತವಾಗುತ್ತಿದ್ದವು. ಇದನ್ನೆಲ್ಲಾ ತಿಳಿದ ಹನುಮಂತನು ಅವಳಲ್ಲಿ ಹೀಗೆ ಹೇಳಿದನು,

ಎಲೈ! ಜಾನಕೀ, ನನ್ನ ಬೆನ್ನ ಮೇಲೆ ಕುಳಿತುಕೋ ನಿನ್ನನ್ನು ವೇಗವಾಗಿ ಶ್ರೀರಾಮನನ್ನು ಸಂದರ್ಶಿಸುವಂತೆ ಮಾಡುತ್ತೇನೆಂದು ಹೇಳುತ್ತಾನೆ. ಆದರೆ ಆಗ ಸೀತಾಮಾತೆಯು ನಾನು ನಿನ್ನ ಬೆನ್ನಮೇಲೆ ಕುಳಿತು ಬರುವುದು ಶ್ರೀರಾಮನ ಇಚ್ಛೆಯಲ್ಲ. ಅದರ ಬದಲಾಗಿ ಶ್ರೀರಾಮನು ಲಂಕೆಗೆ ಬಂದು ದುಷ್ಟನಾದ ರಾವಣನನ್ನು ಸಂಹಾರಮಾಡಿ ಲೋಕಕಲ್ಯಾಣ ಮಾಡುವುದೇ ಸರಿ. ನಂತರ ಶ್ರೀರಾಮನ ಜೊತೆಗೇ ನಾನು ಮರಳುತ್ತೇನೆಂಬ ವಿಚಾರವನ್ನು ಹೇಳುತ್ತಾಳೆ. ಹಾಗೆಯೇ ಶ್ರೀರಾಮಲಕ್ಷ್ಮಣರ ಕ್ಷೇಮಸಮಾಚಾರವನ್ನೂ ,ಸುಗ್ರೀವ ಹಾಗೂ ಅವನ ಅಮಾತ್ಯರ ಕ್ಷೇಮ ಸಮಾಚಾರವನ್ನು ನಾನು ಕೇಳಿರುವೆನೆಂದು ತಿಳಿಸು ಎನ್ನುವಮಾತನ್ನು ಹೇಳುತ್ತಾಳೆ. ಆಗ ಶ್ರೀರಾಮನೇ ನನ್ನನ್ನು ಈ ದುಃಖಸಾಗರದಿಂದ ಬೇಗನೆ ಪಾರುಮಾಡುತ್ತಾನೆ ಎಂದು ಹೇಳಿ , ನನ್ನ ಪ್ರಯಾಣಕ್ಕೆ ಹೀಗೆ ಶುಭಕೋರಿದಳೆಂದು ಹೇಳುತ್ತಾನೆ.

ಇಮಂ ಚತೀವ್ರಂ ಮಮ ಶೋಕವೇಗಂ
ರಕ್ಷೋಭಿರೇಭಿಃ ಪರಿಭರ್ತ್ಸನಂ ಚ।
ಬ್ರೂಯಾಸ್ತು ರಾಮಸ್ಯ ಗತಃ ಸಮೀಪಂ
ಶಿವಶ್ಚ ತೇಧ್ವಾಸ್ತು ಹರಿಪ್ರವೀರ॥

ಇಲ್ಲಿ ಅನುಭವಿಸುತ್ತಿರುವ ದುಃಖವನ್ನೂ, ರಾಕ್ಷಸರು ನೀಡುತ್ತಿರುವ ತೊಂದರೆಯನ್ನೂ ಶ್ರೀರಾಮನ ಸಮೀಪದಲ್ಲಿ ತಿಳಿಸು ನಿನ್ನ ಪ್ರಯಾಣವೆನ್ನುವುದು ಮಂಗಳವಾಗಲಿ ಎಂದು ಪ್ರಯಾಣಕ್ಕೆ ಹೀಗೆ ಶುಭಕೋರಿದಳೆಂದು ಹೇಳುತ್ತಾನೆ.

ಮುಂದುವರಿಯುವುದು................

ವರದಿ

# ಸಂಸ್ಕೃತಿ ಕುಂಭ ಮಲೆನಾಡ ಉತ್ಸವ – 2019

ಈ ನಾಡಿನಲ್ಲಿ ಸಂಸ್ಕೃತ–ಸಂಸ್ಕೃತಿಯ ತುಡಿತ ಮಿಡಿತ ಜನರ ಜೀವನದಲ್ಲಿ ಹಾಸುಹೊಕ್ಕಾಗಿ ತುಂಬಿದೆ. ಸಾಂಸ್ಕೃತಿಕ ಸಂಪತ್ತನ್ನು ಉಳಿಸಬೇಕು, ಬೆಳೆಸಬೇಕು ಎನ್ನುವ ಮಹಾಸಂಕಲ್ಪ ಪರಮಪೂಜ್ಯ ಮಾರುತಿ ಗುರೂಜಿಯವರದ್ದು. ಕಲೆಯ ಅನೇಕ ಪ್ರಕಾರಗಳು ಸಾಂಸ್ಕೃತಿಕ ಚಿಂತನೆಯ ಅನೇಕ ಮುಖಗಳು ಬಂಗಾರಮಕ್ಕಿಯಲ್ಲಿ ಪ್ರತಿ ವರ್ಷ ಅನಾವರಣಗೊಂಡು ತನ್ನಲ್ಲಿರುವ ಅಂತಃಶಕ್ತಿಯನ್ನು ಪ್ರೇಕ್ಷಕರ ಹೃದಯಕ್ಕೆ ತಲುಪಿಸುವ ಮಹಾನ ಕಾರ್ಯ ನಿರಂತರವಾಗಿ ನಡೆಯುತ್ತಾ ಬಂದಿದೆ. ಸರ್ವೇ ಜನಾಃ ಸುಖಿನೋ ಭವಂತು ಎನ್ನುವ ಮಹಾಸಂಕಲ್ಪದಡಿಯಲ್ಲಿ ಧಾರ್ಮಿಕ ಕಾರ್ಯಕ್ರಮಗಳು ಒತಪ್ರೋತವಾಗಿ ನಡೆದು ದೈವಾನುಗ್ರಹದ ಮಹಾಶಕ್ತಿಕೇಂದ್ರವಾಗಿ ಹೊರಹೊಮ್ಮಿದೆ. ಸಂಪನ್ನಗೊಂಡ ಎಲ್ಲಾ ಕ್ರಿಯಾಚಟುವಟಿಕೆಗಳ ಸಂಕ್ಷಿಪ್ತ ವರದಿ ಇಲ್ಲಿದೆ.



ಸುಂದರ್ ಬನ್ಸ್ ಹುಲಿ ಸಂರಕ್ಷಣಾಧಾಮ – ಪಶ್ಚಿಮ ಬಂಗಾಳ

ಶ್ರೀಕ್ಷೇತ್ರ ಬಂಗಾರಮಕ್ಕಿಯಲ್ಲಿ ಸಿಲೆಕ್ಟ್ ಫೌಂಡೇಶನ್(ರಿ.), ಬಂಗಾರಮಕ್ಕಿ ಆಯೋಜಿಸಿದ್ದ ಐದು ದಿನಗಳ ಸಾಂಸ್ಕೃತಿಕ ಕಾರ್ಯಕ್ರಮ 'ಸಂಸ್ಕೃತಿ ಕುಂಭ ಮಲೆನಾಡ ಉತ್ಸವ–2019' ದ ಉದ್ಘಾಟನಾ ಸಮಾರಂಭ ದಿನಾಂಕ 14/04/2019ರ ಸಂಜೆ ನೆರವೇರಿತು. ಖ್ಯಾತ ನಟ ಶ್ರೀ ಸುಂದರ್ ರಾಜ್ ಕಾರ್ಯಕ್ರಮವನ್ನು ದೀಪ ಬೆಳಗಿಸಿ ಉದ್ಘಾಟಿಸಿದರು. ಇದೇ ಸಂದರ್ಭದಲ್ಲಿ ಶ್ರೀ ವೆಂಕಟಗಿರಿ ಹಾಗೂ ಶ್ರೀ ವನರಾಗಶರ್ಮ ಅವರಿಗೆ 'ಶ್ರೀ ವೀರಾಂಜನೇಯ ಜಾನಪದಶ್ರೀ' ಹಾಗೂ ಶ್ರೀ ಎಮ್. ಎನ್. ಪ್ರತಾಪ್ ಅವರಿಗೆ 'ಶ್ರೀ ವೀರಾಂಜನೇಯ ಸೃಜನಶ್ರೀ' ಪ್ರಶಸ್ತಿ ಪ್ರದಾನ ಮಾಡಲಾಯಿತು. ಶ್ರೀಕ್ಷೇತ್ರದ ಧರ್ಮಾಧಿಕಾರಿಗಳು ಹಾಗೂ ಸಿಲೆಕ್ಟ್ ಫೌಂಡೇಶನ್‌ನ ಅಧ್ಯಕ್ಷರೂ ಆಗಿರುವ ಪರಮಪೂಜ್ಯ ಶ್ರೀ ಮಾರುತಿ ಗುರೂಜಿಯವರು ಆಶೀರ್ವಚನ ನೀಡಿದರು. ಜಿಲ್ಲೆಯ ಹಿರಿಯ ಪತ್ರಕರ್ತರು ಹಾಗೂ ಇನ್ನಿತರ ಗಣ್ಯರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ದಿನಾಂಕ 14/04/2019 ರಿಂದ 18/04/2019ರ ವರೆಗೆ ಪ್ರತಿ ದಿನ ವಿದ್ಯಾರ್ಥಿಗಳಿಂದ ಸಂಗೀತ ಕಾರ್ಯಕ್ರಮ ನಡೆಯಿತು, ಇದಲ್ಲದೆ ಕೀರ್ತನೆ ಹಾಗೂ ರಾಜ್ಯದ ವಿವಿಧ ಜಾನಪದ ಕಲಾ ತಂಡಗಳಿಂದ ನಡೆದ ಭಜನಾ ಲಹರಿ, ಮಹಿಳಾ ಡೊಳ್ಳು ಕುಣಿತ, ಸಿದ್ದಿ ನೃತ್ಯ, ಮಹಿಳಾ ವೀರಗಾಸೆ, ಪಟ ಕುಣಿತ, ಲಂಬಾಣಿ ನೃತ್ಯ, ಭಕ್ತಿ ಸಂಗೀತ, ಕರ್ನಾಟಕ ದರ್ಶನ, ತಮಟೆ ವಾದನ, ಚಂಡೆ ವಾದನ, ಸುಗ್ಗಿ ಕುಣಿತ, ಜನಪದ ಸಂಗೀತ ಹಾಗೂ ಯಕ್ಷಗಾನ ಕಾರ್ಯಕ್ರಮಗಳು ಕಲಾಭಿಮಾನಿಗಳ ಮನ ರಂಜಿಸಿದವು.

ಮಲೆನಾಡ ಉತ್ಸವದ ಅಂಗವಾಗಿ ದಿನಾಂಕ 18/04/2019ರಂದು ಭಕ್ತಾದಿಗಳಿಗೆ ಹಾಗೂ ಊರನಾಗರಿಕರಿಗೆ ಕ್ರೀಡೋತ್ಸವವನ್ನು ಹಮ್ಮಿಕೊಳ್ಳಲಾಗಿತ್ತು. ದಿನಾಂಕ 19/04/2019ರ ಬೆಳಿಗ್ಗೆಯಿಂದ ಮಧ್ಯಾಹ್ನದ ವರೆಗೆ ಬೃಹತ್ ವೈದ್ಯಕೀಯ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿತ್ತು. ದೂರದೂರದಿಂದ ಬಂದ ಭಕ್ತಾದಿಗಳು ಹಾಗೂ ಊರನಾಗರಿಕರು ಇವುಗಳ ಸದುಪಯೋಗ ಪಡೆದುಕೊಂಡರು.

ದಿನಾಂಕ 18/04/2019ರ ಸಂಜೆ ಕಾರ್ಯಕ್ರಮದ ಸಮಾರೋಪ ಸಮಾರಂಭ ನಡೆಯಿತು. ವಿವಿಧ ಕ್ಷೇತ್ರದ ಗಣ್ಯರು ಹಾಗೂ ಪತ್ರಕರ್ತರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಪ.ಪೂ. ಶ್ರೀ ಮಾರುತಿ ಗುರೂಜಿಯವರು ಕ್ರೀಡೋತ್ಸವದ ಸ್ಪರ್ಧೆಗಳ ವಿಜೇತರಿಗೆ ಪ್ರಶಸ್ತಿ ಪತ್ರ ಹಾಗೂ ಬಹುಮಾನಗಳನ್ನು ವಿತರಿಸಿ, ನೆರೆದ ಭಕ್ತರಿಗೆ ಆಶೀರ್ವಚನ ನೀಡಿದರು.

# ಔಷಧೀಯ ಸಸ್ಯ ಸಂಪತ್ತು

**ಆನೆಮುಂಗು** ಲೇ : ಶ್ರೀ ಪಿ. ಎಸ್. ವೆಂಕಟರಾವ್ ದೈತೋಟ.

ವಾತಶಮನಕ್ಕೆ

**ಹೆಸರುಗಳು:**

**ಕನ್ನಡ:** ಆನೆಮುಂಗು ಮರ, ಆನೆಂಗಿ ಮರ ಟುಂಟುಕ, ಅಳಂಗಿ, ಬುನಿಪಾಲೆ, ತಿಗಡು ಮರ, ಆನೆಕೋಡು, ಚಕ್ರಪಾಲೆ ಮರ; **ತುಳು:** ಆನೆಗಿಂತ ಮರೊ; **ಮಲಯಾಳಂ:** ಪಲಕಪ್ಪಯ್ಯಾನೆ; **ತಮಿಳು:** ಪೆರುವಾಗೈ; **ಮರಾಠಿ:** ಟೆಂಟೂ; **ತೆಲುಗು:** ಪೆದ್ದ ಮನುಗಾ; **ಹಿಂದಿ:** ಅರ್‌ಲೂ; **ಸಂಸ್ಕೃತ:** ಸ್ಯೊನಾಕ; **ಇಂಗ್ಲಿಷ್:** Indian trumpt flower tree; **ಸಸ್ಯಶಾಸ್ತ್ರೀಯ:** *Oroxylum indicum* (L.) Kurz, **ಕುಟುಂಬ:** Bignoniaceae; **ಉಪಯೋಗ:** ಎಲ್ಲಾ ಅಂಗಭಾಗಗಳು ಪ್ರತ್ಯೇಕವಾಗಿ.



**ಮೂಲಿಕಾ ಪರಿಚಯ**

ಮಣ್ಣು ನೀರು ಪರಿಸರ ಅನುಕೂಲವಾಗಿದ್ದರೆ 4 ಅಡಿ ಸುತ್ತಳತೆಯ ಕಾಂಡದೊಂದಿಗೆ 75–80 ಅಡಿ ಬೆಳೆಯಬಲ್ಲ ಮರ. ಸಸ್ಯಶಾಸ್ತ್ರದ ತತ್ವದಂತೆ ಭಾರತದಲ್ಲಿ ಅತೀ ದೊಡ್ಡ ಎಲೆ ಹೊಂದಿದ ಮರ. ಪತ್ರೋಪಪತ್ರಗಳಿಂದ ಕೂಡಿ 8 ಅಡಿ ಗಾತ್ರಕ್ಕೆ ಬೆಳೆಯುವ ಎಲೆ, ಬಲರಹಿತ ಅಡ್ಡತಿಡ್ಡ ಬೆಳೆಯುವ ರಟ್ಟೆ ಗಾತ್ರದ ರೆಂಬೆಗಳು, ತುದಿಯಲ್ಲಿ ಎಲೆಸಮೂಹ. ಒಂದು ಒಂದೂವರೆ ಅಡಿ ಹೂ ಕದಿರು. ಕಂದು, ನೇರಳೆ ಬಣ್ಣದ ಚಿರುಟು ಮಾಂಸಲ ಘಾಟುಳ್ಳ ದೊಡ್ಡ ಹೂಗಳು. ಬಾವಲಿಗಳಿಂದ ಪರಾಗ ಸಂಪರ್ಕ ಹೊಂದುವುವು. ಎಮ್ಮೆ ಕೋಡಿನಂತೆ ಅಂಗೈ ಅಗಲ 3 ಅಡಿ ಮೀರಿದ ಉದ್ದದ ಚಪ್ಪಟೆಕೋಡುಗಳು ಬೆಳೆದಂತೆ ಆನೆ ಸೊಂಡಿಲಿನಾಕಾರ ತಳೆಯುತ್ತವೆ. ಕಂದು ಕೋಡುಗಳು ಸೀಳಿದ್ದು ಅಸಂಖ್ಯ ಪತಂಗಗಳಂತೆ ತೋರುವ ನಸು ಬಿಳಿ ತೆಳು ಬೀಜಗಳು ಗಾಳಿಯಲ್ಲಿ ಪ್ರಸಾರಗೊಳ್ಳುತ್ತವೆ. ಎಳೆ ಕೋಡು ಚಿಗುರು, ತೊಗಟೆಗಳು ಆಹಾರಯೋಗ್ಯ. ಆಯುರ್ವೇದದ ಪ್ರಸಿದ್ಧ ಯೋಗ 'ದಶಮೂಲ'ಗಳಲ್ಲೊಂದು. ಅತಿಸಾರ,

ವಾತಗಳಲ್ಲಿ ಏಕಮೂಲಿಕೆಯಾಗಿಯೇ ಪ್ರಸಿದ್ಧ. ಬೇರಿನ ತೊಗಟೆ, ಮರದ ತೊಗಟೆಗಳು ಜೀರ್ಣಕಾರಿ. ಪೋಷಕ, ಜಠರಕರುಳ ಅಕ್ರಮ ನಿವಾರಕ. ವಾತ ಚಿಕಿತ್ಸೆಯಲ್ಲಿ ಅವಶ್ಯ ದ್ರವ್ಯ. ಕಷಾಯ ಸ್ನಾನವೂ ವಾತವನ್ನು ಶಮನಗೊಳಿಸುವುದು. ಜ್ವರ, ಸನ್ನಿಪಾತ, ಪ್ರಸೂತಿ ಕ್ಲೇಶಗಳಲ್ಲಿ ಬಳಕೆ. ಚಕ್ಕೆ ಎಲೆಗಳ ರಸ, ಕಷಾಯಗಳು ನಂಜುಹರ. ಚರ್ಮರೋಗ ಯೋನಿ ವ್ಯಾಪತ್‌ಗಳಲ್ಲಿ ಪರಿಣಾಮಕಾರಿ. ಶ್ವಾಸರೋಗ ಕೆಮ್ಮುಗಳಿಗೂ ಮದ್ದು. ಇಡೀ ಪಶ್ಚಿಮ ಘಟ್ಟದಲ್ಲಿ ಸಾಕಷ್ಟು ಕಾಣಿಸುವುದು. ಭಾರತ, ಶ್ರೀಲಂಕಾ, ಮಲಯಾಸುಮಾತ್ರಾಗಳಲ್ಲಿ ಮಾತ್ರ ಬೆಳೆಯುವುದು. ಈ ಜಾತಿಯಲ್ಲಿ ಇದೊಂದೇ ಪ್ರಭೇದ. ಸದ್ಯ ನಿರುಪಯುಕ್ತ ಮರವೆನಿಸಿ ನಾಶವಾಗುತ್ತಿದೆ. ಸುಲಭದಲ್ಲಿ ಬೆಳೆಯಬಹುದಾದ ಮರ.

**ಉಪಯೋಗಗಳು**

**ಬೆಂಕಿಯಿಂದಾಗುವ ಹುಣ್ಣುಗಳಿಗೆ:** ಆನೆಮುಮಗು ಮರದ ಚಕ್ಕೆಯನ್ನು ಮೊಸರಲ್ಲಿ ಅರೆದು ಹಪ್ಪವಾಗಿ ಲೇಪನ ಹಾಕುವುದು. ಆಗಾಗ ಹಾಕುತ್ತಿರಬೇಕು. 3–6 ದಿನ.

**ಆಗಾಗ ಬರುವ ಬಾಯಿ ಹುಣ್ಣಿಗೆ:** ಆನೆಮುಂಗು ಚಕ್ಕೆ 25 ಗ್ರಾಂ ಜಜ್ಜಿ ಹಾಕಿ 4 ಲೋಟ – 1 ಲೋಟ ಕಷಾಯ ತಯಾರಿಸಿ ದಿನಕ್ಕೆ 3 ಬಾರಿಯಂತೆ ಸೇವನೆ (2ಔನ್ಸಿನಂತೆ). 3–6 ದಿನ.

# ಪದಬಂಧ–44

–ಶ್ರೀ ಗುರು ದಾಸ.

**ಎಡದಿಂದ ಬಲಕ್ಕೆ :–**

1. ಬರಿದಾಗದಂತಹ ನಂಬಿಕೆ –4
3. ದೇವತೆಗಳಿಗೆ ಅಮರತ್ವವನ್ನು ನೀಡುವ ಪಾನೀಯ–3
5. ಧರಿಸಿಕೊಳ್ಳುವುದು ತಿರುಗಿದೆ –3
6. ತಿದ್ದುಪಡಿ ಮಾಡಿಕೊಂಡಿರುವುದು ತಿರುಗಿದೆ –4
8. ಕಪ್ಪು ಬಣ್ಣದ ವ್ಯಕ್ತಿಯನ್ನು ಕರೆದದ್ದು ತಿರುಗಿದೆ –3
11. ಕವಿ ತಿರುಗಿ ವ್ಯಂಗ್ಯಭರಿತನಾಗಿದ್ದಾನೆ –3
13. ಶಿಸ್ತಿಗೆ ಹೆಸರಾದ ಸೈನಿಕ –3
14. ಇವರು ಭಾಜನರು –3
15. ಎತ್ತು ಕೊಂಬಿನಿಂದ ಹಲ್ಲೆ ಮಾಡಿದೆ –2
17. ಚಿತ್ರಬರೆದು ತೂಗಿಬಿಟ್ಟ ಬಟ್ಟೆ –2
18. ತಂದುಹಾಕುವುದಲ್ಲ ಇದು ಮರ –2
19. ಸಿಂಗರಿಸಿ ನೇಯ್ದ ಹೆಣ್ಣಿನ ಕೂದಲು –2
20. ಸ್ವತಂತ್ರವಾಗಿ ಉಚ್ಚರಿಸಲು ಬರುವ ಅಕ್ಷರಗಳು –2



**(ಉತ್ತರ ಮುಂದಿನ ಸಂಚಿಕೆಯಲ್ಲಿ)**

**ಮೇಲಿಂದ ಕೆಳಕ್ಕೆ :–**

1. ತಿಗಣೆಯಂತೆ ಕಾಡುವ ಕಷ್ಟ ಕೋಟಲೆ –3
2. ಸ್ಪರ್ಧೆಯಲ್ಲಿ ಪೈಪೋಟಿ ನೀಡುವುದು –4
3. ಭಯವಿನ್ನು ದೂರಾಗಿದೆ –3
4. ತುಂಬಾ ಉತ್ಸುಕತೆಯಿಂದ ಕೂಡಿದೆ –3
7. ಕಾಪಾಡುವವನಿವನು –3
9. ಬೆಲೆಯಲ್ಲಿ ಕಡಿತಗೊಳಿಸಿದೆ –4
10. ಪರಿಸರ ಮತ್ತು ಅರಣ್ಯ ಮಂತ್ರಾಲಯಕ್ಕೆ ಸಂಬಂಧಿಸಿದ ಭಾರತ ಸರ್ಕಾರದ ರಾಷ್ಟ್ರೀಯ ಶಾಲಾ ಕಾರ್ಯಕ್ರಮ –5
11. ಅಧಿಕವಾಗಿ ಅಸ್ವಾಭಾವಿಕವಾಗಿರುವುದು –4
12. ಅಂಚೆಯ ಪತ್ರಗಳು –3
16. ಸಂಕ್ಷಿಪ್ತವಾಗಿರುವ ವಿಷಯ –3

ಪದಬಂಧ–43ರ ಉತ್ತರ

**ಎಡದಿಂದ ಬಲಕ್ಕೆ:–** 1.ಯುಗಾದಿ, 3.ಮತದಾನ, 5.ವಂದನೆ, 6.ಗೆಳೆತನ, 8.ರಜತ, 10.ಹೊಸಹರುಷ, 13.ದಕ(ಕದ), 15.ಅಂತರಿಕ್ಷ, 16.ವಿಕ್ರಮಾದಿತ್ಯ. ***** **ಮೇಲಿಂದ ಕೆಳಕ್ಕೆ:–** 1.ಯುಧಿಷ್ಠಿರ, 2.ದಿವಂಗತ, 3.ಮನೆಗೆಲಸ, 4.ನಯನ, 7.ತವರು, 9.ಜನಕ, 10.ಹೊಲ, 11.ಹರಿತ, 12.ಷಡಕ್ಷರಿ, 13.ದನೋವಿ(ವಿನೋದ), 14.ನ್ಯಮಾ(ಮಾನ್ಯ), 15.ಅಂತ್ಯ.